ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 18 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 32 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು ಮಿತ್ರ

ಮೈಸೂರು ಹೊರವಲಯದ ನಾಡನಹಳ್ಳಿ ಬಳಿ ಸಂಗೀತ ವಿವಿಗೆ ಸ್ವಂತ ಕಟ್ಟಡ ಭಾಗ್ಯ

● ಮುಡಾದಿಂದ 5 ಎಕರೆ ಭೂಮಿ ಮಂಜೂರು

● ಲೋಕಸಭಾ ಚುನಾವಣಾ ನೀತಿಸಂಹಿತೆ ಅಂತ್ಯಗೊಂಡ ನಂತರ ಕಟ್ಟಡದ ರೂಪು ರೇಷೆ ನಿರ್ಧಾರ: ವಿವಿಕುಲಪತಿ ಪ್ರೊ.ನಾಗೇಶ್ ಬೆಟ್ಟಕೋಟೆ ಮಾಹಿತಿ

ಮೈಸೂರು,ಮೇ 17(ಎಂಟಿವೈ)– ಮೈಸೂರು–ತಿ.ನರಸೀಪುರ ಹೆದ್ದಾರಿಯ ನಾಡನಹಳ್ಳಿ ಬಳಿ ಕರ್ನಾಟಕ ಸಂಗೀತ ವಿಶ್ವವಿದ್ಯಾನಿಲಯಕ್ಕೆ ಮುಡಾದಿಂದ 5.20 ಎಕರೆ ಭೂಮಿ ಮಂಜೂರಾಗಿದ್ದು, ಲೋಕಸಭಾ ಚುನಾವಣಾ ನೀತಿ ಸಂಹಿತೆ ಅಂತ್ಯಗೊಂಡ ನಂತರ ಕಟ್ಟಡ ನಿರ್ಮಾಣದ ರೂಪುರೇಷೆ ನಿರ್ಧರಿಸಲಾಗುವುದು ಎಂದು ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ನಾಗೇಶ್ ಬೆಟ್ಟಕೋಟೆ ತಿಳಿಸಿದ್ದಾರೆ.

ಮುಕ್ತ ವಿಶ್ವವಿದ್ಯಾನಿಲಯದ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಗೀತ ವಿವಿಗೆ ಶಾಶ್ವತ ಕಟ್ಟಡ ಇಲ್ಲ. ಈ ಕೊರತೆ ನೀಗಿಸುವ ನಿಟ್ಟಿನಲ್ಲಿ ಹಲವು ವರ್ಷಗಳಿಂದ ಪ್ರಯತ್ನ ನಡೆದಿತ್ತು. ಇದೀಗ ಮೈಸೂರು–ತಿ.ನರಸೀಪುರ ಹೆದ್ದಾರಿ ಹೊಂದಿಕೊಂಡಂತೆ ಇರುವ 5.20 ಎಕರೆ ಭೂಮಿಯನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ನೀಡಿದೆ. ಈ ಸ್ಥಳ ಸಂಗೀತ ವಿವಿಗೆ ಪ್ರಶಾಂತವಾಗಿದೆ. ಕಲೆಯನ್ನು ಸಂರಕ್ಷಿಸಿ, ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಂಗೀತ ವಿವಿ ಕಾರ್ಯನಿರ್ವಹಿಸಲಿದೆ. ಕಲಾ ಪ್ರಕಾರ ಬಿಂಬಿಸುವಂತೆ ಸಂಗೀತ ವಿವಿ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಹಾಗೂ ಡಿಪಿಆರ್ ತಯಾರಿಸಲಾಗುತ್ತದೆ. ನೀತಿ ಸಂಹಿತೆ ಅಂತ್ಯಗೊಂಡ ನಂತರ ಸಂಗೀತ ವಿವಿಯ ಕಟ್ಟಡದ ರೂಪುರೇಷೆ ಸಿದ್ಧಗೊಳ್ಳಲಿದೆ ಎಂದು ತಿಳಿಸಿದರು.

ಸಂಗೀತ ವಿಶ್ವವಿದ್ಯಾನಿಲಯವು ರಾಜ್ಯ ವ್ಯಾಪ್ತಿ ಸೇವೆ ಒದಗಿಸುತ್ತಿದೆ. ಸಂಗೀತ ವಿವಿ ಸಂಪನ್ಮೂಲ, ಮೂಲಸೌಕರ್ಯ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಮುಕ್ತ ವಿವಿಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ರಾಜ್ಯದ ವಿವಿಧೆಡೆ ಇರುವ ಮುಕ್ತ ವಿಶ್ವವಿದ್ಯಾಲಯದ ಪ್ರಾದೇಶಿಕ ಕೇಂದ್ರಗಳ ಕಟ್ಟಡ, ಸಂಪನ್ಮೂಲ, ಸೌಲಭ್ಯವನ್ನು ಬಳಕೆ ಮಾಡಿಕೊಳ್ಳಲು ಈ ಒಡಂಬಡಿಕೆ ಸಹಕಾರಿಯಾಗಲಿದೆ. ಇದರಿಂದ ಸಂಗೀತ ವಿವಿ ಮತ್ತು ವಿದ್ಯಾರ್ಥಿಗಳಿಗೂ ಅನುಕೂಲವಾಗಲಿದೆ ಎಂದರು.

ಸಂಗೀತ, ತಾಳವಾದ್ಯ, ನೃತ್ಯಕ್ಕೆ ಸಂಬಂಧಪಟ್ಟ ಜೂನಿಯರ್, ಸೀನಿಯರ್, ಪ್ರೀ ವಿದ್ವತ್, ವಿದ್ವತ್ ಪರೀಕ್ಷೆ ನಡೆಸಲು ಸಿದ್ಧತೆ ಮಾಡಿಕೊಂಡಿದ್ದು, ಅದಕ್ಕಾಗಿ 17 ಸಾವಿರ ವಿದ್ಯಾರ್ಥಿಗಳು ನೋಂದಣಿಯಾಗಿದ್ದಾರೆ. ಈ ಪರೀಕ್ಷೆಗಳನ್ನು ಮುಕ್ತ ವಿವಿ ಕಟ್ಟಡಗಳಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ವಿವಿ ತರಗತಿಗಳು, ತರಬೇತಿಗೂ ಮುಕ್ತ ವಿವಿ ಸೌಲಭ್ಯವನ್ನು ಬಳಕೆ ಮಾಡಿಕೊಳ್ಳಲಾಗುವುದು. ಮುಕ್ತ ವಿವಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವುದರಿಂದ ವಿವಿಧೆಡೆ ವಿದ್ಯಾರ್ಥಿಗಳಿಗೆ ಬೋಧಿಸಲು ಈಗಾಗಲೇ 3650 ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ನಿರ್ಧರಿಸಲಾಗಿದೆ ಎಂದರು.

ಶೈಕ್ಷಣಿಕ ಚಟುವಟಿಕೆ ಅಭಿವೃದ್ಧಿ, ವಿಸ್ತರಣೆಗಾಗಿ ಮುಕ್ತ–ಸಂಗೀತ ವಿವಿ ಒಡಂಬಡಿಕೆ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅತಿಥಿ ಗೃಹದಲ್ಲಿ ಶುಕ್ರವಾರ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಹಾಗೂ ಸಂಗೀತ ವಿವಿ ಕುಲಪತಿ ಡಾ.ನಾಗೇಶ್ ವಿ.ಬೆಟ್ಟಕೋಟೆ ಶೈಕ್ಷಣಿಕ ಒಡಂಬಡಿಕೆಗೆ ಸಹಿ ಹಾಕಿ, ಒಪ್ಪಂದ ಪ್ರಮಾಣ ಪತ್ರವನ್ನು ವಿನಿಮಯ ಮಾಡಿಕೊಂಡರು.

ಮೈಸೂರು, ಮೇ 17(ಎಂಟಿವೈ)– ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಶೈಕ್ಷಣಿಕ ಚಟುವಟಿಕೆ ವಿಸ್ತರಣೆಗಾಗಿ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಈ ಸಾಲಿನ ಶೈಕ್ಷಣಿಕ ವರ್ಷದ ಆರಂಭದೊಳಗೆ ದೆಹಲಿಯ ಜೆಎನ್‌ಯು, ಎನ್‌ಸಿವಿಇಟಿಯೊಂದಿಗೂ ಒಪ್ಪಂದ ಮಾಡಿಕೊಳ್ಳಲು ಮುಂದಾಗಿದೆ.

ಮುಕ್ತ ವಿಶ್ವವಿದ್ಯಾನಿಲಯದ ಅತಿಥಿ ಗೃಹದಲ್ಲಿ ಶುಕ್ರವಾರ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಹಾಗೂ ಸಂಗೀತ ವಿವಿ ಕುಲಪತಿ ಡಾ.ನಾಗೇಶ್ ವಿ.ಬೆಟ್ಟಕೋಟೆ ಶೈಕ್ಷಣಿಕ ಒಡಂಬಡಿಕೆಗೆ ಸಹಿ ಮಾಡಿ ಒಪ್ಪಂದ ಪ್ರಮಾಣ ಪತ್ರವನ್ನು ವಿನಿಮಯ ಮಾಡಿಕೊಂಡರು.

ಶೈಕ್ಷಣಿಕ ಚಟುವಟಿಕೆ ವಿಸ್ತರಿಸಲು ಒಡಂಬಡಿಕೆ ಸಹಕಾರಿ: ಇದೆ ವೇಳೆ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾತನಾಡಿ, ಶೈಕ್ಷಣಿಕ ಕಾರ್ಯಕ್ರಮಗಳ ಅಭಿವೃದ್ಧಿಯನ್ನು ಉತ್ತೇಜಿಸುವ ಗುರಿಯೊಂದಿಗೆ ಸಂಗೀತ ವಿವಿಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಇದರಿಂದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ವಿನಿಮಯ ಸುಲಭಗೊಂಡಂತಾಗಿದೆ. ಮೂಲ ಸೌಕರ್ಯದ ಬಳಕೆಗಾಗಿ ಜಂಟಿ ಕಾರ್ಯಾಗಾರ, ವಿಚಾರಗೋಷ್ಠಿ, ಸಮ್ಮೇಳನವನ್ನು ಆಯೋಜಿಸಲಾಗುತ್ತದೆ.

ಈ ಒಡಂಬಡಿಕೆಯು ವೈವಿಧ್ಯಮಯ ಶೈಕ್ಷಣಿಕ ವಿಭಾಗಗಳನ್ನು ಸಂಯೋಜಿಸಲು ಮತ್ತು ಸಮಗ್ರ ಶಿಕ್ಷಣವನ್ನು ಪ್ರೋತ್ಸಾಹಿಸುವ ಗುರಿ ಹೊಂದಿದೆ. ಅಲ್ಲದೆ, ವಿದೇಶಿ ಭಾಷಾ ಶಿಕ್ಷಣದಲ್ಲಿ ಹೆಸರುಗಳಿಸಿರುವ ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದೊಂದಿಗೆ (ಜೆಎನ್‌ಯು) ಒಡಂಬಡಿಕೆಗೂ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಈ ಸಂಬಂಧ ಈಗಾಗಲೇ ಪೂರ್ವಭಾವಿ ಸಭೆ ನಡೆಸಲಾಗಿದೆ. ಈ ಒಡಂಬಡಿಕೆಗೆ ಜೆಎನ್‌ಯು ತಾತ್ವಿಕವಾಗಿ ಒಪ್ಪಿಗೆ ನೀಡಿದೆ. ಆರಂಭದಲ್ಲಿ ಸ್ಪ್ಯಾನಿಷ್, ಫ್ರೆಂಚ್, ಜರ್ಮನ್ ಭಾಷೆಗಳನ್ನು ಪರಿಚಯಿಸಲಾಗುತ್ತದೆ. 9 ವಿದೇಶಿ ಭಾಷಾ ವಿಷಯಗಳಿಗೆ 6 ತಿಂಗಳ ಸರ್ಟಿಫಿಕೇಟ್ ಕೋರ್ಸ್, ಒಂದು ವರ್ಷದ ಡಿಪ್ಲೊಮಾ ಕೋರ್ಸ್ ಆರಂಭಿಸಲಾಗುತ್ತದೆ. ಮುಂದಿನ ತಿಂಗಳ ಅಂತ್ಯದ ವೇಳೆಗೆ ಎಂಒಯುಗೆ ಸಹಿ ಹಾಕಲಾಗುವುದು. ಇದು ದೂರ ಮತ್ತು ಆನ್‌ಲೈನ್ ಕಲಿಕೆಯ ಮೂಲಕ ಭಾಷಾ ಶಿಕ್ಷಣವನ್ನು ಹೆಚ್ಚಿಸುವ ಮಹತ್ವದ ಒಪ್ಪಂದವಾಗಿದೆ ಎಂದು ತಿಳಿಸಿದರು.

ಮುಕ್ತ ವಿಶ್ವವಿದ್ಯಾಲಯವು ರಾಷ್ಟ್ರೀಯ ವೃತ್ತಿಪರ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ನ್ಯಾಷನಲ್ ಕೌನ್ಸಿಲ್ ಫಾರ್ ಎಜುಕೇಷನ್ ಅಂಡ್ ಟ್ರೈನಿಂಗ್–ಎನ್‌ಸಿವಿಇಟಿ) ಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುತ್ತಿದೆ. ಈ ಒಡಂಬಡಿಕೆ ಪ್ರಕಾರ 5 ಸಾವಿರಕ್ಕೂ ಹೆಚ್ಚು ಕೌಶಲ್ಯ ಅಭಿವೃದ್ಧಿ ಕೋರ್ಸ್ ಆರಂಭಿಸಲು ಅವಕಾಶ ದೊರೆತಂತಾಗುತ್ತದೆ. ಈ ಸಂಸ್ಥೆಯೊಂದಿಗೆ ಈಗಾಗಲೇ ಪೂರ್ವಭಾವಿ ಸಭೆ ನಡೆಸಲಾಗಿದೆ. ಎಂಒಯು ಅಂತಿಮಗೊಳಿಸುವ ಪ್ರಕ್ರಿಯೆಯಲ್ಲಿದೆ. ಈ ಕ್ರಮದಿಂದ ಕೌಶಲ್ಯ ಅಭಿವೃದ್ಧಿ ಕ್ಷೇತ್ರಕ್ಕೆ ಗಣನೀಯವಾಗಿ ಕೊಡುಗೆ ದೊರೆಯಲಿದೆ. ಅಲ್ಲದೆ, ವಿದ್ಯಾರ್ಥಿಗಳಿಗೆ ಮೌಲ್ಯಯುತವಾದ ವೃತ್ತಿಪರ ತರಬೇತಿ ಮತ್ತು ಪ್ರಮಾಣಪತ್ರವೂ ದೊರೆಯಲಿದೆ ಎಂದು ವಿವರಿಸಿದರು. ಈ ಸಂದರ್ಭದಲ್ಲಿ ಮುಕ್ತ ವಿವಿ ಆಡಳಿತಾತ್ಮಕ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ್, ಪರೀಕ್ಷಾಂಗ ಕುಲಸಚಿವ ಹೆಚ್.ವಿಶ್ವನಾಥ್, ಡೀನ್ ಪ್ರೊ. ಲಕ್ಷ್ಮೀ, ಸಂಗೀತ ವಿವಿ ಕುಲಸಚಿವೆ ಕೆ.ಎಸ್.ರೇಖಾ, ಮುಕ್ತ ವಿವಿ ಪತ್ರಿಕೋದ್ಯಮ ವಿಭಾಗದ ಶೈಲೇಶ್ ರಾಜ್ ಅರಸ್ ಇದ್ದರು.

ಇಂದಿರಾಗಾಂಧಿ ಮುಕ್ತ ವಿವಿ ಹೊರತುಪಡಿಸಿರೆ ದೇಶದಲ್ಲೇ ಅಧಿಕ ಕೋರ್ಸ್ ಇರುವುದು ಕರ್ನಾಟಕ ಮುಕ್ತ ವಿವಿಯಲ್ಲಿ

ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾಹಿತಿ

● ಮುಕ್ತ ವಿಶ್ವವಿದ್ಯಾನಿಲಯದಲ್ಲಿ 63 ಸಾವಿರ ವಿದ್ಯಾರ್ಥಿಗಳು ಕಲಿಕೆ ● ಈ ಪ್ರಮಾಣ ಲಕ್ಷ ದಾಟುವ ನಿರೀಕ್ಷೆ

ಮೈಸೂರು,ಮೇ 17(ಎಂಟಿವೈ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಸಾಲಿನಲ್ಲಿ 63 ಸಾವಿರ ವಿದ್ಯಾರ್ಥಿಗಳು ದೂರ ಶಿಕ್ಷಣ ಪಡೆಯುತ್ತಿದ್ದು, ಈ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಒಂದು ಲಕ್ಷ ಗಡಿದಾಟುವ ನಿರೀಕ್ಷೆ ಇದೆ ಎಂದು ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ತಿಳಿಸಿದ್ದಾರೆ.




ಮುಕ್ತ ವಿವಿಯ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನವರಿ ಆವೃತ್ತಿಯಲ್ಲಿ 18 ಸಾವಿರ, ಜುಲೈ ಆವೃತ್ತಿಯಲ್ಲಿ 25 ಸಾವಿರ ಸೇರಿದಂತೆ 2023ರಲ್ಲಿ 43 ಸಾವಿರ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. 2024ರ ಜನವರಿ ಆವೃತ್ತಿಯಲ್ಲಿ 17,808 ವಿದ್ಯಾರ್ಥಿಗಳು ದಾಖಲಾಗಿದ್ದು, ಜುಲೈ ಆವೃತ್ತಿ ಪ್ರವೇಶ ಪ್ರಕ್ರಿಯೆ ಆರಂಭವಾದ ನಂತರ ಮತ್ತಷ್ಟು ವಿದ್ಯಾರ್ಥಿಗಳು ನೋಂದಣಿ ಮಾಡಿಕೊಳ್ಳಲಿದ್ದು, ಅಂತಿಮ ದಿನದ ವೇಳೆ ಮುಕ್ತ ವಿವಿಯಲ್ಲಿ ಪ್ರವೇಶಾತಿ ಪಡೆದು ವಿದ್ಯಾರ್ಥಿಗಳ ಸಂಖ್ಯೆ ಲಕ್ಷ ದಾಟಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ದೂರ ಶಿಕ್ಷಣ ಕಲಿಕೆಯಲ್ಲಿ ದೇಶದಲ್ಲೇ ಅತೀ ಹೆಚ್ಚು ಶೈಕ್ಷಣಿಕ ಕೋರ್ಸ್ ಹೊಂದಿರುವ ಕೀರ್ತಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಹೊಂದಿದೆ. ಪ್ರಸ್ತುತ ಮುಕ್ತ ವಿವಿಯಲ್ಲಿ 55 ಕೋರ್ಸ್‌ಗಳು, 10 ಆನ್‌ಕೋರ್ಸ್‌ಗಳಿವೆ. ದೇಶದಲ್ಲಿ ದೂರ ಶಿಕ್ಷಣ ಕ್ಷೇತ್ರದ 17 ವಿಶ್ವವಿದ್ಯಾಲಯಗಳಿವೆ. ಅವುಗಳಲ್ಲಿ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ಬಿಟ್ಟರೆ ಅತೀ ಹೆಚ್ಚು ಕೋರ್ಸ್ ಇರುವುದು ಕೆಎಸ್‌ಒಯು ಮಾತ್ರ ಎಂದರು.

ರಾಷ್ಟ್ರಪತಿಗಳಿಗೆ ಮನವಿ: ಯುಜಿಸಿ ಮಾನ್ಯತೆ ಇಲ್ಲದೆ ಸಂಕಷ್ಟಕ್ಕೆ ಸಿಲುಕಿರುವ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸುವ ಪ್ರಯತ್ನ ನಿರಂತರವಾಗಿ ನಡೆಸಲಾಗುತ್ತಿದೆ. 2013–14 ಮತ್ತು 2014–15ನೇ ಸಾಲಿನಲ್ಲಿ ಮುಕ್ತ ವಿವಿಯಲ್ಲಿ ನಡೆಸಲಾದ ಕೋರ್ಸ್‌ಗಳಿಗೆ ಯುಜಿಸಿ ಮಾನ್ಯತೆ ಕಲ್ಪಿಸಿಕೊಡುವ ಪ್ರಯತ್ನಗಳು ನಡೆದಿವೆ. ರಾಷ್ಟ್ರಪತಿ, ಉಪರಾಷ್ಟ್ರಪತಿ, ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಸಚಿವಾಲಯಕ್ಕೂ ಪತ್ರ ಬರೆಯಲಾಗಿದೆ. ಇದಕ್ಕೆ ಸ್ಪಂದನೆ ನೀಡಿ ಮಾನ್ಯತೆ ನೀಡಲು ಯುಜಿಸಿಗೂ ನಿರ್ದೇಶನ ನೀಡಲಾಗಿದೆ. ಆದರೆ, ಕೆಲವು ವಿದ್ಯಾರ್ಥಿಗಳು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುವುದರಿಂದ ಸಮಸ್ಯೆ ಬಗೆಹರಿಸಲು ತೊಡಗಿದೆ. ಆದರೂ, ನಾವು ಮಾಡುತ್ತಿರುವ ಪಯತ್ನಕ್ಕೆ ಕೆಲ ಷರತ್ತು ಪೂರೈಸದೆ ಮಾನ್ಯತೆ ನೀಡುವುದಿಲ್ಲ ಎಂದು ಯುಜಿಸಿ ಹೇಳುತ್ತಿದೆ. ಈ ಎರಡು ವರ್ಷದಲ್ಲಿ ಪರೀಕ್ಷೆ ಬರೆದು ಪಾಸ್ ಆಗಿರುವ ಎಲ್ಲ ವಿದ್ಯಾರ್ಥಿಗಳಿಗೆ ಒಂದೇ ಕಂತಿನಲ್ಲಿ ಪರೀಕ್ಷೆ ನಡೆಸಿ ಮಾನ್ಯತೆ ನೀಡುವುದರೊಂದಿಗೆ ನ್ಯಾಯ ಕಲ್ಪಿಸಿಕೊಡಬೇಕು ಎಂದು ಮುಕ್ತ ವಿವಿಯಿಂದ ಕೋರಲಾಗಿದೆ ಎಂದು ತಿಳಿಸಿದರು.

ಇಂದು ದೊಡ್ಡಗೌಡರ ಕಟೌಟ್‌ಗೆ ಪುಷ್ಪವೃಷ್ಟಿ



ಮೈಸೂರು, ಮೇ 17–ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ 92ನೇ ಜನ್ಮದಿನದ ಅಂಗವಾಗಿ ಗೌಡರ ಬೃಹತ್ ಕಟೌಟ್‌ಗೆ ಪುಷ್ಪವೃಷ್ಟಿಗರೆಯುವ ಕಾರ್ಯಕ್ರಮವನ್ನು ಶನಿವಾರ ಹಮ್ಮಿಕೊಳ್ಳಲಾಗಿದೆ. ಕಾರಣಾಂತರಗಳಿಂದ ಜನ್ಮದಿನವನ್ನು ಆಚರಿಸಿಕೊಳ್ಳುತ್ತಿಲ್ಲ, ತಾವು ಇದ್ದಲ್ಲೇ ಹಾರೈಸಿ ಎಂದು ಮಾಜಿ ಪ್ರಧಾನಿ ದೇವೇಗೌಡರು ಮನವಿ ಮಾಡಿರುವ ಹಿನ್ನೆಲೆಯಲ್ಲಿ ಅವರ ಅಭಿಮಾನಿಗಳು ಅದ್ಧೂರಿ ಆಚರಣೆಗೆ ಬದಲಾಗಿ ವಿಶೇಷ ಆವರಣೆಗೆ ಮುಂದಾಗಿದ್ದಾರೆ. ಮೈಸೂರಿನ ಯರಗನಹಳ್ಳಿ ರಿಂಗ್‌ರಸ್ತೆ ದೇವೇಗೌಡ ವೃತ್ತದಲ್ಲಿ ಶನಿವಾರ ಸಂಜೆ 6ಕ್ಕೆ ಗೌಡರ ಬೃಹತ್ ಕಟೌಟ್‌ಗೆ ಪುಷ್ಪವೃಷ್ಟಿಗರೆಯಲಾಗುವುದು ಎಂದು ದೇವೇಗೌಡರ ಅಭಿಮಾನಿ ಬಳಗ ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ನುಡಿನಮನ

ಮೈಸೂರು, ಮೇ 17– ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಶನಿವಾರ ಬೆಳಗ್ಗೆ 11 ಗಂಟೆಗೆ ನಗರದ ದೊಡ್ಡ ಗಡಿಯಾರ ವೃತ್ತದಲ್ಲಿ 'ವಿ.ಶ್ರೀನಿವಾಸಪ್ರಸಾದ್ ಅವರಿಗೆ ನುಡಿನಮನ' ಕಾರ್ಯಕ್ರಮ ಆಯೋಜಿಸಲಾಗಿದೆ.

ವಿಧಾನಪರಿಷತ್ ಸದಸರಾದ ಎ.ಹೆಚ್.ವಿಶ್ವನಾಥ್, ಸಿ.ಎನ್.ಮಂಜೇಗೌಡ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ, ಹಿರಿಯ ಸಹಕಾರಿ ಮೆಲ್ಲಹಳ್ಳಿ ಮಹದೇವಸ್ವಾಮಿ, ಸಮಿತಿ ಅಧ್ಯಕ್ಷ ಜಯಪ್ರಕಾಶ್(ಜೆಪಿ), ಪ್ರಧಾನ ಸಂಚಾಲಕ ಮೂಗೂರು ನಂಜುಂಡಸ್ವಾಮಿ, ಉಪಾಧ್ಯಕ್ಷ ಎಂ.ಜೆ.ಸುರೇಶ್‌ಗೌಡ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಸಮಿತಿಯ ತೇಜೇಶ್ ಲೋಕೇಶ್‌ಗೌಡ ತಿಳಿಸಿದ್ದಾರೆ.

ಪುಸ್ತಕ ಉಡುಗೊರೆ...




ಮೈಸೂರಿನಲ್ಲಿ ಆತ್ಮತೃಪ್ತಿ ಟ್ರಸ್ಟ್ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕುರಿತ 'ನಾವು ಕಂಡ ಸಿದ್ದರಾಮಯ್ಯ–ತತ್ವ–ಸತ್ವದ ಸಂಗಮ' ಪುಸ್ತಕವನ್ನು ಕರ್ನಾಟಕ ಪ್ರದೇಶ ಕುರುಬರ ಸಂಘದ ನಿಕಟ ಪೂರ್ವ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಅವರಿಗೆ ಟ್ರಸ್ಟ್‌ನ ಕಾರ್ಯದರ್ಶಿ ಪ್ರಿಯದರ್ಶಿನಿ ನೀಡಿದರು. ಎಪಿಎಂಸಿ ಸದಸ್ಯರಾದ ಗುರುಸ್ವಾಮಿ, ಬಂಡಳ್ಳಿ ಶಿವಕುಮಾರ್ ಚಿತ್ರದಲ್ಲಿದ್ದಾರೆ.

ಕಾಂಗ್ರೆಸ್ ಸರ್ಕಾರ ಒಂದು ವರ್ಷ ಪೂರೈಸಿದ ಸಂಭ್ರಮ



ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಶ್ರೀ ಪುಸ್ತಕ ಸಂತಾನ ಗೋಪಾಲಕೃಷ್ಣ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಭಕ್ತರಿಗೆ ಸಿಹಿ ವಿತರಿಸಲಾಯಿತು. ಈ ವೇಳೆ ಶಾಸಕ ಕೆ. ಹರೀಶ್‌ಗೌಡ, ನಗರ ಪಾಲಿಕೆ ಮಾಜಿ ಸದಸ್ಯ ಡಿ ನಾಗಭೂಷಣ್, ಕೆಪಿಸಿಸಿ ಸದಸ್ಯ ಲೋಕೇಶ್ ರಾವ್, ದೇವರಾಜ ಬ್ಲಾಕ್ ಅಧ್ಯಕ್ಷ ರಮೇಶ, 23ನೇ ವಾರ್ಡ್ ಕಾಂಗ್ರೆಸ್ ಮುಖಂಡರಾದ ರಾಜೀವ್, ವಾರ್ಡ್ ಅಧ್ಯಕ್ಷ ಆನಂದ್, ಮುಖಂಡರಾದ ಜ್ಞಾನೇಶ್, ಮಂಜುನಾಥ್, ಜಗದೀಶ್, ದಿವಾಕರ, ರವಿ, ಅಭಿ, ಮಂಜ, ನವೀನ್, ಹರ್ಷ, ನಿತಿನ್, ಚೆಲುವರಾಜ್, ಮಂಗಳಮ್ಮ, ಶಾಂತಮ್ಮ, ಮಂಜುಳಮ್ಮ, ಎಸ್.ಟಿ. ಉಪಾಧ್ಯಕ್ಷ ಸಂಜಯ್, 23ನೇ ವಾರ್ಡಿನ ಕಾಂಗ್ರೆಸ್ ಅಧ್ಯಕ್ಷ ಪವನ್ ಮತ್ತಿತರರು ಉಪಸ್ಥಿತರಿದ್ದರು.

ನಿಧನ



ಜಮೀಲ್ ಅಹಮ್ಮದ್ ಖಾನ್

ಮೈಸೂರು, ಮೇ 17–ಮೈಸೂರಿನ ಬನ್ನಿಮಂಟಪದ ನಿವಾಸಿ ಜಮೀಲ್ ಅಹಮ್ಮದ್ ಖಾನ್(69) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಆರು ಮಂದಿ ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶಾಸಕ ತನ್ವೀರ್ ಸೇಠ್, ಎಂಎಲ್‌ಸಿ ಹೆಚ್.ವಿಶ್ವನಾಥ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದ್ದಾರೆ. ಅಂತ್ಯಕ್ರಿಯೆ ಮಂಡಿ ಮೊಹಲ್ಲಾದ ಖಬರಸ್ತಾನಲ್ಲಿ ಶುಕ್ರವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.05.2024 ಶನಿವಾರ, ಮಳೆ ನಕ್ಷತ್ರ: ಕೃತ್ತಿಕ 11.05.2024 ರಿಂದ 24.05.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಎಟಿಎಂಇ ಇಂಜಿನಿಯರಿಂಗ್ ಕಾಲೇಜು** : ಆತ್ಮೀಯ–2024 ಕಾಲೇಜು ವಾರ್ಷಿಕೋತ್ಸವದ ಅಂಗವಾಗಿ ಮ್ಯಾರಾಥಾನ್, ಮುಖ್ಯ ಅತಿಥಿಗಳು: ಡಾ. ಶುಶ್ರೂತ್‌ಗೌಡ, ಅಧ್ಯಕ್ಷತೆ : ಎಟಿಎಂಇ ಅಧ್ಯಕ್ಷ ಎಲ್. ಅರುಣ್ ಕುಮಾರ್, ಅತಿಥಿಗಳು: ಕಾರ್ಯದರ್ಶಿ ಕೆ. ಶಿವಶಂಕರ್, ಖಜಾಂಚಿ ಆರ್. ವೀರೇಶ್, ಸ್ಥಳ: ಓವೆಲ್ ಮೈದಾನ, ಬೆಳಗ್ಗೆ 7ಕ್ಕೆ.

■ **ರೋಟರಿ ಜಿ20 ಯೋಗ ಸಮಿತಿ–2024** : ರೋಟರಿ ಜಿಲ್ಲೆ 3181 ರೋಟರಿ ಜಿ20 ಯೋಗ ಶೃಂಗಸಭೆ–2024, ಆಶೀರ್ವಚನ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥಾನಂದ ಸ್ವಾಮೀಜಿ, ಅತಿಥಿಗಳು : ಡಾ. ಅರಳು ಮಲ್ಲಿಗೆ ಪಾರ್ಥಸಾರಥಿ, ಹಳ್ಳಿಗೆರೆ ಮೂರ್ತಿ, ಡಾ.ಹೆಚ್.ಆರ್. ನಾಗೇಂದ್ರ, ಪ್ರೊ. ಎಂ. ಕೃಷ್ಣೇಗೌಡ, ಡಾ. ರಾಘವೇಂದ್ರ, ಡಾ. ಎಸ್. ಓಂಕಾರ, ಎಂ.ಕೆ. ನಾಗರಾಜ್, ಅಶ್ವಥ್‌ರಾಮಯ್ಯ, ಅಧ್ಯಕ್ಷತೆ : ಶೃಂಗಸಭೆ ಅಧ್ಯಕ್ಷ ರಂಗರಾವ್, ಸ್ಥಳ: ಘಟಿಕೋತ್ಸವ ಸಭಾಂಗಣ, ಕರಾಮುವಿವಿ, ಬೆಳಗ್ಗೆ 9.30ಕ್ಕೆ.

■ **ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್, ಇಟ್ಟಿಗೆಗೂಡು** : ಮೈಸೂರು ಕರಗ ಶತಮಾನೋತ್ಸವ, ಬೆಳಗ್ಗೆ 7ಕ್ಕೆ ಅಮ್ಮನವರ ಕರಗವು ದೇವಸ್ಥಾನದಿಂದ ಹೊರಟು ಮಾನಸ ರಸ್ತೆಯಿಂದ ಪ್ರಾರಂಭವಾಗಿ, ಕೆಳಗಿನ ಕೇರಿ ಶ್ರೀ ಕುಪ್ಪಮ್ಮ ದೇವಸ್ಥಾನ, ಲಕ್ಷ್ಮೀದೇವಸ್ಥಾನದ ಮಾರ್ಗವಾಗಿ ಇಟ್ಟಿಗೆಗೂಡಿನ ಇತರೆ ಬೀದಿಗಳಲ್ಲಿ ಪೂಜೆಯನ್ನು ಸ್ವೀಕರಿಸಿ, ಸಂಜೆ ದೇವಸ್ಥಾನ ತಲುಪಲಿದೆ, ಮಹಾಮಂಗಳಾರತಿ.

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್** : ಬ್ರಹ್ಮ ರಥೋತ್ಸವ, ಬೆಳಗ್ಗೆ 9ಕ್ಕೆ ಚತುಸ್ಥಾನಾರ್ಚನೆ, ನಿತ್ಯಹೋಮ, ಅಷ್ಟಲಕ್ಷ್ಮಿ ಹೋಮ, ಡೋಲೋತ್ಸವ, ಸಂಜೆ 6ಕ್ಕೆ ರಾಮತಾರಕ ಹೋಮ, ಪಂಚಮುಖಿ ಹನುಮಾನ್ ಮಂತ್ರ ಹೋಮ, ಹನುಮಂತೋತ್ಸವ, ಸ್ಥಳ: ಟ್ರಸ್ಟ್ ಆವರಣ, ಗೋಕುಲಂ 3ನೇ ಹಂತ.

■ **ಆರ್ಟ್ ಆಫ್ ಲಿವಿಂಗ್** : ಮೇಧಾ ಯೋಗ ಶಿಬಿರ, ಸ್ಥಳ: ಆರ್ಟ್ ಆಫ್ ಲಿವಿಂಗ್ ಆಶ್ರಮ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಮಕ್ಕಳ ಕಣ್ಣಿನ ದೃಷ್ಟಿ ಸಮಸ್ಯೆಗೆ ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು** : ವಿನೂತನ್–2024 ಅಂತರಕಾಲೇಜು ಫೆಸ್ಟ್, ಉದ್ಘಾಟನೆ : ಇನ್ಫೋಸಿಸ್‌ನ ಸೀನಿಯರ್ ಅಸೋಸಿಯೇಟ್ ಅಜಯ್ ಜಿ. ಪ್ರಸಾದ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀ ಶೈಲರಾಮಣ್ಣವರ್, ವಿದ್ಯಾವರ್ಧಕ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಶಿವಲಿಂಗೇಗೌಡ, ಸ್ಥಳ: ಸಾಹುಕಾರ್ ಚೆನ್ನಯ್ಯ ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್**: ಆರ್ಟಿಸ್ಟ್ರಿ ಚಿನ್ನಾಭರಣ ಪ್ರದರ್ಶನ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂ, ಬಿ.ಎನ್.ರಸ್ತೆ, ಬೆಳಗ್ಗೆ 10 ಗಂಟೆಯಿಂದ.

■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ, ಸ್ನಾತಕೋತ್ತರ ಅಧ್ಯಯನ ಕೇಂದ್ರ** : ಕಾಲೇಜು ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಅಧ್ಯಕ್ಷತೆ : ಮಹಾವಿದ್ಯಾಲಯ ಪ್ರಿನ್ಸಿಪಾಲ್ ಪ್ರೊ. ಸಾಯಿನಾಥ್ ಮಲ್ಲಿಗೆಮಾಡು, ಗೌರವ ಅತಿಥಿಗಳು: ಎಂಎಂಕೆ ಮತ್ತು ಎಸ್‌ಡಿಎಂ ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲ್ ಪ್ರೊ. ನಯನಕುಮಾರಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ** : ಪಾರಂಪರಿಕ ಹಾಸು ಆಟಗಳ 10ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್–ಹ್ಯಾಂಡಿಕ್ರಾಫ್ಟ್ ಸೇಲ್ಸ್ ಎಂಪೋರಿಯಂ, ಮೃಗಾಲಯ ಎದುರು, ಬೆಳಗ್ಗೆ 10 ರಿಂದ.

■ **ಭಾರತೀಯ ಶಸ್ತ್ರ ಚಿಕಿತ್ಸಕರ ಸಂಘ** : ಸಿಗ್ಮಾ ಆಸ್ಪತ್ರೆಯ ಲ್ಯಾಪ್ರೋಸ್ಕೋಪಿಕ್ ಮತ್ತು ಎಂಡೋಸ್ಕೋಪಿ ತಜ್ಞರಾದ ಡಾ.ಜಿ.ಸಿದ್ದೇಶ್ ಅವರಿಂದ ಎಂಡೋಸ್ಕೋಪಿ ಶಿಬಿರ, ಸ್ಥಳ: ಸಿಗ್ಮಾ ಆಸ್ಪತ್ರೆ, ಸರಸ್ವತಿಪುರಂ, ಬೆಳಗ್ಗೆ 10 ರಿಂದ.

■ **ಕಾವೇರಿ ಸ್ಕೂಲ್ ಅಂಡ್ ಕಾಲೇಜ್ ಆಫ್ ನರ್ಸಿಂಗ್** : ಉದ್ಘಾಟನೆ ಮತ್ತು ಪ್ರತಿಜ್ಞಾವಿಧಿ ಬೋಧನಾ ಸಮಾರಂಭ, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಗೌರವ ಅತಿಥಿಗಳು : ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪಿ.ಸಿ. ಕುಮಾರಸ್ವಾಮಿ, ನರ್ಸಿಂಗ್ ಸೂಪರಿಂಟೆಂಡೆಂಟ್ ಶ್ರೀಮತಿ ಬಿ.ಎ. ಸುಲಲಿತಾಂಗಿ, ಡಾ. ಸರಳ ಚಂದ್ರಶೇಖರ್, ಅಧ್ಯಕ್ಷತೆ : ಕಾವೇರಿ ಆಸ್ಪತ್ರೆ ಅಧ್ಯಕ್ಷ ಡಾ. ಜಿ.ಆರ್. ಚಂದ್ರಶೇಖರ್, ಸ್ಥಳ: ಕಾವೇರಿ ಗ್ರೂಪ್ ಆಫ್ ಇನ್ಸ್‌ಟಿಟ್ಯೂಷನ್ಸ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಕಾವೇರಿ ಕ್ರಿಯಾ ಸಮಿತಿ** : ಮಾಜಿ ಕಂದಾಯ ಸಚಿವರು ಹಾಗೂ ಸಂಸದರಾದ ದಿವಂಗತ ವಿ. ಶ್ರೀನಿವಾಸ ಪ್ರಸಾದ್ ಅವರಿಗೆ ನುಡಿನಮನ, ಪುಷ್ಪಾರ್ಚನೆ : ಮಾಜಿ ಸಚಿವ ಅಡಗೂರು ಹೆಚ್. ವಿಶ್ವನಾಥ್, ಉಪಸ್ಥಿತರು : ಶಾಸಕರಾದ ಟಿ.ಎಸ್. ಶ್ರೀವತ್ಸ, ಸಿ.ಎನ್. ಮಂಜೇಗೌಡ, ಮಾಜಿ ಶಾಸಕ ನಾಗೇಂದ್ರ, ಹಿರಿಯ ಸಹಕಾರಿ ಮೆಲ್ಲಹಳ್ಳಿ ಮಹದೇವಸ್ವಾಮಿ, ಅಧ್ಯಕ್ಷತೆ : ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್, ಸ್ಥಳ: ದೊಡ್ಡಗಡಿಯಾರ ವೃತ್ತ, ಪುರಭವನ ಹತ್ತಿರ, ಬೆಳಗ್ಗೆ 11ಕ್ಕೆ.

■ **ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ** : 'ಶಿಕ್ಷಣ ಮತ್ತು ಸಂಶೋಧನೆಗಾಗಿ ವಸ್ತು ಸಂಗ್ರಹಾಲಯಗಳು' ಶೀರ್ಷಿಕೆಯಡಿ ಅಂತಾರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನಾಚರಣೆ, ಹುಣಸೂರಿನ ಅಪೂರ್ವ ನಾಣ್ಯ ಮತ್ತು ನೋಟುಗಳ ಸಂಗ್ರಹಕಾರ ಪಿ.ಕೆ.ಕೇಶವಮೂರ್ತಿ ಅವರಿಂದ ಪ್ರಾಚೀನ ನಾಣ್ಯಗಳು ಮತ್ತು ನೋಟುಗಳ ಪ್ರದರ್ಶನ, ಸ್ಥಳ: ಇಂದಿರಾನಗರದ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿರುವ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ CFTRI 'ಶೋಧ – ಅನುಶೋಧ' ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು: CSIR, CFTRI, Mysuru, ಪ್ರಸ್ತುತಿ: ಡಾ. ಜಿ. ನಾಗಪ್ಪಮಲ್ಲೇಶಿ, 6.40 ಪದ ಸಂಸ್ಕೃತಿ, 6.50 ರೈತರಿಗೆ ಸಲಹೆ, 7.15 ಸುರಕ್ಷಿತ ಅಂತರ್ಜಾಲ ಮಾಲಿಕೆ, ಪ್ರಸ್ತುತಿ: ಅಬ್ದುಲ್ ರಶೀದ್, 8.30 'ಹಾದಿಯಲ್ಲಿ ಕಂಡ ಮುಖ' ಬಾನುಲಿ ಸರಣಿ, ಚಾಮರಾಜನಗರ ರಾಮಸಮುದ್ರ ಗೊರವ ಜನಾಂಗದವರೊಂದಿಗೆ ಸಂವಾದ, ಪ್ರಸ್ತುತಿ : ಅಬ್ದುಲ್ ರಶೀದ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಲಾಲ್ಗುಡಿ ಶ್ರೀಮತಿ ಬ್ರಹ್ಮಾನಂದಂ ಮತ್ತು ಲಾಲ್ ಗುಡಿ ಆರ್. ರಾಜಲಕ್ಷ್ಮಿ –ದ್ವಂದ್ವ ವೈಯೋಲಿನ್ ವಾದನ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆ –ಎಸ್.ಪ್ರವೀಣ್, 3.30 ಮಕ್ಕಳ ಮಂಟಪ–ಶ್ರೀರಂಗ ಪಟ್ಟಣ ತಾಲ್ಲೂಕು ಪಾಲಹಳ್ಳಿಯ ಶ್ರೀಶಾರದಾದೇವಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ–ಕಾಶೀಯಾತ್ರೆ, ರಚನೆ–ಮಂಜುನಾಥ ಬೆಳಕೆರೆ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 4.30 ನೆನಪಿನಂಗಳ–ಹಿರಿಯ ಚಿತ್ರ ಕಲಾವಿದ ಎಂ.ಜೆ.ಶುದ್ಧೋದನ ಅವರೊಂದಿಗೆ ಎಸ್.ಆರ್.ಮಾಧವ ರಾವ್ ಅವರು ನೆಡೆಸಿದ್ದ ಸಂವಾದ, 6.55 ಕೃಷಿರಂಗ –ಕಿಸಾನ್‌ವಾಣಿ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ. ಕೆ.ಆರ್.ನಗರ ತಾಲೂಕು ವಡ್ಡರಹಳ್ಳಿಯ ಭಾರತಿ ಹಾಗೂ ಜಯಂತ್ ಪ್ರಸ್ತುತಿ: ಎನ್. ಕೇಶವಮೂರ್ತಿ, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ವಿದೂಷಿ ಶಾಶ್ವತಿ ಮಂಡಲ್ – ಹಾಡುಗಾರಿಕೆ

■ **ಜೆಎಸ್‌ಎಸ್ ಆಸ್ಪತ್ರೆ** : ನವಜಾತ ಶಿಶು ಆರೈಕೆಯಲ್ಲಿ ತತ್‌ಸ್ಥಾನ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಬಗ್ಗೆ ಕಾರ್ಯಾಗಾರ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಾಂಶುಪಾಲ ಡಾ. ಬಸವನಗೌಡಪ್ಪ, ಅಧ್ಯಕ್ಷತೆ : ವೈದ್ಯಕೀಯ ಅಧೀಕ್ಷಕ ಡಾ. ಸಿ.ಪಿ. ಮಧು, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11ಕ್ಕೆ.

■ **ಕಾಲೇಜು ಶಿಕ್ಷಣ ಇಲಾಖೆ, ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೈರಾಪುರ** : ವಿವಿಧ ವೇದಿಕೆಗಳ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಮತಿ ಕೆ.ಎಂ. ಗಾಯತ್ರಿ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ವಿ.ವಿ. ಜಗದೀಶ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11.30ಕ್ಕೆ.

■ **ಕಲಾಸುರುಚಿ** : ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು: ಸಂಸ್ಕೃತಿ ಪ್ರತಿಷ್ಠಾನ ಯೋಜನಾಧಿಕಾರಿ ಕಾರ್ತಿಕೇಯನ್ ಶ್ರೀನಿವಾಸನ್, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಉತ್ತಿಷ್ಠ ಭಾರತ ಪ್ರತಿಷ್ಠಾನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್**: ಆದಿಶಂಕರಾಚಾರ್ಯರ ಜಯಂತಿ ಅಂಗವಾಗಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಪುಷ್ಪಾರ್ಚನೆ: ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಅಧ್ಯಕ್ಷತೆ: ಹಿರಿಯ ಸಮಾಜ ಸೇವಕ ಡಾ.ಕೆ. ರಘುರಾಂ ವಾಜಪೇಯಿ, ಉಪನ್ಯಾಸ: ಸಂಸ್ಕೃತ ವಿದುಷಿ ಡಾ.ಕೆ.ಲೀಲಾಪ್ರಕಾಶ್ ಅವರಿಂದ, ಉಪಸ್ಥಿತರು: ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೆ.ಎಸ್.ಮುಕುಂದನ್, ವಿಜಯ ಮಂಜುನಾಥ್, ಎಂ.ವಿ. ನಾಗೇಂದ್ರಬಾಬು, ಅನಂತ್, ಸ್ಥಳ: ಕನ್ನಡ ಸಾಹಿತ್ಯ ಭವನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ದೇಸಿರಾಜು ಫ್ಯಾಮಿಲಿ** : ಎತ್ತರದ ಕಟ್ಟಡಗಳು– ಒಂದು ನೋಟ ಕುರಿತು ಡಿ.ವಿ. ನರಸಿಂಹರಾವ್ ಸ್ಮಾರಕ ಉಪನ್ಯಾಸ ಕಾರ್ಯಕ್ರಮ, ಭಾಷಣಕಾರರು : ಭಾಮೀಸ್ ಗ್ರೂಪ್ ಆಫ್ ಕಂಪನೀಸ್ ವ್ಯವಸ್ಥಾಪಕ ನಿರ್ದೇಶಕ ಡಾ. ರಾಘವೇಂದ್ರ ಪ್ರಸಾದ್, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ** : ಸ್ವಾಮಿ ಮಹೀಪಾಲಾನಂದ ಅವರಿಂದ ಉಪನ್ಯಾಸ, ಸ್ಥಳ : ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಸಮಾಜ ಕಾರ್ಯ ಅಧ್ಯಯನ ವಿಭಾಗ, ಇಂಡಿಯನ್ ಸೊಸೈಟಿ ಆಫ್ ಪ್ರೊಫೆಸನಲ್ ಸೋಸಿಯಲ್ ವರ್ಕ್** : ಸಾಮಾಜಿಕ ಕಾರ್ಯದಲ್ಲಿ ಹೊಸ ನೋಟಗಳು ಕುರಿತು ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು : ಕರಾಮುವಿವಿ ಕುಲಸಚಿವ ಪ್ರೊ. ಕೆ.ಬಿ. ಪ್ರವೀಣ, ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಶೈಲಜಾ, ಸಮಾರೋಪ ಭಾಷಣ : ಪ್ರಾಧ್ಯಾಪಕ ಪ್ರೊ. ಸಂಜಯ್ ರಾಯ್, ಗೌರವ ಅತಿಥಿಗಳು : ಪ್ರಾಧ್ಯಾಪಕ ಐ.ಎ. ಶರೀಫ್, ತುಮಕೂರು ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ವೈ.ಎಸ್. ಸಿದ್ದೇಗೌಡ, ಸ್ಥಳ: ಸೆನೆಟ್ ಹಾಲ್, ಮೈಸೂರು ವಿವಿ, ಸಂಜೆ 4ಕ್ಕೆ.

■ **ರಾಗಾ ಮ್ಯೂಸಿಕ್ ಅಕಾಡೆಮಿ** : 97ನೇ ಸಂಗೀತ ಕಛೇರಿ, ವಿದುಷಿ ಪೃಥ್ವಿ ಭಾಸ್ಕರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದುಷಿ ಸಿ.ವಿ. ಶ್ರುತಿ–ವಯೋಲಿನ್, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಶ್ರೀ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರ, ನಾರಾಯಣ ಶಾಸ್ತ್ರಿ ರಸ್ತೆ, ಸಂಜೆ 6ಕ್ಕೆ

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ದೇಸಿರಜು ಫ್ಯಾಮಿಲಿ** : 'ಎತ್ತರದ ಕಟ್ಟಡಗಳು– ಅವಲೋಕನ' ಕುರಿತು ಡಿ.ವಿ. ನರಸಿಂಹರಾವ್ ಸ್ಮಾರಕ ಉಪನ್ಯಾಸ ಕಾರ್ಯಕ್ರಮ, ಮುಖ್ಯ ಭಾಷಣಕಾರರು : ಭಾಮೀಸ್ ಗ್ರೂಪ್ ಆಫ್ ಕಂಪನೀಸ್ ಸಂಸ್ಥಾಪಕರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಡಾ. ರಾಘವೇಂದ್ರ ಪ್ರಸಾದ್, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಉಪಸ್ಥಿತರು : ಡಿವಿಎನ್ ಮೆಮೋರಿಯಲ್ ಟ್ರಸ್ಟಿ ಪ್ರೊ. ಡಿ.ಎಸ್. ರಾಮಕೃಷ್ಣರಾವ್, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಸಂಜೆ 6ಕ್ಕೆ.

■ **ರಂಗಾಯಣ** : ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಆ ಮನಿ ನಾಟಕ ಪ್ರದರ್ಶನ, ನಿರ್ದೇಶನ : ಮಂಜುನಾಥ ಬಡಿಗೇರ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಮೇ 18 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 32 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಹೆಚ್.ಡಿ.ರೇವಣ್ಣ ಜಾಮೀನು ಅರ್ಜಿ ವಿಚಾರಣೆ ಮೇ20ಕ್ಕೆ ಮುಂದೂಡಿಕೆ

ಬೆಂಗಳೂರು, ಮೇ 17– ಮಹಿಳೆಯ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಮಾಜಿ ಸಚಿವ ಹೆಚ್. ಡಿ ರೇವಣ್ಣ ಅವರ ಮಧ್ಯಂತರ ಜಾಮೀನು ಸೋಮವಾರದವರೆಗೆ ಮುಂದುವರಿಕೆಯಾಗಿದೆ.

ಕಿಡ್ನಾಪ್ ಕೇಸ್‌ನಲ್ಲಿ ಈಗಾಗಲೇ ಮಧ್ಯಂತರ ಜಾಮೀನು ಮಂಜೂರು ಆಗಿದೆ. ಇಂದು ಮುಖ್ಯ ಜಾಮೀನು ಅರ್ಜಿಯ ವಿಚಾರಣೆ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ನಡೆಯಿತು. ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು ಮೇ 20 ಸೋಮವಾರಕ್ಕೆ ಆದೇಶ ಕಾಯ್ದಿರಿಸಿದರು. ಪ್ರಕರಣದ ಅರ್ಜಿ ವಿಚಾರಣೆ ಸೆಷನ್ ಕೋರ್ಟ್‌ನಲ್ಲಿ ನಡೆಯಬೇಕಾಗಿರುವುದರಿಂದ ಈ ಜಾಮೀನು ಅರ್ಜಿ ಇಲ್ಲಿ ನಡೆಯುವುದು ಸರಿಯಲ್ಲ. ಇದೆಲ್ಲವನ್ನೂ ಕೂಡ ಓಪನ್ ಕೋರ್ಟ್‌ನಲ್ಲಿ ಹೇಳಲು ಸಾಧ್ಯವಿಲ್ಲ. ಇನ್ ಕ್ಯಾಮರಾದಲ್ಲಿ ವಿವರವಾಗಿ ಹೇಳಬಹುದು ಎಂದು ಎಸ್‌ಐಟಿ ಪರ ವಕೀಲರು ತಿಳಿಸಿದರು. ವಾದ–ಪ್ರತಿವಾದ ● 6ನೇ ಪುಟಕ್ಕೆ

ಪೆನ್‌ಡ್ರೈವ್ ಕೇಸ್‌ನಲ್ಲಿ ಹೆಚ್‌ಡಿಕೆ ಹೆಸರು ಹೇಳಲು
ಡಿಕೆಶಿ 100 ಕೋಟಿ ಆಫರ್

● ಪೊಲೀಸರ ವಶದಲ್ಲಿರುವ ದೇವರಾಜೇಗೌಡ ಸ್ಫೋಟಕ ಹೇಳಿಕೆ ● ಅವರ ಒತ್ತಡಕ್ಕೆ ನಾನು ಮಣಿಯದಿದ್ದಾಗ ನನ್ನ ಮೇಲೆ ಕೇಸ್ ಹಾಕಿದ್ದಾರೆ ● ಪೆನ್‌ಡ್ರೈವ್ ಹಂಚಿಕೆ ವಿಚಾರದಲ್ಲಿ ಡಿ.ಕೆ.ಶಿವಕುಮಾರ್ ಪಾತ್ರವಿರುವ ಎಲ್ಲಾ ದಾಖಲೆಗಳ ಸುರಕ್ಷಿತವಾಗಿಟ್ಟಿದ್ದೇನೆ; ಅದನ್ನೆಲ್ಲಾ ಬಹಿರಂಗಪಡಿಸಿದರೆ ಸರ್ಕಾರವೇ ಪತನವಾಗುತ್ತೆ

ಹಾಸನ, ಮೇ 17(ಕೆಎಂಶಿ)– ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ಪ್ರಕರಣ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದೆ. ಈ ಪ್ರಕರಣದಲ್ಲಿ ಪೊಲೀಸರ ವಶದಲ್ಲಿರುವ ವಕೀಲ ದೇವರಾಜೇಗೌಡ ಇದೀಗ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಅಶ್ಲೀಲ ವಿಡಿಯೋ ಪೆನ್‌ಡ್ರೈವ್ ಹಂಚಿಕೆಯನ್ನು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸೂಚನೆಯಂತೆ ಮಾಡಿದ್ದೇನೆ ಎಂದು ಹೇಳಿದರೆ 100 ಕೋಟಿ ರೂಪಾಯಿ ಕೊಡುವುದಾಗಿ ಡಿ.ಕೆ.ಶಿವಕುಮಾರ್ ಆಫರ್ ನೀಡಿದ್ದರು ಎಂದು ದೇವರಾಜೇಗೌಡ ಹೇಳಿದ್ದಾರೆ. ಪೆನ್‌ಡ್ರೈವ್ ಕುರಿತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನನ್ನನ್ನು ಕರೆಸಿ ಮಾತನಾಡಿದ್ದಾರೆ. ಕಾರ್ತಿಕ್‌ನಿಂದ ಪೆನ್‌ಡ್ರೈವ್ ತರಿಸಿಕೊಂಡು ಎಲ್ಲಾ ಮಾಹಿತಿ ಪಡೆದಿದ್ದಾರೆ ಎಂದು ದೇವರಾಜೇಗೌಡ ಹೇಳಿದ್ದಾರೆ. ಪ್ರಜ್ವಲ್ ರೇವಣ್ಣ ಕುರಿತ ಪೆನ್‌ಡ್ರೈವ್ ಹಂಚಲು ಹೆಚ್.ಡಿ.ಕುಮಾಸ್ವಾಮಿಯೇ ಹೇಳಿದ್ದಾರೆ ಎಂದು ಹೇಳಲು ನನಗೆ ಡಿಕೆಶಿ ಸೂಚಿಸಿದ್ದಾರೆ. ● 6ನೇ ಪುಟಕ್ಕೆ

1. ಡಿಸಿಎಂ ಡಿ.ಕೆ.ಶಿವಕುಮಾರ್
2. ಕೃಷಿ ಸಚಿವ ಚಲುವರಾಯಸ್ವಾಮಿ
3. ಕಂದಾಯ ಸಚಿವ ಕೃಷ್ಣಭೈರೇಗೌಡ
4. ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ

ಹಾಗೂ ಇನ್ನೂ ಒಬ್ಬ ಸಚಿವ ಹಾಗೆಯೇ ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ಇವರೆಲ್ಲರೂ ಹೂಡಿರುವ ಸಂಚು ಏನು ಗೊತ್ತಾ? ಪ್ರಧಾನಿ ನರೇಂದ್ರ ಮೋದಿಯವರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿ ಅವರಿಗೆ ಕೆಟ್ಟ ಹೆಸರು ತರುವುದು. ಈ ಸಂಚು ಸಾಕಾರಗೊಳಿಸಲು ಡಿ.ಕೆ.ಶಿವಕುಮಾರ್ ಸಾಹೇಬರು ವಕೀಲರಾದ ದೇವರಾಜೇಗೌಡರಿಗೆ ಆಫರ್ ಮಾಡಿದ ಮೊತ್ತ ಬರೋಬ್ಬರಿ 100 ಕೋಟಿ.

–ಸಾಮಾಜಿಕ ಜಾಲ ತಾಣ 'ಎಕ್ಸ್'ನಲ್ಲಿ ಜೆಡಿಎಸ್ ಪೋಸ್ಟ್

ವಕೀಲ ದೇವರಾಜೇಗೌಡ ಒಂದು ದಿನ ಎಸ್‌ಐಟಿ ಕಸ್ಟಡಿಗೆ

ಹಾಸನ, ಮೇ 17– ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ವೈರಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಳೆ(ಮೇ18) ಸಂಜೆ 5 ಗಂಟೆವರೆಗೆ ದೇವರಾಜೇಗೌಡನನ್ನು ಎಸ್‌ಐಟಿ ಕಸ್ಟಡಿಗೆ ನೀಡಿ ಹಾಸನದ 5ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಆದೇಶಿಸಿದೆ. ಈಗಾಗಲೇ ಅತ್ಯಾಚಾರ ಕೇಸ್‌ನಲ್ಲಿ ಮೇ 11ರಂದು ಬಂಧನಕ್ಕೆ ಒಳಗಾಗಿದ್ದ ದೇವರಾಜೇಗೌಡನನ್ನು ಮೇ 14ರಿಂದ ಮೇ 16ರವರೆಗೆ ಹೊಳೆನರಸೀಪುರ ನಗರ ಠಾಣೆ ಪೊಲೀಸರು ಕಸ್ಟಡಿಗೆ ಪಡೆದಿದ್ದರು.

ನಿನ್ನೆ ಮತ್ತೊಂದು ದಿನ ಕಸ್ಟಡಿಗೆ ಮನವಿ ಮಾಡಿ ಇಂದು(ಮೇ 17) ಮಧ್ಯಾಹ್ನದವರೆಗೆ ವಿಚಾರಣೆ ನಡೆಸಿದ್ದ ಪೊಲೀಸರು, ಇಂದು ಮಧ್ಯಾಹ್ನ ನ್ಯಾಯಾಂಗ ಬಂಧನಕ್ಕೆ ಹೋಗುತ್ತಲೆ ಮತ್ತೆ ಸಂಕಷ್ಟ ಎದುರಾಗಿದೆ. ಪೆನ್‌ಡ್ರೈವ್ ವೈರಲ್ ಪ್ರಕರಣದಲ್ಲಿ 8ನೇ ಆರೋಪಿಯಾಗಿ ಎಫ್‌ಐಆರ್ ದಾಖಲಿಸಿಕೊಂಡು ಎಸ್‌ಐಟಿ ವಿಚಾರಣೆಗಾಗಿ ಕಸ್ಟಡಿಗೆ ಕೇಳಿತ್ತು. ಎರಡೂ ಕಡೆಯ ವಾದ ಆಲಿಸಿ ಒಂದು ದಿನ ಎಸ್‌ಐಟಿ ಕಸ್ಟಡಿಗೆ ಕೋರ್ಟ್ ನೀಡಿದೆ. ಇನ್ನು ಈ ಕುರಿತು ಏಪ್ರಿಲ್ 23ರಂದು ಹಾಸನದ ಸೈಬರ್ ಕ್ರೈಂ ಠಾಣೆಯಲ್ಲಿ ಕೇಸ್ ದಾಖಲಾಗಿತ್ತು. ಐವರ ವಿರುದ್ಧ ದಾಖಲಾಗಿದ್ದ ಕೇಸ್‌ಗೆ ಹೊಸದಾಗಿ ಇಬ್ಬರು ಸೇರ್ಪಡೆ ಮಾಡಿ ಬಂಧಿಸಿದ್ದರು. ಇದೀಗ ಎಂಟನೇ ಆರೋಪಿಯಾಗಿ ವಿಚಾರಣೆ ನಡೆಸಲು ದೇವರಾಜೇಗೌಡರನ್ನು ಕಸ್ಟಡಿಗೆ ಎಸ್‌ಐಟಿ ಪಡೆದಿದೆ.

ಸ್ಕೂಟರ್‌ಗೆ ಕಾರು ಡಿಕ್ಕಿ: ಮಹಿಳೆ ದಾರುಣ ಸಾವು

ಮೈಸೂರಿನ ಟ್ರಾಮಾ ಕೇರ್ ಸೆಂಟರ್ ಎದುರು ಕೆಆರ್‌ಎಸ್ ರಸ್ತೆಯಲ್ಲಿ ಶುಕ್ರವಾರ ಬೆಳಗ್ಗೆ ದುರ್ಘಟನೆ

ಪತ್ನಿ ಶವದ ಮುಂದೆ ಪತಿ ಸತೀಶ್ ರೋಧಿಸುತ್ತಿರುವುದು.

ಸಾವನ್ನಪ್ಪಿದ ರಾಧಾ

ಮೈಸೂರು, ಮೇ 17(ಆರ್‌ಕೆ)– ಸ್ಕೂಟರ್‌ಗೆ ಮಹೇಂದ್ರ ಎಕ್ಸ್‌ಯುವಿ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಮಹಿಳೆ ಸ್ಥಳದಲ್ಲೇ ದಾರುಣವಾಗಿ ಸಾವನ್ನಪ್ಪಿದ ಘಟನೆ ಮೈಸೂರಿನ ಟ್ರಾಮಾ ಕೇರ್ ಸೆಂಟರ್ ಎದುರು ಕೆಆರ್‌ಎಸ್ ರಸ್ತೆಯಲ್ಲಿ ಇಂದು ಬೆಳಿಗ್ಗೆ ಸಂಭವಿಸಿದೆ.

ಮೈಸೂರಿನ ಹೆಬ್ಬಾಳು ಮುಖ್ಯ ರಸ್ತೆಯ ಬೈರವೇಶ್ವರನಗರ ನಿವಾಸಿ ಸತೀಶ್ ಅವರ ಪತ್ನಿ ರಾಧಾ(34) ಅಪಘಾತದಲ್ಲಿ ಸಾವನ್ನಪ್ಪಿದವರು. ಪಿಕೆಟಿಬಿ ಆಸ್ಪತ್ರೆ ಆವರಣದ ಮಹಾರಾಣಿ ಕೃಷ್ಣಾಜಮ್ಮಣ್ಣಿ ಟ್ರಾಮಾ ಕೇರ್ ಸೆಂಟರ್ ಎದುರು, ಕೆಆರ್‌ಎಸ್ ರಸ್ತೆ ಬದಿ ಟೀ ಅಂಗಡಿ ಇಟ್ಟುಕೊಂಡಿದ್ದ ರಾಧಾ ಅವರು, ತಮ್ಮ ಟಿವಿಎಸ್ ಜುಪಿಟರ್ ಸ್ಕೂಟರ್ (ಕೆಎ–09–ಜೆಕೆ 2872)ನಲ್ಲಿ, ಮೇಟಗಳ್ಳಿ ಕಡೆಯಿಂದ ಬಂದು ಟ್ರಾಮಾ ಕೇರ್ ಸೆಂಟರ್ ಎದುರು ಬಲಕ್ಕೆ ತಮ್ಮ ಟೀ ಅಂಗಡಿ ಕಡೆ ತಿರುಗುತ್ತಿದ್ದಾಗ ಒಂಟಿಕೊಪ್ಪಲು ಲಕ್ಷ್ಮಿ ವೆಂಕಟರಮಣಸ್ವಾಮಿ ದೇವಸ್ಥಾನದ ಕಡೆಯಿಂದ ವೇಗವಾಗಿ ಬಂದ ಮಹಿಂದ್ರ ಎಕ್ಸ್‌ಯುವಿ ● 6ನೇ ಪುಟಕ್ಕೆ

ಮೂರು ಸುತ್ತು ಉರುಳಿ 50 ಮೀಟರ್ ದೂರದಲ್ಲಿ ಬಿದ್ದಿರುವ ಕಾರು

SSLC ಗ್ರೇಸ್ ಮಾರ್ಕ್ಸ್ ರದ್ದತಿಗೆ ಸಿಎಂ ಸಿದ್ದರಾಮಯ್ಯ ಸೂಚನೆ: ಮುಂದಿನ ವರ್ಷದಿಂದಲೇ ಜಾರಿ

ಬೆಂಗಳೂರು, ಮೇ 17– ಮುಂದಿನ ವರ್ಷದಿಂದ ಎಸ್‌ಎಸ್‌ಎಲ್‌ಸಿ ಗ್ರೇಸ್ ಮಾರ್ಕ್ಸ್ ರದ್ದು ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ವಿಧಾನಸೌಧದಲ್ಲಿ ಸಿಎಂ, ಡಿಸಿಎಂ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಈ ವರ್ಷ ಗ್ರೇಸ್ ಮಾರ್ಕ್ಸ್ ಕೊಟ್ಟ ವಿಚಾರವಾಗಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ವಿದ್ಯಾರ್ಥಿಗಳಿಗೆ 20 ಗ್ರೇಸ್ ಮಾರ್ಕ್ಸ್ ನೀಡಿದ್ದೀರಿ. ಯಾವ ಕಾರಣ ● 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ (ಕೋಪದಿಂದ) : "ನಿಮ್ಮನ್ನು ಮದುವೆ ಆಗುವ ಬದಲು ಒಬ್ಬ ರಾಕ್ಷಸನನ್ನು ಮದುವೆಯಾಗಿದ್ರೂ ನಾನು ಎಷ್ಟೋ ಸುಖವಾಗಿರ್ತಿದ್ದೆ."
ಗಂಡ : ಹಾಗೆಲ್ಲ ರಕ್ತ ಸಂಬಂಧದಲ್ಲಿ ಮದುವೆ ಆಗಬಾರದು ಕಣೆ! ಮಕ್ಕಳಿಗೂ ಒಳ್ಳೆಯದಲ್ಲ!!

ಮೈಸೂರು ಮಿತ್ರ

ಶನಿವಾರ, 18 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಿಮಗೆ ಅಧಿಕಾರದ ಅವಶ್ಯಕತೆ ಇದ್ದಾಗ ದೃಢವಾಗಿರಿ, ಆದರೆ ಅಧಿಕಾರ ಚಲಾಯಿಸುವಾಗ ಸಹೃದಯಿಗಳಾಗಿರಿ– ನುಡಿಮುತ್ತು

ವೇದ ಸುಳ್ಳಾದರೂ / ಗಾದೆ ಸುಳ್ಳಾಗದು { ಪ್ರಯಾಸ ಪಡದೆ / ಪ್ರಯಾಗ ಸಿಗದು

ನಿಮ್ಮ ಪತ್ರಗಳು

■ ತಾ ಕಳ್ಳ ಪರರ ನಂಬ !

ಮಾನ್ಯರೆ,

ದಿನದಿಂದ ದಿನಕ್ಕೆ ಹೊಸ ಹೊಸ ತಿರುವುಗಳನ್ನು ಪಡೆಯುತ್ತಿರುವ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ಪ್ರಕರಣದಲ್ಲಿ ಲೈಂಗಿಕ ದೌರ್ಜನ್ಯವನ್ನು ಒಳಗೊಂಡಿದೆ ಎಂದು ಹೇಳಲಾಗುತ್ತಿರುವ ಪೆನ್ ಡ್ರೈವ್ ವಿಚಾರ ಕುರಿತು ರಾಜ್ಯದ ಪ್ರಮುಖ ಮೂರು ರಾಜಕೀಯ ಪಕ್ಷಗಳ ಕೆಲವು ನಾಯಕರು ಒಂದಲ್ಲಾ ಒಂದು ರೀತಿಯಲ್ಲಿ ಪ್ರತ್ಯೇಕವಾಗಿ ಅಥವಾ ಪರೋಕ್ಷವಾಗಿ ಸಿಲುಕಿರಬಹುದೆಂಬ ಗುಮಾನಿ ಬಲವಾಗತೊಡಗಿದೆ. ಆದರೂ ಸಹ, ಒಬ್ಬರ ಮೇಲೆ ಮತ್ತೊಬ್ಬರು ಗೂಬೆ ಕೂರಿಸುವ ಕೆಲಸ ಮಾತ್ರ ಎಗ್ಗಿಲ್ಲದೆ ಸಾಗಿದೆ. ಪ್ರತಿನಿತ್ಯ ಇವರು ಮಾಧ್ಯಮಗಳಿಗೆ ನೀಡುತ್ತಿರುವ ಹೇಳಿಕೆಗಳು ತನಿಖೆಯ ಹಾದಿಯನ್ನು ದಿಕ್ಕು ತಪ್ಪಿಸುವಂತಿದೆ. ಈ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್ಐಟಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹಲವರನ್ನು ಬಂಧಿಸುವ ಮೂಲಕ ತನಿಖೆಯನ್ನು ಚುರುಕುಗೊಳಿಸಿದೆಯಾದರೂ ಹೆಚ್ಚಿನ ಪ್ರಗತಿ ಸಾಧ್ಯವಾಗಿಲ್ಲ. ಇಂತಹ ಸೂಕ್ಷ್ಮ ಹಾಗೂ ಗಂಭೀರ ಪ್ರಕರಣಗಳಲ್ಲಿ ರಾಜಕೀಯ ನಾಯಕರು ಇನ್ನು ಮುಂದೆಯಾದರೂ ತಮ್ಮ ಜವಾಬ್ದಾರಿ ಅರಿತು ಮಾತನಾಡುವುದು ಒಳ್ಳೆಯದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

■ ಕುಡಿಯುವ ನೀರು ಬಿಡಲು ತಾರತಮ್ಯ

ಮಾನ್ಯರೆ,

ನೈಸರ್ಗಿಕವಾಗಿ ಸಿಗುವಂತಹ 'ನೀರು' ಜಗತ್ತಿನಲ್ಲಿ ಎಲ್ಲಾ ಜನಾಂಗದವರಿಗೂ ಸೇರಿದ್ದು. ಆ ನೀರಿನಲ್ಲಿಯೂ ಸಹ ನಾನು ಇಂತಹವರಿಗೆ ಸೇರಬೇಕು ಎಂಬ ಭೇದ ಭಾವ ಇರುವುದಿಲ್ಲ. ಆದರೆ ನೀರನ್ನು ಬಿಡುವ ವ್ಯಕ್ತಿಗಳಲ್ಲಿ ಭೇದವಿರುವುದು ಅಮಾನವೀಯ ಮತ್ತು ಖಂಡನೀಯ. ಗ್ರಾಮಗಳಲ್ಲಿ ನಿರ್ಮಿಸಲಾಗಿರುವ ನೀರಿನ ಟ್ಯಾಂಕಿನಿಂದ ಮನೆಗಳಿಗೆ ನಿರ್ದಿಷ್ಟ ಸಮಯದ ಆಧಾರದ ಮೇಲೆ ವಾಟರ್ ಮ್ಯಾನ್ ನೀರು ಬಿಡುವ ವ್ಯವಸ್ಥೆ ಜಾರಿಯಲ್ಲಿದೆ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಹೊಸಹಳ್ಳಿ ನಾಲ್ಕೈದು ಜಾತಿ, ಸಮುದಾಯಗಳು ವಾಸಿಸುವ ದೊಡ್ಡ ಗ್ರಾಮವಾಗಿದೆ. ಆದರೆ ಗ್ರಾಮದ ವಾಟರ್ ಮ್ಯಾನ್ ಪರಿಶಿಷ್ಟ ಜಾತಿಯ ಜನರು ವಾಸಿಸುವ ಬೀದಿಗಳಿಗೆ ಮಾತ್ರ ಒಂದು ಗಂಟೆಗೂ ಕಡಿಮೆ ಸಮಯ ನೀರನ್ನು ಬಿಡುತ್ತಿದ್ದು, ಮೇಲ್ವರ್ಗ ಜನರ ಬೀದಿಗಳಿಗೆ ನೀರನ್ನು ವಿದ್ಯುತ್ ಇದ್ದಾಗಲೆಲ್ಲ ಅಂದರೆ (ಬೆಳಿಗ್ಗೆಯಿಂದ ಸಂಜೆಯವರೆಗೂ) ಬಿಡುತ್ತಿದ್ದು ತಾರತಮ್ಯವೆಸಗುತ್ತಿದ್ದಾರೆ. ಈ ತಾರತಮ್ಯವನ್ನು ಪ್ರಶ್ನಿಸಲು ಹೋಗುವಂತಹ ಮಹಿಳೆಯರನ್ನು ವಾಟರ್ ಮ್ಯಾನ್ ಅಗೌರವದಿಂದ ಮಾತನಾಡಿಸುತ್ತಾರೆ. ಈ ಎಲ್ಲಾ ವಿಷಯಗಳನ್ನು ಸ್ಥಳೀಯ ಮಟ್ಟದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೆ ತಿಳಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಇದು ಕೇವಲ ಹೊಸಹಳ್ಳಿ ಗ್ರಾಮದಲ್ಲಿ ಮಾತ್ರ ನಡೆಯುವ ತಾರತಮ್ಯವಲ್ಲ. ಬಹುತೇಕ ಗ್ರಾಮಗಳಲ್ಲೂ ಈ ಸಮಸ್ಯೆ ಇದೆ. ಆದ್ದರಿಂದ ಸಂಬಂಧಪಟ್ಟ ಮೇಲಾಧಿಕಾರಿಗಳು ಈ ಕುರಿತು ಗಮನಹರಿಸಿ ಸಮಸ್ಯೆಯನ್ನು ಬಗೆಹರಿಸಬೇಕಿದೆ.

–ಜಯಶ್ರೀ ಹೆಚ್ ಎಸ್, ಡಿ.ಬನುಮಯ್ಯ ವಾಣಿಜ್ಯ ಮತ್ತು ಕಲಾ ಕಾಲೇಜು, ಮೈಸೂರು.

■ ಸಾರಿಗೆ ಬಸ್‌ಗಳಲ್ಲಿ ಒಂದು ರೂ. ಕಿರಿಕ್

ಮಾನ್ಯರೆ,

ನಮ್ಮ ನಗರ ಸಾರಿಗೆ ಬಸ್‌ಗಳಲ್ಲಿ ಇತ್ತೀಚೆಗೆ ಒಂದು 'ಕಿರಿಕ್' ಶುರುವಾಗಿದೆ! ಅದೇನೆಂದರೆ, ಐವತ್ತು ರೂಪಾಯಿ ಮೌಲ್ಯದ ಟಿಕೆಟ್‌ಗೆ ಒಂದು ರೂ.ಸೇರಿಸಿ ಕೊಡಬೇಕಂತೆ. ಇನ್ನೂ ಯಾವ್ಯಾವ ಟಿಕೆಟ್‌ಗಳಿಗೆ ಒಂದು ರೂ. ಸೇರಿಸಿ ಕೊಡಬೇಕೋ ಕಾಣೆ. ಆದರೆ ಪ್ರಶ್ನೆ ಏನಪ್ಪಾ ಅಂದರೆ ಮಹಿಳೆಯರಿಗೆ ನೂರಾರು ಕೋಟಿ ಖರ್ಚು ಮಾಡಿ ಉಚಿತವಾಗಿ ಪ್ರಯಾಣದ ಅವಕಾಶ ನೀಡಿರುವ ಸರ್ಕಾರಕ್ಕೆ ಒಂದು ರೂ. ಹೊರೆಯೇ ಎಂಬುದೇ ಆ ಪ್ರಶ್ನೆ. ಈ 'ಒಂದು ರೂ'ನ ಕಾರಣಕ್ಕೆ ಸಾಕಷ್ಟು ಬಾರಿ ಕಂಡಕ್ಟರ್ ಮತ್ತು ಪ್ರಯಾಣಿಕರ ನಡುವೆ ವಾಗ್ವಾದಗಳು ನಡೆದಿವೆ. ಈ 'ಐಡಿಯಾ'ವನ್ನು ಅದ್ಯಾವ ಪುಣ್ಯಾತ್ಮ ಕೊಟ್ಟನೋ. ಆದುದರಿಂದ ಇನ್ನು ಮುಂದೆ ಸಾರಿಗೆ ಅಧಿಕಾರಿಗಳು ಈ ಆದೇಶವನ್ನು ರದ್ದುಗೊಳಿಸಿ ನಲವತ್ತೊಂಬತ್ತು+ಒಂದು ಎಂದು ಲೆಕ್ಕ ಹಾಕಿ ಐವತ್ತು ರೂ. ಪಡೆದು ಟಿಕೆಟ್ ನೀಡುವುದಕ್ಕೆ ಕ್ರಮ ಕೈಗೊಂಡು ಪ್ರಯಾಣಿಕರು ನೆಮ್ಮದಿಯಿಂದ ಪ್ರಯಾಣಿಸಲು ಅನುವು ಮಾಡಿಕೊಡಲಿ.

–ರಾಜಶೇಖರಮೂರ್ತಿ, ಬೆಳಗನಹಳ್ಳಿ, ಹೆಚ್.ಡಿ.ಕೋಟೆ ತಾ.

ಹುಸಿ ಬಾಂಬ್ ಕರೆಗೆ ಕಡಿವಾಣ ಅಗತ್ಯ

ಮಾನ್ಯರೆ,

ಪ್ರಸ್ತುತ ರಾಜ್ಯ ಮತ್ತು ರಾಷ್ಟ್ರದಲ್ಲಿ ಹುಸಿ ಬಾಂಬ್ ಕರೆಗಳ ಹಾವಳಿ ಹೆಚ್ಚಾಗಿದ್ದು, ಈ ಪ್ರವೃತ್ತಿಗೆ ಕಡಿವಾಣ ಹಾಕಬೇಕಾಗಿರುವುದು ಅನಿವಾರ್ಯವಾಗಿದೆ. ಕಳೆದ ಕೆಲವು ತಿಂಗಳುಗಳಿಂದ ಬೆಂಗಳೂರು ಮತ್ತು ದೇಶದ ಹಲವಾರು ಭಾಗಗಳಲ್ಲಿ ಹುಸಿ ಬಾಂಬ್ ಕರೆ ಹಾವಳಿ ಹೆಚ್ಚಾಗುತ್ತಿದೆ.

ದೇಶದ ಶಾಲೆಗಳು, ಆಸ್ಪತ್ರೆಗಳು, ವಿಮಾನ ನಿಲ್ದಾಣ, ರೈಲ್ವೆ ನಿಲ್ದಾಣಗಳು ಹುಸಿ ಬಾಂಬ್ ಕರೆಯ ಹಾಟ್ ಸ್ಪಾಟ್‌ಗಳಾಗಿದ್ದು, ಹಲವಾರು ಹುಸಿ ಬಾಂಬ್ ಕರೆಗಳು ದಾಖಲಾಗಿವೆ. ಇಂತಹ ಕರೆಗಳಿಂದಾಗಿ ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು, ಪ್ರಯಾಣಿಕರು ಆತಂಕಕ್ಕೊಳಗಾದರೆ, ಇದರಿಂದಾಗಿ ಪೊಲೀಸರು, ಬಾಂಬ್ ನಿಷ್ಕ್ರಿಯ ದಳದ ಅಧಿಕಾರಿಗಳು, ಶ್ವಾನದಳದ ಅಧಿಕಾರಿಗಳಿಗೆ ಅನಗತ್ಯ ಗೊಂದಲ ಉಂಟು ಮಾಡಿ ಗಂಟೆಗಳ ಕಾಲ ಕಾಯುವಂತೆ ಮಾಡಿ ಸರ್ಕಾರಕ್ಕೆ ಅನಗತ್ಯ ಖರ್ಚು ಉಂಟಾಗುವಂತೆ ಮಾಡುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು.

ಇಂತಹ ಅಪರಾಧಿಗಳು ದೇಶದಲ್ಲೇ ಕುಳಿತು ವಿಪಿಎನ್ (ವರ್ಚುವಲ್ ಪ್ರೈವೇಟ್ ನೆಟ್‌ವರ್ಕ್) ಬಳಸಿ ಬೇರೆ ದೇಶಗಳ ಸರ್ವರ್‌ಗಳಿಂದ ಕರೆಗಳನ್ನು ಅವರು ಇರುವ ಸ್ಥಳಗಳಿಂದಲೇ ಮಾಡುವ ಮೂಲಕ ತಮ್ಮ ವೈಯಕ್ತಿಕ ವಿವರಗಳನ್ನು ಮರೆ ಮಾಚಬಹುದಾಗಿರುತ್ತದೆ.

ಈ ವಿಪಿಎನ್ ಸಾಫ್ಟ್‌ವೇರ್‌ನ ಮೂಲಕ ಅಪರಾಧಿಯ ಕಂಪ್ಯೂಟರ್‌ಗೂ ಮತ್ತು ವಿಪಿನ್ ಮಾಲೀಕರ ಸರ್ವರ್‌ಗಳಿಗೂ ನೇರ ಸಂಪರ್ಕ ಏರ್ಪಡುತ್ತದೆ ಮತ್ತು ಇದರಲ್ಲಿನ ಎನ್ ಕ್ರಿಷನ್ ಅಪ್ಲಿಕೇಶನ್ ಮೂಲಕ ಹುಸಿ ಕರೆ ಮಾಡುವವರ ಮಾಹಿತಿಯನ್ನು ಮರೆ ಮಾಚಬಹುದಾಗಿದೆ.

ಆಧುನಿಕ ಅದರಲ್ಲೂ ಸಾಫ್ಟ್‌ವೇರ್ ವ್ಯಾಲಿ ಎಂದೂ ಗುರುತಿಸಲಾಗುವ ಭಾರತದ ಬೆಂಗಳೂರಿನಲ್ಲಿ ಇಂತಹ ಘಟನೆಗಳು ನಡೆಯುತ್ತಿರುವುದು ಸೋಜಿಗವಾಗಿದೆ. ಬಲಿಷ್ಠ ಫೈರ್‌ವಾಲ್‌ಗಳನ್ನು ಅಭಿವೃದ್ಧಿಪಡಿಸುವ ಮೂಲಕ ಇಂತಹ ಹುಸಿ ಕರೆಗಳನ್ನು ನಿಯಂತ್ರಣ ಮಾಡಬಹುದಾಗಿದೆ.

–ರಾಸುಮ ಭಟ್, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.

ಮೈಸೂರು ಸಾಂಪ್ರದಾಯಿಕ
ಕರಗ ಶತಮಾನೋತ್ಸವ ಸಂಭ್ರಮ



ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಮೈಸೂರು ಕಲೆ, ಇತಿಹಾಸ, ಸಾಹಿತ್ಯ ಮಾತ್ರವಲ್ಲದೆ ಆಧ್ಯಾತ್ಮಿಕ ಹಾಗೂ ಧಾರ್ಮಿಕ ಆಚರಣೆಗಳಲ್ಲಿ ತನ್ನದೇ ಆದ ಪಾರಂಪರೆ ಹೊಂದಿದೆ. ಮೈಸೂರು ಎಂದೊಡನೆ ಎಲ್ಲರಿಗೂ ನೆನಪಾಗುವುದು ಬೆಟ್ಟದ ತಾಯಿ ಚಾಮುಂಡೇಶ್ವರಿ. ಈ ಅದಿದೇವತೆಯ ಉತ್ಸವಗಳು ಆಯಾ ಕಾಲದಲ್ಲಿ ನಾನಾ ವಿಧವಾಗಿ ಆಚರಣೆಯಲ್ಲಿವೆ. ಇದರಲ್ಲಿ ಪ್ರಮುಖವಾದುದೆಂದರೆ ದುಷ್ಟ ಶಿಕ್ಷೆ, ಶಿಷ್ಟ ರಕ್ಷೆ, ಮಹಿಷಾಸುರ ಮರ್ದಿನಿಯಾದ ಚಾಮುಂಡೇಶ್ವರಿ ದೇವಿಗೆ ನಡೆಯುವ ದಸರೆ ಹಬ್ಬ. ಮತ್ತೊಂದು ಲೋಕ ಕಲ್ಯಾಣಕ್ಕಾಗಿ ದುರಿತ ನಿವಾರಿಣಿ, ಅಮೃತವರ್ಷಿಣಿಯಾದ ಜಗದಾಂಬೆಗೆ ನಡೆಯುವ ಕರಗ ಮಹೋತ್ಸವ.

ಮೈಸೂರು ಕರಗ ಮಹೋತ್ಸವವು ಪ್ರಾಚೀನ ಇತಿಹಾಸವುಳ್ಳದ್ದು. ಈ ಆಚರಣೆಗೆ ತನ್ನದೇ ಆದ ಹಿನ್ನೆಲೆಯಿದೆ. ಇಲ್ಲಿನ ಹಿರಿಯರ ಪ್ರಕಾರ ಶತಮಾನಗಳ ಹಿಂದೆ ಇದ್ದಕ್ಕಿದ್ದಂತೆ ಊರನ್ನು ಸಾಂಕ್ರಾಮಿಕ ರೋಗವು ಆವರಿಸಿ ದಿನನಿತ್ಯ ಹತ್ತಾರು ಮಂದಿ ಸಾವನ್ನಪ್ಪುತ್ತಿದ್ದರಂತೆ. ಒಂದೆಡೆ ಮನೆಮಂದಿ ರೋಗದಿಂದ ನರಳುತ್ತಿದ್ದರೆ ಮತ್ತೊಂದೆಡೆ ಮಳೆ ಇಲ್ಲದೆ ಕ್ಷಾಮ ಆವರಿಸಿತ್ತು. ಇವೆಲ್ಲದರ ಜೊತೆಗೆ ರೋಗದಿಂದ ದಿನನಿತ್ಯ ಸಾಯುವವರ ಅಂತ್ಯ ಸಂಸ್ಕಾರ ನಡೆಸುವುದೇ ಊರ ಜನರ ನಿತ್ಯಕಾಯಕವಾಗಿ ಬಿಟ್ಟಿತ್ತು ಎನ್ನುತ್ತಾರೆ.

ಹಾಗಾಗಿ ಊರಿನ ಜನರೆಲ್ಲರೂ ಸೇರಿ ನಾಡದೇವತೆಯ ಮೊರೆ ಹೋಗಲು ನಿರ್ಧರಿಸಿದರು. ಆಗ ಪ್ರಾರಂಭವಾದುದೇ **ಮೈಸೂರು ಕರಗ**. ಅಂದಿನಿಂದ ಇಂದಿನವರೆಗೂ ಯಾವುದೇ ರೀತಿಯಾದ ಸಾಂಕ್ರಾಮಿಕ ರೋಗಗಳಾಗಲೀ, ಯಾವ ಅನಾಹುತವೂ ಸಂಭವಿಸಿಲ್ಲ ಎಂದು ದೇವಿಯ ಶಕ್ತಿಯನ್ನು ಕೊಂಡಾಡುತ್ತಾರೆ.

ಕರಗ ಮಹೋತ್ಸವದ ಮಹಿಮೆ ಅಪಾರವಾದದ್ದು. ಹಿಂದೆ ಆಂಗ್ಲರಲ್ಲಿಯೂ ಭಕ್ತಿಯ ಸಿಂಚನ ಮೂಡಿಸಿತಂತೆ. ದುಷ್ಟ ಶಕ್ತಿಯ ನಿಗ್ರಹಕ್ಕಾಗಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗ ಹಾಗೂ ಸಾಂಕ್ರಾಮಿಕ ರೋಗ, ಕ್ಷಾಮ ಬರಗಾಲ ನೀಗಿಸಲು ಮಳೆಯ ಅಧಿದೇವತೆಯಾದ ಶ್ರೀ ಮಾರಿಯಮ್ಮನವರ ಕರಗವನ್ನು ಆಚರಿಸುತ್ತಾ ಬರಲಾಗುತ್ತಿದೆ. ಶತಮಾನದ ಹಿಂದೆ, ಸಣ್ಣ ಗುಡಿಸಿಲಿನಲ್ಲಿ ಪ್ರಾರಂಭವಾದ ಮೈಸೂರು ಕರಗವು ಅಂದು ಊರಿಗೆ ಮಾತ್ರ ಸೀಮಿತವಾಗಿತ್ತು. ಆದರೆ ರಾಜಮಹಾರಾಜರ ಕಾಲದಿಂದ ಅದ್ದೂರಿಯಾಗಿ ನೆರವೇರುತ್ತಿರುವ ಕರಗ ಉತ್ಸವವು ಬಹು ಪ್ರಸಿದ್ಧ. ಕಾಲಕ್ರಮೇಣ 1924ರಿಂದ ಕರಗವು ಮೈಸೂರು ನಗರ ಮೆರವಣಿಗೆಯನ್ನು ಪ್ರಾರಂಭಿಸಿತು. ಕರಗ ಮಹೋತ್ಸವದ ವೈಭವವ ಕಂಡು ಅಂದಿನ ಮೈಸೂರು ಅರಸರು ಈ ಉತ್ಸವ ಮಿನಿ ದಸರೆ ಎಂದು ಬಣ್ಣಿಸಿದ್ದರಂತೆ. ಅಂದಿನಿಂದ 99 ವರ್ಷಗಳ ಕಾಲ ಮಹೋತ್ಸವವು ಯಾವ ಅಡೆ ತಡೆಯೂ ಇಲ್ಲದೆ ದೇವಿಯ ಅನುಗ್ರಹದಿಂದ ಬಹಳ ವಿಜೃಂಭಣೆಯಿಂದ ನೆರವೇರುತ್ತಾ ಬಂದಿದೆ.



–ಜಿ.ಹರೀಶ್ ಕುಮಾರ್
ಜಂಟಿ ಕಾರ್ಯದರ್ಶಿ, ಮೈಸೂರು ಕರಗ ದೇವಸ್ಥಾನ

ಮೈಸೂರು ಕರಗ ಮಹೋತ್ಸವಕ್ಕೆ ತಿಂಗಳಿರುವಂತೆ ಯುಗಾದಿಯ ಅಮಾವಾಸ್ಯೆ ನಂತರದ ಶುಕ್ರವಾರದಂದು ಇಟ್ಟಿಗೆಗೂಡಿನ ಶ್ರೀಮಾರಿಯಮ್ಮ ದೇವಿಗೆ ಊರಿನ ಸಕಲರೂ ಅರಿಶಿನ ನೀರಿನ ಅಭಿಷೇಕ ನೆರವೇರಿಸಿ, ತಂಪೆರೆದು ಸಂಜೆ ದೇವಿಯ ತವರು ಮನೆಯಾದ ಮಡಿವಾಳರ ಮನೆಯಲ್ಲಿ ಸಾಂಪ್ರದಾಯಿಕ ವಿಭೂತಿ ಪೂಜೆ ನೆರವೇರಿಸಿ ವಿಭೂತಿ ಪ್ರಸಾದ ವಿನಿಯೋಗದೊಂದಿಗೆ ಕರಗ ಉತ್ಸವಕ್ಕೆ ವಿಧ್ಯುಕ್ತ ಚಾಲನೆ ದೊರೆಯುತ್ತದೆ.

ಉತ್ಸವಕ್ಕೆ ಎಂಟು ದಿನಗಳಿರುವಂತೆ ದೇವಸ್ಥಾನದಲ್ಲಿ ಜಾತ್ರೆಯನ್ನು ಸಾರುವ ಧ್ವಜಾರೋಹಣ ನೆರವೇರುತ್ತದೆ. ಮೈಸೂರು ಕರಗ ಮಹೋತ್ಸವವು ಐದು ದಿನಗಳ ಮಹಾಜಾತ್ರೆ. ಮೊದಲ ದಿನ ಬೆಳಿಗ್ಗೆ ಪ್ರಾತಃಕಾಲ ಪ್ರಥಮ ಅಭಿಷೇಕವನ್ನು ನೆರವೇರಿಸಿ ನಂತರ ಊರಿನ ಚತುರ್ದಿಕ್ಕಿನಲ್ಲಿ ಕಂಕಣವನ್ನು ಕಟ್ಟಲಾಗುವುದು. ನಂತರ ಇಟ್ಟಿಗೆ ಗೂಡಿನ ಶ್ರೀ ನಾಗಲಕ್ಷ್ಮಿ ದೇವಸ್ಥಾನದಿಂದ ಭಕ್ತಾದಿಗಳು ಹಾಲಿನ ಕೊಡವನ್ನು ಮೆರವಣಿಗೆಯಲ್ಲಿ ತರಲಾಗಿ ಭಕ್ತಾದಿಗಳಿಂದಲೇ ದೇವಿಗೆ ಹಾಲಿನ ಅಭಿಷೇಕವೂ ನೆರವೇರುತ್ತದೆ.

ಅನಂತರ ಚಾಮುಂಡಿ ಬೆಟ್ಟದ ಪಾದಕ್ಕೆ ತೆರಳಿ, ಕಲಶವಿಟ್ಟು ಅಭಿಷೇಕ ನೆರವೇರಿಸಿ, ಬೆಲ್ಲದ ಅನ್ನದ ನೈವೇದ್ಯ ಮಾಡಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗವನ್ನು ಸಾಂಪ್ರದಾಯಿಕವಾಗಿ ಅಲಂಕರಿಸಲಾಗುವುದು. ದೇವಿಯನ್ನು ಆರಾಧಿಸಿ, ಅಲ್ಲಿನ ನಿವಾಸಿಗಳ ಪೂಜೆ ಸ್ವೀಕರಿಸುತ್ತಾ ಕರಗವನ್ನು ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ತರಲಾಗುವುದು. ನಂತರ ಶ್ರೀ ಕೋಟೆ ಮಾರಿಯಮ್ಮನವರ ದೇವಸ್ಥಾನಕ್ಕೆ ತೆರಳಿ ಶ್ರೀ ಶಕ್ತಿ ಮತ್ತು ಶ್ರೀ ಮಾರಿಯಮ್ಮನವರ ಕರಗವನ್ನು ಸಿಂಗರಿಸಿ, ದೇವಿಯರನ್ನು ಆರಾಧಿಸಿ, ಅಲ್ಲಿಂದ ಮೆರವಣಿಗೆಯಲ್ಲಿ ತಂದು ವಾಡಿಕೆಯಂತೆ ಪ್ರಥಮ ಪೂಜೆಯನ್ನು ದೇವಿಯ ತವರು ಮನೆಯಾದ ಮಡಿವಾಳರ ಮನೆಯಲ್ಲಿ ಸ್ವೀಕರಿಸಿ, ದೇವಸ್ಥಾನಕ್ಕೆ ತರಲಾಗುತ್ತದೆ.

> **"1924ರಿಂದ ಕರಗವು ಮೈಸೂರು ನಗರ ಮೆರವಣಿಗೆಯನ್ನು ಪ್ರಾರಂಭಿಸಿತು. ಕರಗ ಮಹೋತ್ಸವದ ವೈಭವವ ಕಂಡು ಅಂದಿನ ಮೈಸೂರು ಅರಸರು ಈ ಉತ್ಸವ ಮಿನಿ ದಸರೆ ಎಂದು ಬಣ್ಣಿಸಿದ್ದರಂತೆ. ಅಂದಿನಿಂದ 99 ವರ್ಷಗಳ ಕಾಲ ಮಹೋತ್ಸವವು ಯಾವ ಅಡೆ ತಡೆಯೂ ಇಲ್ಲದೆ ದೇವಿಯ ಅನುಗ್ರಹದಿಂದ ಬಹಳ ವಿಜೃಂಭಣೆಯಿಂದ ನೆರವೇರುತ್ತಾ ಬಂದಿದೆ.**

ಕರಗ ಜೋಡಿಸಲು ಹಲವು ಬಗೆಯ ಶಾಸ್ತ್ರ–ಸಂಪ್ರದಾಯವನ್ನು ಅನುಸರಿಸಲಾಗುತ್ತದೆ. ಹದವಾದ ಮಣ್ಣಿನ ಮಡಿಕೆಗೆ ಹಸಿದಾರ ಸುತ್ತಿ ಅರಿಶಿನ–ಕುಂಕುಮವಿಟ್ಟು ಅದರಲ್ಲಿ ಮಿತವಾದ ನೀರಿನೊಂದಿಗೆ ಅರಿಶಿನ ಕೊಂಬು, ನಿಂಬೇಹಣ್ಣು, ಕಜ್ಜೂರ, ಪಂಚ ಲೋಹ, ಕಾದೋಲೆ ಕರಿಮಣಿಗೆ ಅಭಿಷೇಕ ನೆರವೇರಿಸಿ ಮಡಿಕೆಯಲ್ಲಿ ಕಳಶವಿಟ್ಟು ಹಸಿ ಕರಗವನ್ನು ಪೂಜಿಸಿ ನಂತರ ಕರಗವನ್ನು ನಿರ್ದಿಷ್ಟ ಎತ್ತರಕ್ಕೆ ಬೇವಿನ ಸೊಪ್ಪನ್ನು ಸುತ್ತಿ, ಮಲ್ಲಿಗೆ ಹೂವಿನಿಂದ ಸಿಂಗರಿಸಿ, ಕರಗದ ತುದಿಗೆ ನಿಂಬೇಹಣ್ಣು, ರಜತ ಛತ್ರಿಯ ಧರಿಸಿ, ದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಿ ಅಲಂಕರಿಸುತ್ತಾರೆ. ಬುಧವಾರ ಸಂಜೆ, ಗುರುವಾರ, ಶುಕ್ರವಾರ ಹಾಗೂ ಶನಿವಾರ ಕರಗವು ಇಟ್ಟಿಗೆಗೂಡಿನ ಎಲ್ಲಾ ಬೀದಿಗಳಲ್ಲೂ ಸಂಚರಿಸಿ ಪೂಜೆ ಸ್ವೀಕರಿಸಲು ಬರುವ ದೇವಿಯನ್ನು ಭಕ್ತಾದಿಗಳು ತಮ್ಮ ಮನೆಯಲ್ಲಿ ಕೂರಿಸಿ ದೇವಿಗೆ ಹಾಲು, ಮಜ್ಜಿಗೆ, ಪಾನಕ, ಕೋಸಂಬರಿ– ಹೀಗೆ ನಾನಾ ವಿಧವಾದ ಪ್ರಸಾದಗಳನ್ನು ನೈವೇದ್ಯ ಮಾಡಿ ಪೂಜಿಸುತ್ತಾರೆ.

ಯಾವ ಭೇದ–ಭಾವವಿಲ್ಲದೆ ಹರಕೆ ಇರುವ ಎಲ್ಲರ ಮನೆಯಲ್ಲೂ ಕರಗವನ್ನು ಇಳಿಸಲಾಗುತ್ತದೆ. ಹೀಗೆ ಕರಗ ಇಳಿಸಲು ಹರಕೆ ಇರುವ ಕನ್ಯೆಯರು ಮನೆಯಲ್ಲಿ ಕರಗವನ್ನು ಕೂರಿಸಿ ವಿವಾಹ ಭಾಗ್ಯಕ್ಕಾಗಿ ಮಾಂಗಲ್ಯ ಪೂಜೆ ನೆರವೇರಿಸುತ್ತಾರೆ, ಮುತ್ತೈದೆ ಭಾಗ್ಯಕ್ಕಾಗಿ ಮಹಿಳೆಯರು ದೇವಿಗೆ ಮಾಂಗಲ್ಯ ತೊಡಿಸಿ ಮಡಿಲಕ್ಕಿ ತುಂಬಿಸಿ ಪ್ರಾರ್ಥಿಸುತ್ತಾರೆ. ಸಂತಾನಪ್ರಾಪ್ತಿಗಾಗಿ ಹೆಂಗಳೆಯರು ದೇವಿಗೆ ಸೀರೆ ಕುಪ್ಪಸವಿಟ್ಟು ಪೂಜಿಸುತ್ತಾರೆ. ವಿದ್ಯಾರ್ಥಿಗಳು ವಿದ್ಯಾದೇವಿಯ ಮುಂದೆ ಪುಸ್ತಕವನ್ನಿಟ್ಟು ವಿದ್ಯಾರ್ಜನೆಗಾಗಿ ಪ್ರಾರ್ಥಿಸುತ್ತಾರೆ. ಹೀಗೆ ಭಕ್ತಾದಿಗಳು ಹಲವಾರು ಬಗೆಯಲ್ಲಿ ದೇವಿಯನ್ನು ಆರಾಧಿಸುತ್ತಾರೆ. ಹಾಗೆಯೇ ಒಳಿತನ್ನು ಕಂಡಿದ್ದಾರೆ, ಕಾಣುತ್ತಿದ್ದಾರೆ.

ಕರಗ ಉತ್ಸವದ ಪ್ರಮುಖ ಆಕರ್ಷಣೆ: 18–05–2024ರ ಶನಿವಾರ ಸಂಜೆ 8 ಗಂಟೆಗೆ ಅದ್ದೂರಿ ಮೈಸೂರು ಕರಗ ಮಹೋತ್ಸವದ ಮೆರವಣಿಗೆಯನ್ನು ಟ್ರಸ್ಟಿನ ಅಧ್ಯಕ್ಷರು ಹಾಗೂ ಮಾಜಿ ಶಾಸಕರೂ ಆದ ಸಂದೇಶ್ ನಾಗರಾಜ್ ಅವರು ಉದ್ಘಾಟಿಸಲಿದ್ದಾರೆ. ಮೈಸೂರು ನಗರ ಮೆರವಣಿಗೆಗಾಗಿ ಶಕ್ತಿ ಸ್ವರೂಪಿಣಿಯು ಮಲ್ಲಿಗೆಯ ಮಂಟಪದಲ್ಲಿ ಜಗಮಗಿಸುವ ದೀಪಾಲಂಕಾರಗಳೊಂದಿಗೆ ಶಂಕುಚಕ್ರ, ಅಭಯಹಸ್ತೆಯಾಗಿ–ತ್ರಿಶೂಲ, ಡಮರುಗ, ಖಡ್ಗ ಧಾರಿಣಿಯಾಗಿ ನಗುಮುಖದಿ ಅಂದದಿ ಶೃಂಗಾರಗೊಂಡು ಮಲ್ಲಿಗೆಯ ಪರಿಮಳದಿ, ಮಲ್ಲಿಗೆ ಹಾಸಿನಲ್ಲಿ ವಯ್ಯಾರದಿ ನಡೆದು ಬರುತ್ತಲೇ, ವರುಣನು ತುಂತುರು ಹನಿಯೊಳು ಸ್ವಾಗತಿಸುತ್ತಾನೆ. ಇದರೊಂದಿಗೆ ನೆರೆದ ಭಕ್ತ ಸಮೂಹವಂತೂ ದೇವಿಯ ಅಂದದಿ ಮೈಮರೆತು ಭಕ್ತಿಯಿಂದ ಕೈ ಎತ್ತಿ ಮುಗಿದು ಮೈಸೂರು ಕರಗದ ದರ್ಶನ ಪಡೆದ ನಾವೇ ಧನ್ಯರು ಎಂದು ಭಾವ ಪರವಶಕ್ಕೊಳಗಾಗುತ್ತಾರೆ.

ದೇವಸ್ಥಾನದಿಂದ ಭಕ್ತಾದಿಗಳ ಪೂಜೆ ಸ್ವೀಕರಿಸುತ್ತಾ ಹೊರಟು ರಾ. 10 ಗಂಟೆಗೆ ನಗರದ ಪ್ಯಾಲೆಸ್ ಆಫೀಸ್ ರಸ್ತೆ, ರಾ. 11 ಗಂಟೆಗೆ ನೂರಡಿ ರಸ್ತೆ, ಮಧ್ಯರಾತ್ರಿ 12 ಗಂಟೆಗೆ ನಾರಾಯಣ ಶಾಸ್ತ್ರಿ ರಸ್ತೆ, ರಾ. 1 ಗಂಟೆಗೆ ನಲ್ಲಪ್ಪ ಠಾಣಾ ರಸ್ತೆ ರಾ. 1.30ಕ್ಕೆ ಶಿವರಾಂಪೇಟೆ, ಸಯ್ಯಾಜಿರಾವ್ ರಸ್ತೆ, ರಾ. 2 ಗಂಟೆಗೆ ಮಿಷನ್ ಆಸ್ಪತ್ರೆ ರಸ್ತೆ, ರಾ. 3 ಗಂಟೆಗೆ ಕಬೀರ್ ರಸ್ತೆ, ಕಾಳಮ್ಮ ಗುಡಿ ರಸ್ತೆ, ಇರ್ವಿನ್ ರಸ್ತೆ, ಮುಂಜಾನೆ 4 ಗಂಟೆಗೆ ಕುರುಬಗೇರಿ, ಕುಂಬಾರಗೇರಿ, 5 ಗಂಟೆಗೆ ಅಶೋಕಾ ರಸ್ತೆ, ಬೆಳಿಗ್ಗೆ 6.30ಕ್ಕೆ ನಜರ್‌ಬಾದ್, ಬೆಳಿಗ್ಗೆ 8 ಗಂಟೆಗೆ ಮೃಗಾಲಯ ರಸ್ತೆಯ ಮಾರ್ಗವಾಗಿ ದೇವಸ್ಥಾನಕ್ಕೆ ಮೆರವಣಿಗೆ ಸಾಗಲಿದೆ.

ಅನೇಕ ವಿಧವಾದ ವಿದ್ಯುತ್ ದೀಪಾಲಂಕಾರಗಳೊಂದಿಗೆ, ನವೀನ ಪಂಬೈ, ಸಿಲಂಬು, ಉಡಿಕ್ಕೈ, ಸಂಗೀತ ನಾಟ್ಯ, ಇದರೊಂದಿಗೆ ನಾದಸ್ವರ ವಾದ್ಯ, ಬ್ಯಾಂಡ್ ಸೆಟ್, ವೀರಗಾಸೆ, ದೇವರಕುಣಿತ, ಕಂಸಾಳೆ, ಕೊಂಬು, ಕಹಳೆ, ಗಾರುಡ ಗೊಂಬೆ ಚನ್ನಪಟ್ಟಣ ತಮಟೆ ಹಾಗೂ ಇನ್ನೂ ಹಲವು ಕಲಾತಂಡಗಳು ಪಾಲ್ಗೊಳ್ಳುತ್ತವೆ.

ರಾತ್ರಿಯಿಡೀ ಅಸಂಖ್ಯಾತ ಭಕ್ತಾದಿಗಳ ವೈಭವದ ಪೂಜೆಯನ್ನು ಸ್ವೀಕರಿಸಿ, ಕರಗವು ಮರುದಿನ 19–05–2024ರ ಬೆಳಿಗ್ಗೆ 9 ಗಂಟೆಗೆ ದೇವಸ್ಥಾನ ತಲುಪುತ್ತದೆ. ರಾತ್ರಿಯ ಮೆರವಣಿಗೆಯ ವೈಭವವನ್ನು ಹೇಳತೀರದು. ಹೆಂಗಸರಿಗೆ ಆಕರ್ಷಕ ಕಲಾತಂಡಗಳು, ಹಿರಿಯರಿಗೆ ಶಾಸ್ತ್ರೀಯ ವಾದ್ಯಗಳು, ಯುವಕರಿಗೆ, ಮಕ್ಕಳಿಗೆ ಬ್ಯಾಂಡ್ ಸೆಟ್ ಹಾಗೂ ಗ್ರಾಮೀಣ ತಮಟೆಗಳು ಹೀಗೆ ಎಲ್ಲರಿಗೂ ಆ ರಾತ್ರಿ ಸಂಭ್ರಮ.

ಕರಗ ಮಹೋತ್ಸವವು ಶ್ರದ್ಧಾ ಭಕ್ತಿಯ ಪ್ರತೀಕ. ಇಲ್ಲಿ ಹಲವಾರು ಕಟ್ಟುಪಾಡುಗಳಿವೆ. ಕರಗ ಪ್ರಾರಂಭವಾಗಿ ಕಂಕಣ ಕಟ್ಟಿದ ನಂತರ ಕರಗ ಮುಗಿಯುವವರೆಗೂ ಇಲ್ಲಿಯ ಜನ ಊರನ್ನು ಬಿಟ್ಟು ಹೋಗುವುದಿಲ್ಲ. ಕರಗವನ್ನು ಮನೆಯಲ್ಲಿ ಕೂರಿಸುವ ಮುನ್ನ ಮನೆಯನ್ನು ಶುಚಿಮಾಡಿ ಬಹಳ ಕಟ್ಟುನಿಟ್ಟಿನ ಮಡಿಯೊಂದಿಗೆ ಶ್ರದ್ಧೆಯಿಂದ ಪೂಜಿಸುತ್ತಾರೆ. ಇಲ್ಲಿ ಮದುವೆಯಾಗದವರಿಗೆ ಮಾತ್ರ ಕರಗ ಹೊರಲು ಅವಕಾಶ. ಅವರೂ ಸಹ ಇಲ್ಲಿನ ಕಟ್ಟುಪಾಡುಗಳಿಗೆ ಒಳಪಟ್ಟು ಶುಚಿ ಹಾಗೂ ಉಪವಾಸ ವ್ರತದೊಂದಿಗೆ ಕರಗದ ಐದೂ ದಿನಗಳು ದೇವಸ್ಥಾನದಲ್ಲಿಯೇ ತಂಗಿರುತ್ತಾರೆ. ಅಂತೆಯೇ ಕರಗ ಹೊರಲು ಮಡಿವಾಳ ಸಮಾಜದವರು ದೇವಿಯ ತಾಯಿಯ ಮನೆಯವರೆಂಬ ಪ್ರತೀತಿಯಿಂದ ವಿಶೇಷವಾಗಿ ಪರಿಗಣಿತರಾಗಿದ್ದಾರೆ. ಅವರನ್ನು ಹೊರತುಪಡಿಸಿ ಮತ್ತೆಲ್ಲಾ ಸಮಾಜದ ಮದುವೆಯಾಗದ ತರುಣರಿಗೂ ಮುಕ್ತ ಅವಕಾಶವಿರುತ್ತದೆ.

ಪ್ರತಿ ವರ್ಷ ಕರಗ ಮಹೋತ್ಸವದಲ್ಲಿ ಭಾಗವಹಿಸಿ ಭಕ್ತಿಯಿಂದ ಪೂಜಿಸುವವರ ಇಷ್ಟಾರ್ಥಗಳೆಲ್ಲವೂ ನೆರವೇರಿದ ಬಗ್ಗೆ ಸಾಕಷ್ಟು ನಿದರ್ಶನಗಳಿವೆ. ಮಕ್ಕಳಿಲ್ಲದವರಿಗೆ ಪುತ್ರ ಪ್ರಾಪ್ತಿ, ಮದುವೆಯಾಗದವರಿಗೆ ಕಲ್ಯಾಣ ಪ್ರಾಪ್ತಿ, ನಾನಾ ಕಾರ್ಯಸಿದ್ಧಿ, ಹೀಗೆ ಭಕ್ತಾದಿಗಳ ಇಷ್ಟಾರ್ಥಗಳೆಲ್ಲವನ್ನು ಪೂರೈಸುವ ಮೈಸೂರು ಕರಗ ಮಹೋತ್ಸವಕ್ಕೆ ನಾನಾ ಕಡೆಗಳಿಂದ ಜನರು ಬಂದು, ಪೂಜೆ ಸಲ್ಲಿಸಿ ಹೋಗುತ್ತಾರೆ.

ಬೈಕ್‌ಗಳ ಮುಖಾಮುಖಿ ಡಿಕ್ಕಿ; ಓರ್ವ ಸಾವು

ಮೈಸೂರು, ಮೇ 17(ಎಸ್‌ಪಿಎನ್)– ಎರಡು ಬೈಕ್‌ಗಳ ನಡುವೆ ಡಿಕ್ಕಿ ಸಂಭವಿಸಿ ಓರ್ವ ಸಾವನ್ನಪ್ಪಿ, ಇಬ್ಬರು ಮಕ್ಕಳು ಗಂಭೀರವಾಗಿ ಗಾಯಗೊಂಡಿರುವ ಘಟನೆ ಮೈಸೂರು ರಿಂಗ್ ರೋಡ್‌ನ ದೇವೇಗೌಡ ವೃತ್ತದ ಬಳಿ ಶುಕ್ರವಾರ ನಡೆದಿದೆ.



ಜಮೀಲ್

ಬನ್ನೂರು ನಿವಾಸಿ ಜಮೀಲ್(45) ಅಪಘಾತದಲ್ಲಿ ಸಾವಿಗೀಡಾಗಿದ್ದು, ಇವರ ತಂಗಿ ಮಕ್ಕಳಾದ ಮುಬಾರಕ್ (12), ಅವೇಸ್(14) ಅವರಿಗೆ ಗಂಭೀರ ಗಾಯಗಳಾಗಿವೆ. ಮತ್ತೊಬ್ಬ ಬೈಕ್ ಸವಾರನಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ವಿವರ: ಜಮೀಲ್ ಅವರು ಶುಕ್ರವಾರ ಮಧ್ಯಾಹ್ನ ನಮಾಜ್ ಮುಗಿಸಿ ತಂಗಿ ಮಕ್ಕಳಾದ ಮುಬಾರಕ್, ಅವೇಸ್ ಅವರೊಂದಿಗೆ ಬೈಕ್‌ನಲ್ಲಿ ಮೈಸೂರಿಂದ ಬನ್ನೂರಿಗೆ ತೆರಳುತ್ತಿದ್ದರು. ಈ ವೇಳೆ ಎದುರಿಗೆ ಬಂದ ಮತ್ತೊಂದು ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡ ಜಮೀಲ್ ಮತ್ತು ಮಕ್ಕಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಜಮೀಲ್ ಮಾರ್ಗ ಮಧ್ಯೆ ಸಾವನ್ನಪ್ಪಿದ್ದು, ಮಕ್ಕಳನ್ನು ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿದೆ. ಮತ್ತೋರ್ವ ಬೈಕ್ ಸವಾರ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಪಾಯದಿಂದ ಪಾರಾಗಿದ್ದು, ಆತನ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ. ಈ ಸಂಬಂಧ ಸಿದ್ದಾರ್ಥ ಸಂಚಾರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಖದೀಮರ ಸೆರೆ: 26ಲಕ್ಷ ಮೌಲ್ಯದ 392ಗ್ರಾಂ ಚಿನ್ನಾಭರಣ ವಶ

ಮೈಸೂರು, ಮೇ 17 (ಆರ್‌ಕೆ)– ಮನೆಗಳ್ಳರನ್ನು ಬಂಧಿಸಿರುವ ಉದಯಗಿರಿ ಠಾಣೆ ಪೊಲೀಸರು, 26 ಲಕ್ಷರೂ ಬೆಲೆ ಬಾಳುವ 392.5 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ರಾಜೀವನಗರ 2ನೇ ಹಂತದ ನಿವಾಸಿ ಸೈಯದ್ ಜಾನಿ ಅವರ ಮಗ ಸೈಯದ್ ಅಸ್ಲಾಂ ಬಂಧಿತ ಆರೋಪಿ. ಶಕ್ತಿ ನಗರದ ಪರಾಶಕ್ತಿ ರಸ್ತೆಯಲ್ಲಿರುವ ಜಿ.ಅಶೋಕ್‌ಕುಮಾರ್ ಎಂಬುವರ ಮನೆ ಬೀಗ ಮುರಿದು ಮೇ11 ರಂದು ರಾತ್ರಿ ಕೊಠಡಿಯ ಅಲ್ಮೇರಾದಲ್ಲಿದ್ದ 2ಚೈನು, 3 ಉಂಗುರ, 3 ನೆಕ್ಲೇಸ್, ಬಳೆಗಳು ಸೇರಿದಂತೆ 395ಗ್ರಾಂ ತೂಕದ ಚಿನ್ನದ ಆಭರಣಗಳೊಂದಿಗೆ ಪರಾರಿಯಾಗಿದ್ದ ಆತನನ್ನು ಬಂಧಿಸಿರುವ ಪೊಲೀಸರು, ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಡಿಸಿಪಿ ಎಸ್.ಜಾಹ್ನವಿ ಅವರ ಮಾರ್ಗದರ್ಶನದಂತೆ ದೇವರಾಜ ಉಪವಿಭಾಗದ ಎಸಿಪಿ ಶಾಂತ ಮಲ್ಲಪ ನೇತೃತ್ವದಲ್ಲಿ ಉದಯಗಿರಿ ಠಾಣೆ ಇನ್‌ಸ್ಪೆಕ್ಟರ್ ಕೆಎನ್.ಸುಧಾಕರ್, ಸಬ್‌ಇನ್‌ಸ್ಪೆಕ್ಟರ್‌ಗಳಾದ ಹೆಚ್‌ಎಂ. ಆನಂದ, ಬಿ.ಜಿ.ನಾಗರಾಜ ನಾಯ್ಕ, ಸಿಬ್ಬಂದಿಗಳಾದ ಸಿದ್ದಿಖ್ ಅಹ್ಮದ್, ಪ್ರಕಾಶ್, ಸಂತೋಷ್ ಪವಾರ್, ಮಲ್ಲಿ ಕಾರ್ಜುನ ಚೌಗಲೆ, ಸಮೀರ್ ಪಟೇಲ್ ಬಿರಾದಾರ್, ನಾಜಿಯ ಷರೀಫ್ ಹಾಗೂ ಇತರರು ಆರೋಪಿ ಪತ್ತೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರಲ್ಲಿ ಉತ್ತಮ ಮಳೆ

ಕೆಆರ್‌ಎಸ್ ಜಲಾಶಯಕ್ಕೆ ಒಳಹರಿವು ಹೆಚ್ಚಳ

ಮೈಸೂರು, ಮೇ 17(ಎಂಕೆ)– ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಶುಕ್ರವಾರ ಉತ್ತಮ ಮಳೆಯಾಗಿದ್ದು, ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಇನ್ನೂ ನಾಲ್ಕೈದು ದಿನ ಮಳೆ ಮುಂದುವರಿಯುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮೈಸೂರಿನಲ್ಲಿ ಶುಕ್ರವಾರ ಸಂಜೆ ಆರಂಭವಾದ ಮಳೆ ಕೆಲವೆಡೆ ಸಾಧಾರಣವಾಗಿ ಬಿದ್ದರೆ, ಹಲವು ಭಾಗಗಳಲ್ಲಿ ಧಾರಾಕಾರವಾಗಿ ಸುರಿದಿದೆ. ನಗರದ ಬನ್ನಿ ಮಂಟಪ, ಕೆ.ಟಿ.ಸ್ಟ್ರೀಟ್, ಕುವೆಂಪುನಗರ, ಸಿದ್ಧಾರ್ಥ ಬಡಾವಣೆ, ಜೆ.ಸಿ.ನಗರ, ರಾಮಕೃಷ್ಣ ನಗರ, ಬೋಗಾದಿ ಭಾಗದಲ್ಲಿ ಉತ್ತಮ ಮಳೆಯಾಗಿದೆ. ಗಾಳಿ ಇಲ್ಲದೆ ಒಳ್ಳೆ ಹದ ಮಳೆಯಾಗಿದೆ. ಗಾಳಿ ಇಲ್ಲದ ಕಾರಣ ಯಾವುದೇ ಹಾನಿ ವರದಿಯಾಗಿಲ್ಲ ಎಂದು ನಗರ ಪಾಲಿಕೆ ಕಂಟ್ರೋಲ್ ರೂಂ ಸಿಬ್ಬಂದಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಕೊಡಗಿನಲ್ಲಿ ಮಳೆಯಾಗುತ್ತಿರುವುದರಿಂದ ಕೆಆರ್‌ಎಸ್ ಜಲಾಶಯಕ್ಕೆ ಒಳಹರಿವಿನ ಪ್ರಮಾಣದಲ್ಲಿ ಹೆಚ್ಚಳವಾಗಿದೆ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿ ಮೂಲಗಳು ತಿಳಿಸಿವೆ. ಸುಳಿಗಾಳಿ ಪರಿಣಾಮದಿಂದ ರಾಜ್ಯಾದ್ಯಂತ ಮಳೆಯಾಗುತ್ತಿದ್ದು, ಮುಂದಿನ ಒಂದು ವಾರ ರಾಜ್ಯದಲ್ಲಿ ಮಳೆ ಮುಂದುವರಿಯಲಿದೆ. ಮೇ 19 ಹಾಗೂ 20ರಂದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ತುಮಕೂರು ಜಿಲ್ಲೆಗಳಲ್ಲಿ 6 ರಿಂದ 11 ಸೆಂ.ಮೀ. ವರೆಗೆ ಮಳೆಯಾಗುವ ಸಾಧ್ಯತೆ ಇರುವುದರಿಂದ ಯಲ್ಲೋ ಅಲರ್ಟ್‌ನ ಮುನ್ಸೂಚನೆ ನೀಡಲಾಗಿದೆ.



ಮುಂದಿನ 24 ಗಂಟೆಗಳಲ್ಲಿ ದಕ್ಷಿಣ ಕನ್ನಡ, ಉಡುಪಿ, ಚಾಮರಾಜನಗರ, ಹಾಸನ, ಕೊಡಗು, ಮಂಡ್ಯ, ಮೈಸೂರು ಹಾಗೂ ಶಿವಮೊಗ್ಗ, ಮೇ 19 ರಂದು ಉತ್ತರ ಕನ್ನಡ, ಮೇ 20ಕ್ಕೆ ದಕ್ಷಿಣ ಕನ್ನಡ, ಚಾಮರಾಜನಗರ, ಚಿಕ್ಕಬಳ್ಳಾಪುರ, ಹಾಸನ, ಕೊಡಗು, ಮಂಡ್ಯ, ಮೈಸೂರು ಹಾಗೂ ತುಮಕೂರು, ಮೇ 21ಕ್ಕೆ ದಕ್ಷಿಣ ಕನ್ನಡ, ಉಡುಪಿ, ಹಾಸನ, ಮಂಡ್ಯ, ಮೈಸೂರು ಹಾಗೂ ತುಮಕೂರು ಜಿಲ್ಲೆಗಳಿಗೆ ಯಲ್ಲೋ ಅಲರ್ಟ್ ಘೋಷಿಸಲಾಗಿದೆ.

ಮುಂಬೈ ವಿರುದ್ಧ ಲಕ್ನೋಗೆ ಭರ್ಜರಿ ಜಯ



ಮುಂಬೈ, ಮೇ 17– ಕೆ.ಎಲ್.ರಾಹುಲ್ ಹಾಗೂ ನಿಕೋಲಸ್ ಪೂರನ್ ಅವರ ಅರ್ಧ ಶತಕದ ನೆರವಿನಿಂದ ಮುಂಬೈ ಇಂಡಿಯನ್ಸ್ ವಿರುದ್ಧ ಲಕ್ನೋ ಸೂಪರ್ ಜೈಂಟ್ಸ್ 18ರನ್ ಜಯ ಸಾಧಿಸಿದೆ.

ಇಲ್ಲಿನ ವಾಂಖೇಡೆ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 214 ರನ್ ಗಳಿಸಿತು. ತಂಡದ ಪರ ನಾಯಕ ರಾಹುಲ್ 55, ಮಾರ್ಕಸ್ ಸ್ಟೊಯ್ನಿಸ್ 28, ದೀಪಕ್ ಹೂಡಾ 11, ನಿಕೋಲಸ್ ಪೂರನ್ 75, ಆಯುಷ್ ಬದೋನಿ 22, ಕೃನಾಲ್ ಪಾಂಡ್ಯ 12 ರನ್ ಗಳಿಸಿದರು. ಮುಂಬೈ ಪರ ಎನ್.ತುಷಾರ್, ಪಿಯೂಷ್ ಚಾವ್ಲಾ ತಲಾ 3 ವಿಕೆಟ್ ಪಡೆದರು.

215 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಮುಂಬೈ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 196 ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಪರ ರೋಹಿತ್ ಶರ್ಮಾ 68, ಡೆವಾಲ್ಡ್ ಬ್ರೇವಿಸ್ 23, ಇಶಾನ್ ಕಿಶನ್ 14, ಹಾರ್ದಿಕ್ ಪಾಂಡ್ಯ 16, ನಮನ್ ಧೀರ್ 62 ರನ್ ಗಳಿಸಿದರು. ಲಕ್ನೋ ಪರ ನವೀನ್ ಉಲ್ ಹಕ್ ಹಾಗೂ ರವಿ ಬಿಷ್ಣೋಯಿ ತಲಾ 2, ಮೊಹ್ಸಿನ್ ಖಾನ್, ಕೃನಾಲ್ ಪಾಂಡ್ಯ ತಲಾ ಒಂದೊಂದು ವಿಕೆಟ್ ಕಬಳಿಸಿದರು. ನಿಕೋಲಸ್ ಪೂರನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಂದಿನ ಪಂದ್ಯ (ಮೇ 18)
ರಾಯಲ್ ಚಾಲೆಂಜರ್ಸ್ ಬೆಂಗಳೂರು / ಚೆನ್ನೈ ಸೂಪರ್ ಕಿಂಗ್ಸ್
ಸ್ಥಳ: ಬೆಂಗಳೂರು, ಎಂ.ಚಿನ್ನಸ್ವಾಮಿ ಕ್ರೀಡಾಂಗಣ
ಸಮಯ: ಸಂಜೆ 7.30ಕ್ಕೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಜಮೀನು ಮಾರಾಟಕ್ಕಿದೆ

ಮೈಸೂರು ತಾ. ಜಯಪುರ ಹೋಬಳಿ, ಮೈಸೂರು ಹೆಚ್.ಡಿ.ಕೋಟೆ ಮುಖ್ಯ ರಸ್ತೆಯಲ್ಲಿ ಕಮರ್ಷಿಯಲ್ ಉಪಯೋಗಕ್ಕೆ ಸೂಕ್ತವಾದ 0.20 ಗುಂಟೆ ಮತ್ತು ತಳ್ಳೂರು ಸರ್ಕಲ್ ಮುಂದೆ ಲೇಔಟ್ ಮಾಡಲು 1 ಎಕರೆ 04 ಗುಂಟೆ ಮಾವಿನತೋಟ ಇದೆ. ಪೆರಿಫೆರಲ್ ರಿಂಗ್ ರಸ್ತೆಯ ಪಕ್ಕದಲ್ಲಿ 3 ಎಕರೆ 07 ಗುಂಟೆ ಮತ್ತು 4 ಎಕರೆ 10 ಗುಂಟೆ ಮಹಾಲಕ್ಷ್ಮಿ ಲೇಔಟ್ ಪಕ್ಕ 0.20 ಗುಂಟೆ, ಮದ್ದೂರುಹುಂಡಿ 0.32 ಗುಂಟೆ,ಮದ್ದೂರು 0.25 ಗುಂಟೆ ಜಮೀನುಗಳು ಮಾರಾಟಕ್ಕಿವೆ. ಸಂಪರ್ಕಿಸಿ:

9945661696 / 9663793666

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಶಿವೈಕ್ಯ




ಶ್ರೀಮತಿ ರಾಜೇಶ್ವರಿ ಪರಮೇಶ್ವರಪ್ಪ
06.07.1966 - 16.05.2024

ಗಂಗೋತ್ರಿ ಬಡಾವಣೆ ನಿವಾಸಿಯಾಗಿದ್ದ ಇವರು ದಿನಾಂಕ: 16.05.2024ರಂದು ಶಿವೈಕ್ಯರಾದರೆಂದು ತಿಳಿಸಲು ವಿಷಾಧಿಸುತ್ತೇವೆ ಇವರ ಅಂತ್ಯಸಂಸ್ಕಾರವನ್ನು ದಿನಾಂಕ: 19.05.2024 (ಭಾನುವಾರ) ಚಿತ್ರದುರ್ಗ ಜಿಲ್ಲೆಯ ನವಣೆಕೆರೆಯಲ್ಲಿ ನೆರವೇರಿಸಲಾಗುತ್ತದೆ.


ದುಃಖತಪ್ತರು:
ಪತಿ, ಮಕ್ಕಳು ಹಾಗೂ ಬಂಧುಮಿತ್ರರು

3ನೇ ವರ್ಷದ ಪುಣ್ಯಸ್ಮರಣೆ ಸವಿನೆನಪು



ಶ್ರೀ. ಹೆಚ್. ಬಸಪ್ಪನವರು
ಮೈಸೂರು ತಾ॥ ಇಲವಾಲ ಹೋಬಳಿ, ಬೊಮ್ಮೇನಹಳ್ಳಿ

ನೀವು ನಮ್ಮನ್ನಗಲಿದರೂ ಸದಾ ನಿಮ್ಮ ನೆನಪಿನಲ್ಲಿರುವ ಕುಟುಂಬವರ್ಗ
ದುಃಖತಪ್ತರು: ಶ್ರೀಮತಿ ಲಕ್ಷ್ಮಮ ಮತ್ತು ಮಕ್ಕಳು, ಮೊಮ್ಮಕ್ಕಳು, ಕುಟುಂಬವರ್ಗದವರು, ಗ್ರಾಮಸ್ಥರು ಹಾಗೂ ಬಂಧುಮಿತ್ರರು.



ಕಳೆದಿದೆ

ಪಿ.ಎಂ. ಮಂದಣ್ಣ ಇವರಿಗೆ ಸೇರಿದ ಸ್ವತ್ತು, ಮೈಸೂರು ಸಿಟಿ, ಬನ್ನಿಮಂಟಪ 'ಸಿ' ಬಡಾವಣೆಯ ಮನೆ ನಂ. 410ರ 40X68 ಅಳತೆಯ ಮಂಜೂರಾತಿ ಪತ್ರ, ಸ್ವಾಧೀನ ಪತ್ರ, ವರ್ಗಾವಣೆ ಪತ್ರ, ಟೈಟಲ್ ಡೀಡ್ ಕಳೆದುಹೋಗಿರುತ್ತದೆ. ಸಿಕ್ಕಿದಲ್ಲಿ ಸಂಪರ್ಕಿಸಿ: **9845647481**

ಎಸ್‌ಎಸ್‌ಎಲ್‌ಸಿ ಅನುತ್ತೀರ್ಣರಾದವರಿಗೆ ವಿಶೇಷ ತರಗತಿ, ಪರೀಕ್ಷೆ–2 ಮುಂದೂಡಿಕೆ

ಸಿಎಂ ಸೂಚನೆ ಮೇರೆಗೆ ಶಿಕ್ಷಣ ಇಲಾಖೆ ಆದೇಶ

ಮೈಸೂರು, ಮೇ 17(ಎಸ್‌ಬಿಡಿ)– ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ–2ನ್ನು ಮುಂದೂಡಿ ಶಾಲಾ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಈ ಸಂಬಂಧ ಮೇ 15ರ ಸುತ್ತೋಲೆಯನ್ನು ಪರಿಷ್ಕರಣೆ ಮಾಡಿ, ಮೇ 29ರಿಂದ ಜೂ.13ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1ರಲ್ಲಿ ಅನುತ್ತೀರ್ಣರಾದವರು ಹಾಗೂ ಫಲಿತಾಂಶ ಸುಧಾರಣೆ ಅಗತ್ಯವುಳ್ಳ ಮಕ್ಕಳಿಗೆ ವಿಶೇಷ ಪರಿಹಾರ ಬೋಧನಾ ತರಗತಿಗಳನ್ನು ನಡೆಸುವಂತೆ ಸೂಚಿಸಲಾಗಿದೆ. ಹಾಗೆಯೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ–2ನ್ನು ಜೂ.14ರಿಂದ ಪ್ರಾರಂಭಿಸಲು ನಿರ್ಧರಿಸಲಾಗಿದೆ.

ಕಳೆದ ಮಾರ್ಚ್–ಏಪ್ರಿಲ್‌ನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1ರಲ್ಲಿ ಅನುತ್ತೀರ್ಣರಾದ ಹಾಗೂ ಸಿ ಮತ್ತು ಸಿ+ ಪಡೆದ ವಿದ್ಯಾರ್ಥಿಗಳ ಫಲಿತಾಂಶ ಸುಧಾರಣೆಗೆ ವಿಶೇಷ ಪರಿಹಾರ ಬೋಧನಾ ತರಗತಿಗಳನ್ನು ಮೇ 15ರಿಂದ ಜೂ.5ರವರೆಗೆ ನಡೆಸುವಂತೆ ಸುತ್ತೋಲೆ ಹೊರಡಿಸಲಾಗಿತ್ತು. ಆದರೆ ಬೇಸಿಗೆ ರಜಾ ಅವಧಿಯಲ್ಲಿ ವಿಶೇಷ ತರಗತಿ ನಡೆಸಬೇಕೆಂಬ ಇಲಾಖೆ ಧೋರಣೆಗೆ ಶಿಕ್ಷಕ ವೃಂದ ಆಕ್ರೋಶ ವ್ಯಕ್ತಪಡಿಸಿತ್ತು. ಈ ಬಗ್ಗೆ ವಿಧಾನಪರಿಷತ್ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಗಮನಕ್ಕೆ ತಂದು ಪರಿಷ್ಕರಣೆಗೆ ಆಗ್ರಹಿಸಿದ್ದರು.

ಮರಿತಿಬ್ಬೇಗೌಡರ ಧನ್ಯವಾದ: ಪರಿಹಾರ ಬೋಧನೆ ತರಗತಿ ಅವಧಿ ಹಾಗೂ ಪರೀಕ್ಷೆ–2ನ್ನು ಮುಂದೂಡಿರುವ ಹಿನ್ನೆಲೆಯಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಮುಖ್ಯಮಂತ್ರಿಗಳಿಗೆ ಧನ್ಯವಾದ ತಿಳಿಸಿದ್ದಾರೆ.

ಮೇ 28ರವರೆಗೆ ಶಿಕ್ಷಕರಿಗೆ ಬೇಸಿಗೆ ರಜೆ ಇದೆ. ರಜೆ ಅವಧಿಯಲ್ಲೇ ಎಸ್‌ಎಸ್‌ಎಲ್‌ಸಿ ಮೌಲ್ಯಮಾಪನ ಮಾಡಿದ್ದಾರೆ. ಲೋಕಸಭಾ ಚುನಾವಣೆಯಲ್ಲೂ ಕಾರ್ಯ ನಿರ್ವಹಿಸಿದ್ದಾರೆ. ಹಾಗಾಗಿ ಮೇ 15ರಿಂದ ವಿಶೇಷ ತರಗತಿಗಳನ್ನು ನಡೆಸಬೇಕೆಂಬ ಆದೇಶವನ್ನು ರದ್ದುಪಡಿಸುವಂತೆ ಎಲ್ಲಾ ಜಿಲ್ಲೆಗಳ ಪ್ರೌಢಶಾಲಾ ಶಿಕ್ಷಕರು ಒತ್ತಾಯಿಸಿದ್ದರು. ಈ ಬಗ್ಗೆ ನನಗೂ ಕರೆ ಮಾಡಿದ್ದರು. ಬೆಂಗಳೂರು ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಮೋಜಿಗೌಡ, ಈಶಾನ್ಯ ಶಿಕ್ಷಕರ ಕ್ಷೇತ್ರದ ಅಭ್ಯರ್ಥಿ ಡಿ.ಟಿ.ಶ್ರೀನಿವಾಸ್ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಮನವಿ ಮಾಡಿದ್ದರು. ಈ ಸಂಬಂಧ ನಾನು ಕೂಡ ಮುಖ್ಯಮಂತ್ರಿಗಳಿಗೆ ಕರೆ ಮಾಡಿ ಒತ್ತಾಯಿಸಿದ್ದೆ. ಆದರೂ ಶಿಕ್ಷಣ ಇಲಾಖೆ ಆದೇಶ ಹೊರಡಿಸದಿರುವ ಬಗ್ಗೆ ಮತ್ತೆ ಅವರ ಗಮನಕ್ಕೆ ತಂದಿದ್ದೆ. ಆಗ ಸಿಎಂ ಅವರು ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಯೊಂದಿಗೆ ಮಾತನಾಡಿ, ಬೇಸಿಗೆ ರಜೆಯನ್ನು ಮೇ 28ರವರೆಗೆ ಮುಂದುವರೆಸಬೇಕು ಹಾಗೂ ಪರೀಕ್ಷೆ–2ನ್ನು ಒಂದು ವಾರ ಮುಂದೂಡುವಂತೆ ಸೂಚಿಸಿದರು ಎಂದು ಮರಿತಿಬ್ಬೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂರನೇ ಪುಟದಿಂದ

ಡಿಕೆಶಿ 100 ಕೋಟಿ ಆಫರ್

ಹೀಗೆ ಹೇಳಿದರೆ 100 ಕೋಟಿ ರೂಪಾಯಿ ಕೊಡುವುದಾಗಿ ಆಫರ್ ನೀಡಿದ್ದರು ಎಂದು ದೇವರಾಜೇಗೌಡ ಹೇಳಿದ್ದಾರೆ. ಏನೇ ಸಮಸ್ಯೆಯಾದರೂ ನಾನು ನಿನ್ನನ್ನು ರಕ್ಷಿಸುತ್ತೇನೆ ಎಂದು ಡಿಕೆಶಿ ಭರವಸೆ ನೀಡಿದ್ದರು ಎಂದಿದ್ದಾರೆ.

ಪೆನ್‌ಡ್ರೈವ್ ರೆಡಿ ಮಾಡಿದ್ದೇ ಡಿ.ಕೆ.ಶಿವಕುಮಾರ್. ಈ ಪೆನ್‌ಡ್ರೈವ್ ಹ್ಯಾಂಡಲ್ ಮಾಡಲು ನಾಲ್ವರು ಸಚಿವರನ್ನು ನೇಮಕ ಮಾಡಿದ್ದರು. ಚೆಲುವರಾಯಸ್ವಾಮಿ, ಕೃಷ್ಣಭೈರೇಗೌಡ, ಪ್ರಿಯಾಂಕ ಖರ್ಗೆ ಹಾಗೂ ಮತ್ತೊಬ್ಬ ಸಚಿವರ ತಂಡ ರಚಿಸಿದರು. ಬಳಿಕ ನಿರಂತರವಾಗಿ ನನ್ನ ಮೇಲೆ ಒತ್ತಡ ತರುವ ಪ್ರಯತ್ನವನ್ನು ಡಿ.ಕೆ.ಶಿವಕುಮಾರ್ ಮಾಡಿದ್ದಾರೆ ಎಂದು ದೇವರಾಜೇಗೌಡ ದೂರಿದ್ದಾರೆ.

ಪ್ರಧಾನಿ ಮೋದಿ, ಬಿಜೆಪಿ ಹಾಗೂ ಕುಮಾರಸ್ವಾಮಿಗೆ ಕೆಟ್ಟ ಹೆಸರು ತರಲು ಈ ಸಂಚು ಮಾಡಿದ್ದಾರೆ. 100 ಕೋಟಿ ರೂಪಾಯಿ ಆಫರ್ ನೀಡಿದ್ದರು. 5 ಕೋಟಿ ರೂಪಾಯಿ ಅಡ್ವಾನ್ಸ್ ಮೊತ್ತವನ್ನು ಬೌರಿಂಗ್ ಕ್ಲಬ್‌ನ 110 ರೂಂ ನಂಬರ್‌ಗೆ ಕಳುಹಿಸಿದ್ದರು. ಚನ್ನರಾಯಪಟ್ಟಣದ ಗೋಪಾಲಸ್ವಾಮಿಯನ್ನು ಸಂಧಾನಕ್ಕೆ ಕಳುಹಿಸಿದ್ದರು. ಗೋಪಾಲಸ್ವಾಮಿ ಬಳಿ 5 ಕೋಟಿ ರೂಪಾಯಿ ನಗದು ಸಹ ಕೊಟ್ಟು ಕಳುಹಿಸಿದ್ದರು. ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ಮೂಲಕ ನನಗೆ ಆಫರ್ ನೀಡಲಾಗಿತ್ತು ಎಂದಿದ್ದಾರೆ.

ಡಿ.ಕೆ.ಶಿವಕುಮಾರ್ ಅವರ ಪ್ರಮುಖ ಉದ್ದೇಶ; ಹೆಚ್.ಡಿ.ಕುಮಾರಸ್ವಾಮಿ ನಾಯಕತ್ವ ಅಂತ್ಯಗೊಳಿಸುವುದೇ ಆಗಿದೆ ಎಂದು ದೇವರಾಜೇಗೌಡ ಹೇಳಿದ್ದಾರೆ. ಅವರ ಒತ್ತಡಕ್ಕೆ ನಾನು ಮಣಿಯದಿದ್ದಾಗ ನನ್ನ ಮೇಲೆ ಹಲವು ಕೇಸ್‌ಗಳನ್ನು ಹಾಕಿದ್ದಾರೆ ಎಂದು ಹೇಳಿದ್ದಾರೆ.

ಇದೇ ವೇಳೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಪೊಲೀಸರು ನನ್ನ ಮನೆಯಲ್ಲಿ ಪರಿಶೀಲನೆ ನಡೆಸಿದಾಗ ಅವರಿಗೆ ಪ್ರಜ್ವಲ್‌ಗೆ ಸಂಬಂಧಪಟ್ಟ ಯಾವುದೇ ಪೆನ್‌ಡ್ರೈವ್ ಅಥವಾ ಡಿ.ಕೆ.ಶಿವಕುಮಾರ್‌ಗೆ ಸಂಬಂಧಿಸಿದ ಆಡಿಯೋ ಸೇರಿದಂತೆ ಯಾವುದೇ ದಾಖಲೆಗಳು ಸಿಕ್ಕಿಲ್ಲ. ಅವರು ವಶಪಡಿಸಿಕೊಂಡಿರುವುದು ಕಾರ್ತಿಕ್‌ನ ಮನೆಯ ಸಿಸಿ ಕ್ಯಾಮರಾದಲ್ಲಿ ದಾಖಲಾಗಿದ್ದ ಆತನ ಪತ್ನಿಯ ಅಪಹರಣಕ್ಕೆ ಸಂಬಂಧಿಸಿದ್ದ ಪೆನ್‌ಡ್ರೈವ್ ಅಷ್ಟೇ. ಉಳಿದಂತೆ ಪೆನ್‌ಡ್ರೈವ್ ಹಂಚಿಕೆ ವಿಚಾರದಲ್ಲಿ ಡಿ.ಕೆ.ಶಿವಕುಮಾರ್ ಪಾತ್ರವಿರುವ ಎಲ್ಲಾ ದಾಖಲೆಗಳನ್ನು ಸುರಕ್ಷಿತವಾಗಿಟ್ಟಿದ್ದೇನೆ. ನಾನು ಹೊರಗೆ ಬರುತ್ತಿದ್ದಂತೆಯೇ ಅದನ್ನೆಲ್ಲಾ ಬಹಿರಂಗಪಡಿಸುತ್ತೇನೆ. ಆಗ ಸರ್ಕಾರವೇ ಪತನಗೊಳ್ಳುತ್ತದೆ ಎಂದು ದೇವರಾಜೇಗೌಡರು ಹೇಳುತ್ತಿದ್ದಂತೆಯೇ, ಅವರು ಕುಳಿತ್ತಿದ್ದ ಪೊಲೀಸ್ ವ್ಯಾನ್ ಅನ್ನು ಅದರ ಚಾಲಕ ಮುಂದಕ್ಕೆ ಚಲಾಯಿಸಿಕೊಂಡು ತೆರಳಿದ.

ವಿಚಾರಣೆ ಮೇ20ಕ್ಕೆ ಮುಂದೂಡಿಕೆ

ಆಲಿಸಿದ ನ್ಯಾಯಾಧೀಶರು, ಸೋಮವಾರಕ್ಕೆ ಆದೇಶ ಕಾಯ್ದಿರಿಸಿದರು. ಈ ಹಿನ್ನೆಲೆಯಲ್ಲಿ ರೇವಣ್ಣ ಅವರ ಜಾಮೀನು ಭವಿಷ್ಯ ಮೇ 20ಕ್ಕೆ ನಿರ್ಧಾರವಾಗಲಿದೆ.

ಕೈಮುಗಿಯುತ್ತೇನೆ ಬಿಟ್ಟುಬಿಡಿ: ಲೈಂಗಿಕ ದೌರ್ಜನ್ಯ ಹಾಗೂ ಅಪಹರಣ ಪ್ರಕರಣದ ಆರೋಪ ಹೊತ್ತಿರುವ ಮಾಜಿ ಸಚಿವ ಹೆಚ್.ಡಿ ರೇವಣ್ಣ ಕಾನೂನು ಬಿಟ್ಟು ನಾನೇನು ಮಾತನಾಡಲ್ಲ. ಕೈ ಮುಗಿಯುತ್ತೇನೆ ಬಿಟ್ಟುಬಿಡಿ ಎಂದು ಗರಂ ಆದ ಘಟನೆ ವಿಧಾನಸೌಧದಲ್ಲಿ ನಡೆದಿದೆ. ವಿಧಾನಸಭೆಯ ಕಾಗದ ಪತ್ರ ಸಮಿತಿ ಅಧ್ಯಕ್ಷರಾಗಿರುವ ಹೆಚ್.ಡಿ ರೇವಣ್ಣ ಅವರಿಂದು ಸಮಿತಿಯ ಸಭೆಗೆ ವಿಧಾನಸೌಧಕ್ಕೆ ಬಂದಿದ್ದರು. ಈ ವೇಳೆ ಮಾಧ್ಯಮಗಳಿಗೆ ಯಾವುದೇ ಪ್ರತಿಕ್ರಿಯೆ ಕೊಡದೆ 15 ನಿಮಿಷಗಳಲ್ಲೇ ಕಾಗದ ಪತ್ರ ಸಮಿತಿ ಸಭೆ ಮುಗಿಸಿ ಹೊರಟರು. ಸದ್ಯ ರೇವಣ್ಣ ಅವರನ್ನು ಕಾಗದ ಪತ್ರ ಸಮಿತಿ ಅಧ್ಯಕ್ಷ ಸ್ಥಾನದಿಂದ ಬದಲಾವಣೆ ಮಾಡುವಂತೆ ಮನವಿ ಸಹ ಸಲ್ಲಿಸಿದ್ದಾರೆ ಎಂದು ಹೇಳಲಾಗಿದೆ. ವಿಧಾನಸೌಧದಿಂದ ವಾಪಾಸ್ ಹೋಗುವಾಗ, ಪ್ರತಿಕ್ರಿಯೆ ಕೊಡಲು ನಿರಾಕರಿಸಿದ ರೇವಣ್ಣ ಅವರು, ಅಸಮಾಧಾನ, ಬೇಸರ, ಕೋಪದ ನಡುವೆಯೇ ನಾನು ಏನೂ ಮಾತಾಡಲ್ಲ, ಕಾನೂನು ಬಿಟ್ಟು ಏನೂ ಮಾತಾಡಲ್ಲ. ದಯವಿಟ್ಟು ಅರ್ಥಮಾಡಿಕೊಳ್ಳಿ ಎಂದು ಗರಂ ಆಗಿದ್ದಾರೆ. ಬಳಿಕ ಸಿಡುಕುತ್ತಲೇ ವಿಧಾನ ಸೌಧದಿಂದ ಕಾಲ್ಕಿತ್ತಿದ್ದಾರೆ.

ಮಹಿಳೆ ದಾರುಣ ಸಾವು

(ಕೆಎ51 ಎಂಇ 1661) ಕಾರು ಡಿಕ್ಕಿ ಹೊಡೆದಿದೆ. ಚಾಲಕನ ನಿಯಂತ್ರಣ ತಪ್ಪಿದ ಕಾರು, ಅಪಘಾತದ ನಂತರ ಮೂರು ಸುತ್ತು ಉರುಳಿ 50 ಮೀಟರ್ ದೂರದಲ್ಲಿ ಬಿದ್ದಿದೆ. ಪರಿಣಾಮ ಜುಪಿಟರ್ ಸ್ಕೂಟರ್ ಸವಾರ ರಾಧಾ ಅವರು ಸ್ಥಳದಲ್ಲೇ ಮೃತಪಟ್ಟರು. ಘಟನೆಯಲ್ಲಿ ಸ್ಕೂಟರ್ ಮತ್ತು ಕಾರು ಸಂಪೂರ್ಣ ಜಖಂಗೊಂಡಿವೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಓಡೋಡಿ ಬಂದ ರಾಧಾ ಅವರ ಪತಿ ಸತೀಶ ಮತ್ತು ಸಂಬಂಧಿಕರು ರಸ್ತೆಯಲ್ಲಿ ಬಿದ್ದಿದ್ದ ರಾಧಾ ಮೃತದೇಹದ ಬಳಿ ರೋಧಿಸುತ್ತಿದ್ದ ದೃಶ್ಯ ಕರುಳು ಹಿಂಡುವಂತಿತ್ತು. ಸ್ಥಳಕ್ಕೆ ಧಾವಿಸಿದ ವಿ.ವಿ. ಪುರಂ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಬಾನುಕುಮಾರಿ ಹಾಗೂ ಸಿಬ್ಬಂದಿ ಮಹಜರು ನಡೆಸಿ, ದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸಾಗಿಸಿ, ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ಒಪ್ಪಿಸಿದರು. ಪ್ರಕರಣ ದಾಖಲಿಸಿಕೊಂಡಿರುವ ವಿ.ವಿ. ಪುರಂ ಸಂಚಾರ ಠಾಣೆ ಪೊಲೀಸರು, ಡಿಕ್ಕಿ ಹೊಡೆದ ಕಾರು ಮತ್ತು ಚಾಲಕ, ಬೆಂಗಳೂರಿನ ಎಲಚನಹಳ್ಳಿ ನಿವಾಸಿ ಚಂದ್ರಶೇಖರನನ್ನು ವಶಕ್ಕೆ ಪಡೆದಿದ್ದಾರೆ. ಪತಿ, ಇಬ್ಬರು ಪುತ್ರಿಯರೊಂದಿಗೆ ಭೈರವೇಶ್ವರ ನಗರದಲ್ಲಿ ನೆಲೆಸಿದ್ದ ರಾಧಾ ಅವರು, ಕೆಆರ್‌ಎಸ್ ರಸ್ತೆಯ ಬದಿ ಇಟ್ಟುಕೊಂಡಿದ್ದ ಟೀ ಅಂಗಡಿಯಲ್ಲಿ ಗಳಿಸಿದ್ದರಲ್ಲಿ ಸಂಸಾರ ಸಾಗಿಸುತ್ತಿದ್ದರು. ಅಂಗಡಿ ತೆರೆಯಲೆಂದು ಬೆಳಗ್ಗೆ 6 ಗಂಟೆಗೆ ಹೊರಟು, 6.30ರ ವೇಳೆ ಅಪಘಾತದಲ್ಲಿ ತನ್ನ ಅಂಗಡಿ ಎದುರೇ ಅಸುನೀಗಿದ್ದಾರೆ. ಇನ್ನೊಂದು ನಿಮಿಷ ತಡವಾಗಿ ಇಲ್ಲವೇ ಮೊದಲು ಬಂದಿದ್ದರೆ ರಾಧಾ ಬದುಕುಳಿಯುತ್ತಿದ್ದರು. ಇದೆಲ್ಲಾ ವಿಧಿಯಾಟ ಎಂದು ಪ್ರತ್ಯಕ್ಷದರ್ಶಿಗಳು ಮರುಗುತ್ತಿದ್ದರು.

ಮುಂದಿನ ವರ್ಷದಿಂದಲೇ ಜಾರಿ

ಮತ್ತು ಉದ್ದೇಶದಿಂದ ಗ್ರೇಸ್ ಮಾರ್ಕ್ಸ್ ನೀಡಲಾಗಿದೆ. ಗ್ರೇಸ್ ಮಾರ್ಕ್ಸ್ ನೀಡಲು ನಿಮಗೆ ಯಾರು ಹೇಳಿದ್ದು ಎಂದು ತರಾಟೆಗೆ ತೆಗೆದುಕೊಂಡರು. ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ತೇರ್ಗಡೆಗೆ ಕನಿಷ್ಠ ಅಂಕವನ್ನು 35ರಿಂದ 25ಕ್ಕೆ ಶಿಕ್ಷಣ ಇಲಾಖೆ ಇಳಿಸಿತ್ತು. ಆದಾಗ್ಯೂ ಫಲಿತಾಂಶದ ಪ್ರಮಾಣ ಇಳಿಕೆಯಾಗಿರುವುದು ಕಳವಳಕ್ಕೆ ಕಾರಣವಾಗಿದೆ. ಈ ಬಾರಿ 1.70 ಲಕ್ಷ ವಿದ್ಯಾರ್ಥಿಗಳಿಗೆ ಗ್ರೇಸ್ ಮಾರ್ಕ್ ನೀಡಲಾಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ತಿಳಿಸಿತ್ತು. ಒಂದು ವೇಳೆ ಗ್ರೇಸ್ ಮಾರ್ಕ್ ನೀಡದಿದ್ದರೆ ಇಷ್ಟೂ ವಿದ್ಯಾರ್ಥಿಗಳು ಅನುತ್ತೀರ್ಣಗೊಂಡು ಫಲಿತಾಂಶದ ಪ್ರಮಾಣ ಇನ್ನಷ್ಟು ಕುಸಿಯುತ್ತಿತ್ತು ಎನ್ನಲಾಗಿದೆ. ಇನ್ನು ಸರ್ಕಾರ ಮುಂದಿನ ವರ್ಷದಿಂದ ಗ್ರೇಸ್ ಮಾರ್ಕ್ಸ್ ರದ್ದು ಮಾಡಲು ಸೂಚನೆ ನೀಡಿದೆ.

ಮೈಸೂರಲ್ಲಿ ಇಂದು, ನಾಳೆ ದೇಸಿ ಅಕ್ಕಿ ಮೇಳ

ಮೈಸೂರು, ಮೇ 17– ಸಹಜ ಸಮೃದ್ಧ ಮತ್ತು ಭತ್ತ ಉಳಿಸಿ ಅಭಿಯಾನದ ಸಂಯುಕ್ತಾಶ್ರಯದಲ್ಲಿ ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಮೇ 18 ಮತ್ತು 19ರಂದು ದೇಸಿ ಅಕ್ಕಿ ಮೇಳ ಆಯೋಜಿಸಲಾಗಿದೆ. ಮೇ 18ರ ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಉದ್ಘಾಟಿಸಲಿದ್ದು, ರಾಷ್ಟ್ರ ಪ್ರಶಸ್ತಿ ವಿಜೇತ ಬೀಜ ಸಂರಕ್ಷಕ ಬೋರೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಸಿಎಸ್‌ಐಆರ್ ನಿರ್ದೇಶಕಿ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್, ತಿ.ನರಸೀಪುರದ ಹೆಸರಾಂತ ದೇಸಿ ಭತ್ತ ಸಂರಕ್ಷಕರಾದ ಶ್ರೀಮತಿ ಗೀತಾ ಶ್ರೀನಿವಾಸಮೂರ್ತಿ, ರೋಟರಿ ಮೈಸೂರು ಉತ್ತರ ಅಧ್ಯಕ್ಷ ಎಂ.ಕೆ.ಶ್ರೀಧರ್, ಕಾರ್ಯದರ್ಶಿ ರಾಜು, ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮೇಳವು ಮೇ 18 ಮತ್ತು 19ರಂದು ಬೆಳಗ್ಗೆ 10 ರಿಂದ ರಾತ್ರಿ 8ರವರೆಗೆ ನಡೆಯಲಿದೆ.



ಕೆ.ವಿ.ರಾಜೇಂದ್ರ



ಎರಡು ದಿನಗಳ ಈ ದೇಸಿ ಅಕ್ಕಿ ಮೇಳದಲ್ಲಿ ರಾಜ್ಯದ ವಿವಿಧ ಭಾಗಗಳ ಭತ್ತ ಸಂರಕ್ಷಕರು ಅಪರೂಪದ ದೇಸಿ ತಳಿ ಅಕ್ಕಿಯನ್ನು ಪ್ರದರ್ಶನ ಮತ್ತು ಮಾರಾಟಕ್ಕೆ ತರುತ್ತಿದ್ದಾರೆ. 250 ಬಗೆಯ ದೇಸಿ ಭತ್ತದ ತೆನೆ, ಬೀಜ, ತೋರಣ, ಆಭರಣಗಳ ಪ್ರದರ್ಶನ ಮತ್ತು ಮಾರಾಟ ಇರುತ್ತದೆ. ಕೆಂಪಕ್ಕಿ, ಸುವಾಸನೆ ಅಕ್ಕಿ, ಕಪ್ಪು ಅಕ್ಕಿ, ಔಷಧಿ ಅಕ್ಕಿ, ದಪ್ಪಕ್ಕಿ ಮೊದಲಾದ 30 ಬಗೆಯ ತಳಿಗಳ ಅಕ್ಕಿಯ ಮಾರಾಟ ಏರ್ಪಡಿಸಲಾಗಿದೆ. ರೈತರಿಂದ ಗ್ರಾಹಕರಿಗೆ ನೇರ ಮಾರಾಟ ಮೇಳದ ವಿಶೇಷ.

ಮೇಳದಲ್ಲಿ ಸಿರಿಧಾನ್ಯ, ತರಕಾರಿ ಬಿತ್ತನೆ ಬೀಜಗಳು, ಗೆಡ್ಡೆ–ಗೆಣಸು ಮತ್ತು ಸಾವಯವ ಉತ್ಪನ್ನಗಳ ಮಾರಾಟ ವಿರುತ್ತದೆ. ಹಣ್ಣಿನ ಗಿಡಗಳು ಮಾರಾಟಕ್ಕೆ ಬರಲಿವೆ.

ಮೇಳದ ಅಂಗವಾಗಿ ಸಾಂಪ್ರದಾಯಿಕ ಅಡುಗೆಗಳನ್ನು ಪ್ರೋತ್ಸಾಹಿಸಲೆಂದು ರೋಟರಿ ಮೈಸೂರು ಉತ್ತರದವರ ಆಶ್ರಯದಲ್ಲಿ 'ಅಕ್ಕಿ ಅಡುಗೆ ಸ್ಪರ್ಧೆ'ಯನ್ನು ಆಯೋಜಿಸಲಾಗಿದೆ.

ಆಸಕ್ತರು ದೇಸಿ ಅಕ್ಕಿ ಯಿಂದ ಮಾಡಿದ ಯಾವುದೇ ಬಗೆಯ ಅಡುಗೆಗಳನ್ನು ಮನೆಯಲ್ಲೇ ತಯಾರಿಸಿ, ಮೇ 19ರಂದು ಮಧ್ಯಾಹ್ನ 12.30 ಗಂಟೆಗೆ ಮೇಳಕ್ಕೆ ತರಬಹುದು. ಪ್ರವೇಶ ಶುಲ್ಕ ಉಚಿತ.

ಭತ್ತದ ಕೃಷಿ ಮತ್ತು ಸಂಸ್ಕೃತಿ ಬಗ್ಗೆ ಎಳೆಯರಿಗೆ ಆಸಕ್ತಿ ಮೂಡಿಸಲು ಮಕ್ಕಳಿಗಾಗಿ 'ಭತ್ತದ ಲೋಕ–ನಾ ಕಂಡಂತೆ' ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ ಏರ್ಪಡಿಸಲಾಗಿದೆ. 12 ವರ್ಷದ ಒಳಗಿನ ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಬಹುದು. ಆಸಕ್ತರು ಮೇ 19ರಂದು ಬೆಳಗ್ಗೆ 10.30 ಗಂಟೆಗೆ ಮೇಳಕ್ಕೆ ಬರಬೇಕು. ಚಿತ್ರ ಬಿಡಿಸಲು ಅಗತ್ಯವಿರುವ ಬಣ್ಣಗಳನ್ನು ತರಬೇಕು. ಪ್ರವೇಶ ಶುಲ್ಕ ಉಚಿತ. ಹೆಚ್ಚಿನ ಮಾಹಿತಿಗೆ ಕೋಮಲ್ ಕುಮಾರ್, (ಮೊ. 9880908608) ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಭಾರತದ ಪ್ರಾಚೀನ ಕ್ರೀಡೆಗಳಿಗೆ ಮೆರಗು ನೀಡುವ 'ಕ್ರೀಡಾ ಕೌಶಲ್ಯ'ಕ್ಕೆ ಸಂಭ್ರಮದ ಚಾಲನೆ

ಮೈಸೂರು, ಮೇ 17(ಎಂಕೆ)– ಪ್ರಾಚೀನ ಪರಂಪರೆಯ ಕರಕುಶಲ ಕಲೆಯೊಳಗೆ ದೇಸಿ ಆಟಗಳ ಪುನಶ್ಚೇತನ ಹಾಗೂ ಬಾಲ್ಯದ ನೆನಪುಗಳನ್ನು ಮೆಲುಕು ಹಾಕುವ 'ಕ್ರೀಡಾ ಕೌಶಲ್ಯ'ದ ಹತ್ತನೇ ದ್ವೈವಾರ್ಷಿಕ ಪ್ರದರ್ಶನಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಮೈಸೂರು ಮೃಗಾಲಯ ಎದುರಿನ ರಾಮ್‌ಸನ್ಸ್ ಬೊಂಬೆಮನೆ ಗ್ಯಾಲರಿಯಲ್ಲಿ ಮೇ 31ರವರೆಗೆ ಆಯೋಜಿಸಿರುವ ದೇಸಿ ಹಾಸು ಆಟಗಳ ಪ್ರದರ್ಶನಕ್ಕೆ ಸಾವಂತವಾಡಿ ರಾಜ ಸಂಸ್ಥಾನದ ರಾಜವಂಶಸ್ಥ ರಾಜಬಹದ್ದೂರ್ ನಾಲ್ವಡಿ ಖೇಮ್ ಸಾವಂತ್ ಭೋಂಸ್ಲೇ ಹಾಗೂ ರಾಣಿ ಸಾಹೇಬ್ ಶುಭಾದೇವಿ ಖೇಮ್ ಸಾವಂತ್ ಭೋಂಸ್ಲೇ ಭಾರತೀಯ ಶೈಲಿಯ ಚದುರಂಗ ಹಾಗೂ ಪಗಡೆ ಆಟವಾಡುವ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿದ ರಾಜವಂಶಸ್ಥ ರಾಜಬಹದ್ದೂರ್ ನಾಲ್ವಡಿ ಖೇಮ್ ಸಾವಂತ್ ಭೋಂಸ್ಲೇ, ಗ್ರಾಮೀಣ ಪ್ರದೇಶಗಳು ಸೇರಿದಂತೆ ಎಲ್ಲೆಡೆ ಚಿರಪರಿಚಿತವಾಗಿದ್ದ ಪ್ರಾಚೀನ ದೇಸಿ ಆಟಗಳು ಮರೆಯಾಗುತ್ತಿರುವ ಹಾಗೂ ಮೊಬೈಲ್ ಗೇಮ್‌ಗಳಾಗಿ ಬದಲಾಗುತ್ತಿರುವ ಕಾಲಘಟ್ಟದಲ್ಲಿ ಕರಕುಶಲ ಕಲೆಯ ಮೂಲಕ ಪ್ರಾಚೀನ ದೇಸಿ ಆಟಗಳನ್ನು ಪರಿಚಯಿಸುವ ರಾಮ್‌ಸನ್ಸ್ ಪ್ರಯತ್ನ ಅತ್ಯಂತ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕುಟುಂಬಸ್ಥರು, ಸ್ನೇಹಿತರು ಜೊತೆಗೂಡಿ ಆಟವಾಡುತ್ತಿದ್ದ ದೇಸಿ ಆಟಗಳು ಸಂಬಂಧಗಳನ್ನು ಗಟ್ಟಿಗೊಳಿಸಿದ್ದವು. ಸಂತಸದಿಂದ ಆಟವಾಡುತ್ತಾ ಕಾಲ ಕಳೆಯಲಾಗುತ್ತಿತ್ತು. ಆದರೆ ಇಂದು ಮೊಬೈಲ್‌ನಿಂದ ನಾವುಗಳು ಒಬ್ಬಂಟಿಯಾಗುತ್ತಿದ್ದೇವೆ. ಈ ನಿಟ್ಟಿನಲ್ಲಿ ದೇಸಿ ಆಟಗಳನ್ನು ಪುನಶ್ಚೇತನಗೊಳಿಸುವ ಕಾರ್ಯ ಅವಶ್ಯವಾಗಿದೆ. ಅಲ್ಲದೆ ಪ್ರಾಚೀನ ದೇಸಿ ಆಟಗಳಲ್ಲಿ ನಾಡಿನ ಕಲೆ, ಸಂಸ್ಕೃತಿ ಅಡಗಿದ್ದು, ನಮ್ಮ ಮುಂದಿನ ಪೀಳಿಗೆಗೆ ತಿಳಿಸುವ ಅನಿವಾರ್ಯವೂ ಇದೆ. ನಮ್ಮ ಪರಂಪರೆಯನ್ನು ಹೊಸ ತಲೆಮಾರಿಗೆ ಅರ್ಥ ಮಾಡಿಸುವ ನಿಟ್ಟಿನಲ್ಲಿ ಕ್ರೀಡಾ ಕೌಶಲ್ಯ ಪ್ರದರ್ಶನ ವಿಶೇಷ ಪ್ರಯತ್ನವಾಗಿದೆ ಎಂದು ತಿಳಿಸಿದರಲ್ಲದೆ ಮೈಸೂರು ನಮಗೆ ಬಹಳ ಅಚ್ಚುಮೆಚ್ಚು. ಮೈಸೂರಿನ ಜನತೆ ಬಹಳ ಗೌರವದಿಂದ ಕಾಣುತ್ತಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಕ್ರೀಡಾ ಲೋಕದ ಪ್ರವೇಶ: ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಅಂತಾರಾಷ್ಟ್ರೀಯ ಹೆಸರಾಂತ ಕಲಾವಿದ ಗಂಜೀಫಾ ರಘುಪತಿ ಭಟ್ಟ ಮಾತನಾಡಿ, ಕ್ರೀಡಾ ಲೋಕವನ್ನೇ ಪ್ರವೇಶ ಮಾಡಿದಂತಿದೆ. ಒಳ್ಳೆಯ ಆಲೋಚನೆ ಜೊತೆಗೆ ಕಲೆಯನ್ನು ಸೇರಿಸಿ ಪ್ರಾಚೀನ ದೇಸಿ ಆಟಗಳಿಗೆ ಪುನರುಜ್ಜೀವ ನೀಡಿದ್ದಾರೆ. ರಾಮ್‌ಸನ್ಸ್ ಅತ್ಯಂತ ಉತ್ಸಾಹದಿಂದ ಕಲಾವಿದರನ್ನು ಒಂದುಗೂಡಿಸಿಕೊಂಡು ಒಳ್ಳೆಯ ಕಾರ್ಯ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿಯೂ ದೇಸಿ ಆಟಗಳನ್ನು ಉಳಿಸುವ ರಾಮ್‌ಸನ್ಸ್ ಕಾರ್ಯ ಮುಂದುವರೆಯಲಿ ಎಂದು ಆಶಿಸಿದರು. ರಾಮ್‌ಸನ್ಸ್ ಬೊಂಬೆಮನೆಯ ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಮುಖ್ಯಸ್ಥ ಅಜಯ್‌ಕುಮಾರ್ ಸಿಂಗ್, ಕಾರ್ಯದರ್ಶಿ ಆರ್.ಜಿ.ಸಿಂಗ್, ಸಂಘಟಕ ರಘು ಧರ್ಮೇಂದ್ರ ಮತ್ತಿತರರಿದ್ದರು.



ರಾಮ್‌ಸನ್ಸ್ ಬೊಂಬೆಮನೆ ಗ್ಯಾಲರಿಯಲ್ಲಿ ಸಾವಂತವಾಡಿ ರಾಜ ಸಂಸ್ಥಾನದ ರಾಜವಂಶಸ್ಥ ರಾಜಬಹದ್ದೂರ್ ನಾಲ್ವಡಿ ಖೇಮ್ ಸಾವಂತ್ ಭೋಂಸ್ಲೇ ಹಾಗೂ ರಾಣಿ ಸಾಹೇಬ್ ಶುಭಾದೇವಿ ಖೇಮ್ ಸಾವಂತ್ ಭೋಂಸ್ಲೇ ಭಾರತೀಯ ಶೈಲಿಯ ಚದುರಂಗ ಹಾಗೂ ಪಗಡೆ ಆಟವಾಡುವ ಮೂಲಕ 'ಕ್ರೀಡಾ ಕೌಶಲ್ಯ'ಕ್ಕೆ ಚಾಲನೆ ನೀಡಿದರು. ಅಂತಾರಾಷ್ಟ್ರೀಯ ಹೆಸರಾಂತ ಕಲಾವಿದ ಗಂಜೀಫಾ ರಘುಪತಿ ಭಟ್ಟ, ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಮುಖ್ಯಸ್ಥ ಅಜಯ್‌ಕುಮಾರ್ ಸಿಂಗ್, ಕಾರ್ಯದರ್ಶಿ ಆರ್.ಜಿ.ಸಿಂಗ್ ಮತ್ತಿತರರಿದ್ದರು.

ಕರಕುಶಲ ಕಲೆಯೊಂದಿಗೆ ಪ್ರಾಚೀನ ದೇಸಿ ಆಟಗಳ ಅನಾವರಣ...

ರಾಮ್‌ಸನ್ಸ್ ಬೊಂಬೆಮನೆ ಗ್ಯಾಲರಿಯಲ್ಲಿ ಕಣ್ಮನ ಸೆಳೆಯುವ ಕರಕುಶಲ ಕಲೆಯೊಂದಿಗೆ ಪ್ರಾಚೀನ ದೇಸಿ ಆಟಗಳ ಅನಾವರಣಗೊಳಿಸಲಾಗಿದೆ. ವಾರಾಣಾಸಿ ಹಾಗೂ ಮೈಸೂರು ಕಲಾವಿದರಿಂದ ಮರದ ಹುದುಗು ಕಲೆಯ ಆಟದ ಮೇಜುಗಳು, ಕಿನ್ನಾಳದ ಚೌಕಿಯಲ್ಲಿ ರೂಪುಗೊಂಡ ಆಟದ ಚೌಕಿಗಳು, ಅಮೃತ ಶಿಲೆಯಲ್ಲಿ ರೂಪಗೊಂಡ ಆಟದ ಚೌಕಿಗಳು, ಪಗಡೆ ಆಟ, ಭಾರತೀಯ ಶೈಲಿನ ಚದುರಂಗ, ಚಾರ್‌ಮೋರ್ ಜಮಖಾನಗಳು ಆಕರ್ಷಣೀಯವಾಗಿವೆ. ಏಳು ಮನೆ ಚೌಕಾಬಾರ, ಪಿಪಿಲಿ ಅಪ್ಲಿಕೆ ಕಲೆ, ನವಕಂಕರಿ, ಲಂಬಾಣಿ ಕಸೂತಿ ಕಲೆ, ಐದು ಮನೆ ಚೌಕಾಬಾರ, ಉಣ್ಣೆಯ ರತ್ನಗಂಬಳಿ ಮನಮೋಹಕವಾಗಿವೆ.

ವರ್ಷಪೂರ್ತಿ ಸುವರ್ಣ ಭಾರತಿ ಸಂಭ್ರಮಾಚರಣೆ

ಮೈಸೂರು, ಮೇ 17(ಜಿಎ)– ಶೃಂಗೇರಿ ಮಠದ ಭಾರತಿ ತೀರ್ಥ ಸ್ವಾಮೀಜಿ ಸನ್ಯಾಸ ಸ್ವೀಕಾರದ ಸುವರ್ಣ ಮಹೋತ್ಸವ ಪ್ರಯುಕ್ತ ಶೃಂಗೇರಿಯ ಶಾರದಾ ಪೀಠ, ನಗರದ ಅಭಿನವ ಶಂಕರಾಲಯ, ಜಿಲ್ಲಾ ಮತ್ತು ನಗರ ಬ್ರಾಹ್ಮಣ ಸಂಘದಿಂದ 2024ರ ಏಪ್ರಿಲ್‌ನಿಂದ 2025ರ ಏಪ್ರಿಲ್‌ವರೆಗೆ ಸುವರ್ಣ ಭಾರತಿ ಸಂಭ್ರಮಾಚರಣೆ, ಸಮಾಜಮುಖಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಶಂಕರಾಲಯ ಗೌರವ ವ್ಯವಸ್ಥಾಪಕ ಶೇಷಾದ್ರಿ ಭಟ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಂಕರ ಜಯಂತ್ಯುತ್ಸವದ ಪ್ರಯುಕ್ತ ಮೇ 19ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 2ರವರೆಗೆ ಪೋರ್ಟ್ ಮೊಹಲ್ಲಾದ ಶಂಕರಮಠ ಆವರಣದಲ್ಲಿ ಎ.ಎಸ್.ಜಿ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಕಣ್ಣಿನ ತಪಾಸಣೆ ಹಾಗೂ ಸುವರ್ಣ ಮಹೋತ್ಸವ ಪ್ರಯುಕ್ತ ಡಿ.ಆರ್.ಎಂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸಹಯೋಗದಲ್ಲಿ ಆರೋಗ್ಯ ತಪಾಸಣೆಯನ್ನು ಉಚಿತವಾಗಿ ಆಯೋಜಿಸಲಾಗಿದೆ ಎಂದರು. ರಕ್ತದೊತ್ತಡ, ಮಧುಮೇಹ, ಹೃದಯ ಸಂಬಂಧಿ ಕಾಯಿಲೆಗಳು ಮತ್ತು ಗರ್ಭಕೋಶದ ಕ್ಯಾನ್ಸರ್ ಪತ್ತೆ ತಪಾಸಣೆಗಳು ನಡೆಯಲಿದೆ. ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿಟಿ ಪ್ರಕಾಶ್, ಮಠದ ಭಕ್ತರಾದ ಎಸ್.ರಂಗನಾಥ, ಹರೀಶ್, ಎಂ.ಆರ್.ಬಾಲಕೃಷ್ಣ, ಗೋಪಾಲರಾವ್, ಸುಚೇಂದ್ರ ತೀರ್ಥ ಉಪಸ್ಥಿತರಿದ್ದರು.

11ನೇ ಪಂಚೆನ್ ಲಾಮಾ ಬಿಡುಗಡೆಗೆ ಆಗ್ರಹಿಸಿ ಚೀನಾ ವಿರುದ್ಧ ಟಿಬೆಟಿಯನ್ನರ ಪ್ರತಿಭಟನೆ



ಮೈಸೂರು, ಮೇ 17(ಜಿಎ)– ಚೀನಾ ಸರ್ಕಾರ 11ನೇ ಪಂಚೆನ್ ಲಾಮಾರ ಇರುವಿಕೆ, ಅವರ ಧಾರ್ಮಿಕ ಶಿಕ್ಷಣ, ಆರೋಗ್ಯದ ಬಗ್ಗೆ ಮಾಹಿತಿ ನೀಡಬೇಕು. ತಕ್ಷಣ ಅವರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿ ಟಿಬೆಟಿಯನ್ ಮಾಧ್ಯಮ ಯುವ ಕಾಂಗ್ರೆಸ್ ಹಾಗೂ ಧಾರ್ಮಿಕ ಟಿಬೆಟಿಯನ್ ಮಹಿಳಾ ಸಂಘಟನೆ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

1995ರ ಮೇ 17ರಂದು ಚೀನಾ ಸರ್ಕಾರ ಟಿಬೆಟಿನ 11ನೇ ಪಂಚೆನ್ ಲಾಮಾ ಅವರನ್ನು ಅಪಹರಣ ಮಾಡಿತ್ತು. ಪಂಚನ್ ಲಾಮಾ ಟಿಬೆಟಿನ ಎರಡನೆಯ ಧಾರ್ಮಿಕ ಮುಖಂಡರಾಗಿದ್ದಾರೆ. 10ನೇ ಪಂಚನ್ ಲಾಮಾ ಚೀನಾ ಸರ್ಕಾರದ ಆಡಳಿತದಿಂದ 1989ರಲ್ಲಿ ರಹಸ್ಯ, ಸಂಶಯಾತ್ಮಕ ರೀತಿಯಲ್ಲಿ ಸಾವಿಗೀಡಾದರು. 1995ರಲ್ಲಿ ದಲೈ ಲಾಮಾ ಅವರು ಗಂಡುನ್ ಚೂಯಿ ನೀಮಾ ಅವರನ್ನು 11ನೇ ಪಂಚನ್ ಲಾಮಾ ಅವರನ್ನಾಗಿ ಗುರುತಿಸಿದರು. ಅದಾದ ಕೇವಲ ಮೂರು ದಿನಗಳಲ್ಲಿ ಚೀನಾ ಅವರ 6ನೇ ವಯಸ್ಸಿನಲ್ಲಿ ಇಡೀ ಕುಟುಂಬವನ್ನು ಅಪಹರಿಸಿತು. ಅಂದಿನಿಂದ ಇಂದಿನವರೆಗೆ ಅವರ ಇರುವಿಕೆಯ ಬಗ್ಗೆ ಯಾವುದೇ ರೀತಿಯ ಮಾಹಿತಿ ಕೊಡುತ್ತಿಲ್ಲ. ಬದಲಾಗಿ ಅವರ ಸ್ಥಾನದಲ್ಲಿ ಚೀನಾ ಸರ್ಕಾರ ತನ್ನದೇ ಆದ ಪ್ರತಿನಿಧಿಯನ್ನಾಗಿ ಕಮ್ಯುನಿಸ್ಟ್ ಪಾರ್ಟಿ ಸದಸ್ಯನ ಮಗನಾದ ಗ್ಯಾಲನ್ ನೊರ್ಬು ಅವರನ್ನು ನೇಮಿಸಿದೆ ಎಂದು ಕಿಡಿಕಾರಿದರು.

ವಿಶ್ವ ಸಂಸ್ಥೆ ಹಾಗೂ ಅಂತಾರಾಷ್ಟ್ರೀಯ ಸಮುದಾಯದ ಮಧ್ಯಸ್ಥಿಕೆಯ ಹೊರತಾಗಿಯೂ ಚೀನಾ ಸರ್ಕಾರ 11ನೇ ಪಂಚೆನ್ ಲಾಮಾ ಗಂಡುನ್ ಚೊಯ್ಕಿ ನೀಮಾರ ಬಗ್ಗೆ ಯಾವುದೇ ಮಾಹಿತಿ ನೀಡುತ್ತಿಲ್ಲ. ಇದರಿಂದಾಗಿ ಸಾಂಪ್ರದಾಯಿಕವಾಗಿ ದೊರೆಯಬೇಕಾದ ಟಿಬೆಟನ್ ಧಾರ್ಮಿಕ ಹಾಗೂ ಶಿಷ್ಟಾಚಾರದ ಶಿಕ್ಷಣದಿಂದ ಅವರು ವಂಚಿತರಾಗಿದ್ದಾರೆ. ಚಂಡ್ರೆಲ್ ರಿನ್ಪೋಚೆ ಹಾಗೂ ಇತರೆ ರಾಜಕೀಯ ಕೈದಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕು. ಪಂಚೆನ್ ಲಾಮಾ ಅಪಹರಣ ಹಾಗೂ ಇರುವಿಕೆಯ ಬಗೆಗಿನ ಮೌನ ಅವರ ಧಾರ್ಮಿಕ ಸ್ವಾತಂತ್ರ್ಯ ಹಾಗೂ ಮಾನವ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಾಗಿದ್ದು, ದಲೈ ಲಾಮಾರ ಮಧ್ಯಸ್ಥಿಕೆ ಹಾಗೂ ಮಾತುಕತೆಗೆ ಅವಕಾಶ ಕೊಡುವ ಮೂಲಕ ಟಿಬೆಟಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಒಪ್ಪಿಕೊಳ್ಳಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ತ್ಸೆರಿಂಗ್ ಲಾಕ್‌ಯಾಪ್ ಜಾನ್‌ಹೀಲ್, ಮಹಿಳಾ ಸಂಘದ ಚೆಮಿ ಲಾಮೊ, ಕೊಳ್ಳೇಗಾಲ ಕ್ಯಾಂಪ್‌ನ ತ್ಸೆರಿಂಗ್ ದೋರ್ಜೆ ಚುಂಗ್, ತ್ಸೆರಿಂಗ್ ಚೊಡೋನ್, ಹುಣಸೂರಿನ ತಮ್‌ಡಿನ್ ತ್ಸೆವಾಂಗ್, ತಮ್‌ಡಿನ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಚುನಾವಣಾ ನೀತಿ ಸಂಹಿತೆ ಅಂತ್ಯಗೊಳ್ಳುತ್ತಿದ್ದಂತೆಯೇ

ಮುಡಾದಿಂದ ಬಲ್ಲಹಳ್ಳಿ, ಬೊಮ್ಮೇನಹಳ್ಳಿ ವಸತಿ ಬಡಾವಣೆ ಯೋಜನೆಗೆ ಚಾಲನೆ

ಮೈಸೂರು, ಮೇ 17(ಆರ್‌ಕೆ)– ಬಹು ನಿರೀಕ್ಷಿತ ಬಲ್ಲಹಳ್ಳಿ ಮತ್ತು ಬೊಮ್ಮೇನಹಳ್ಳಿ ವಸತಿ ಬಡಾವಣೆ ಯೋಜನೆಯನ್ನು ಲೋಕಸಭಾ ಚುನಾವಣಾ ಮಾದರಿ ನೀತಿ ಸಂಹಿತೆ ಅಂತ್ಯಗೊಳ್ಳುತ್ತಿದ್ದಂತೆಯೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಕೈಗೆತ್ತಿಕೊಳ್ಳಲಿದೆ.



ರವೀಂದ್ರನಾಥ ಠಾಗೋರ್‌ನಗರ ಮತ್ತು ಲಲಿತಾದ್ರಿಪುರ 2ನೇ ಹಂತದ ಬಡಾವಣೆ ರಚಿಸಿ ನಿವೇಶನ ಹಂಚಿದ ಬಳಿಕ ಭೂಮಿ ಕೊರತೆಯಿಂದಾಗಿ ಈವರೆಗೆ ಪ್ರಾಧಿಕಾರವು ವಸತಿ ಯೋಜನೆ ಅನುಷ್ಠಾನ ಗೊಳಿಸಲು ಸಾಧ್ಯವಾಗಿರಲಿಲ್ಲ. ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿ ಹಲವು ವರ್ಷಗಳಿಂದ ಕಾಯುತ್ತಿರುವ ಸುಮಾರು 90,000 ಮಂದಿಗೆ ನಿವೇಶನ ಹಂಚಿಕೆ ಮಾಡಲು ತಡವಾಗಿಯಾದರೂ ಮುಡಾ ಮುಂದಾಗಿದೆ.

ರೈತರ ಮನವೊಲಿಸಿ 50:50ರ ಅನುಪಾತದಲ್ಲಿ ನಿವೇಶನ ಕೊಡುವ ಷರತ್ತಿನ ಮೇಲೆ ಭೂಮಿ ಪಡೆಯಲು ನಡೆಸಿರುವ ಪ್ರಯತ್ನದಲ್ಲಿ ಮುಡಾ ಅಧಿಕಾರಿಗಳು ಯಶಸ್ವಿಯಾಗಿದ್ದರಾದರೂ, ಆರಂಭದಲ್ಲೇ ಎಕರೆಗೆ 10 ಲಕ್ಷ ರೂ. ನಗದು ನೀಡಬೇಕೆಂಬ ಭೂ ಮಾಲೀಕರ ಬೇಡಿಕೆಗೂ ಅಧಿಕಾರಿಗಳು ಸಮ್ಮತಿಸಿದ್ದಾರೆ.

ಅದರಂತೆ ಮೈಸೂರು ತಾಲೂಕು ಬಲ್ಲಹಳ್ಳಿ ಮತ್ತು ಬೊಮ್ಮೇನಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ ಸುಮಾರು 150 ಎಕರೆ ಪ್ರದೇಶದಲ್ಲಿ ಎರಡು ವಸತಿ ಬಡಾವಣೆ ಅಭಿವೃದ್ಧಿಪಡಿಸಲು ಮುಡಾ ಅಧಿಕಾರಿಗಳು ಯೋಜನೆ ರೂಪಿಸಿ ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ಆಡಳಿತಾತ್ಮಕ ಒಪ್ಪಿಗೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಈ ಹಿಂದೆ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರವಿದ್ದಾಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಬಲ್ಲಹಳ್ಳಿ ಗ್ರಾಮದಲ್ಲೇ ರೈತರೊಂದಿಗೆ ಸಭೆ ನಡೆಸಿದರಾದರೂ, ಸ್ಥಳದಲ್ಲಿ ಉಂಟಾದ ಗೊಂದಲದಿಂದಾಗಿ ಸಭೆ ವಿಫಲಗೊಂಡಿತ್ತು. ತದನಂತರ ಹಲವು ಕಾರಣಗಳಿಂದಾಗಿ ಯೋಜನೆ ವಿಳಂಬವಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಇದೀಗ ಮುಡಾ ಅಧ್ಯಕ್ಷ ಕೆ.ಮರೀಗೌಡರ ನೇತೃತ್ವದಲ್ಲಿ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ಹಾಗೂ ಅಧಿಕಾರಿಗಳು ಬಲ್ಲಹಳ್ಳಿ ಮತ್ತು ಬೊಮ್ಮೇನಹಳ್ಳಿ ವಸತಿ ಬಡಾವಣೆಗಳನ್ನು ರಚಿಸಲು ಪ್ರಕ್ರಿಯೆ ಆರಂಭಿಸಿರುವುದು ನಿವೇಶನಾಕಾಂಕ್ಷಿಗಳಲ್ಲಿ ತಮ್ಮ ಕನಸಿನ ಮನೆ ಹೊಂದುವ ಆಸೆ ಚಿಗುರೊಡೆದಂತಾಗಿದೆ.

ಲೋಕಸಭಾ ಸಾರ್ವತ್ರಿಕ ಚುನಾವಣಾ ಮಾದರಿ ನೀತಿ ಸಂಹಿತೆ ಮುಕ್ತಾಯದ ಬಳಿಕ ಈ ಯೋಜನೆ ಜಾರಿಗೊಳಿಸುವ ಪ್ರಕ್ರಿಯೆಗೆ ಚಾಲನೆ ದೊರೆಯಲಿದೆ. ನಗರಾಭಿವೃದ್ಧಿ ಇಲಾಖೆಯು ಪ್ರಸ್ತಾವನೆಗೆ ಸಮ್ಮತಿ ನೀಡುತ್ತಿದ್ದಂತೆಯೇ ರೈತರೊಂದಿಗೆ ಒಡಂಬಡಿಕೆ ಮಾಡಿಕೊಂಡು ಬಡಾವಣೆ ಅಭಿವೃದ್ಧಿ ಕಾಮಗಾರಿಗೆ ಮುಡಾ ಅಧಿಕಾರಿಗಳು ಚಾಲನೆ ನೀಡುವರು. ಎರಡೂ ಬಡಾವಣೆಗಳಿಂದ ಎರಡು ಸಾವಿರ ನಿವೇಶನ ರಚಿಸುವ ಉದ್ದೇಶವಿದ್ದು, ರಸ್ತೆ, ಚರಂಡಿ, ಒಳಚರಂಡಿ, ವಿದ್ಯುತ್, ಕುಡಿಯುವ ನೀರಿನ ಸಂಪರ್ಕ, ಪಾರ್ಕ್, ಮುಕ್ತ ವಲಯ, ಎಸ್‌ಟಿಪಿ, ಸಿಎ ನಿವೇಶನ ಸೇರಿದಂತೆ ಮೂಲ ಸೌಕರ್ಯದೊಂದಿಗೆ ಬಡಾವಣೆ ಅಭಿವೃದ್ಧಿಗೊಳಿಸಲು ಮುಡಾ ಸಿದ್ಧತೆ ನಡೆಸುತ್ತಿದೆ.

ಕರ್ನಾಟಕ ರಾಜಕಾರಣದ ಪಡಸಾಲೆಯಲ್ಲಿ ಭಾರಿ ಸದ್ದು

ನಮ್ಮಲ್ಲಿ ಏಕನಾಥ್ ಶಿಂಧೆ ಯಾರು?

- ಅದು ಬೆಂಗಳೂರಿನವರಾ! ಇಲ್ಲ ದಾವಣಗೆರೆಯವರಾ!! ಅಥವಾ ಬೆಳಗಾಂನವರಾ...!!!
- ಮಹಾರಾಷ್ಟ್ರ ಸಿಎಂ ಹೇಳಿಕೆ ನಂತರ ರಾಜ್ಯದಲ್ಲಿ ತೀವ್ರ ಚರ್ಚೆಗೆ ನಾಂದಿ
- ಕಾಂಗ್ರೆಸ್ ವರಿಷ್ಠರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಎಚ್ಚರಿಕೆ ಸಂದೇಶ

ಬೆಂಗಳೂರು, ಮೇ 17(ಕೆಎಂಶಿ)– **ಕರ್ನಾಟಕದ ಏಕನಾಥ್ ಶಿಂಧೆ ಯಾರು ಎಂಬ ಬಗ್ಗೆ ಕಾಂಗ್ರೆಸ್ ವಲಯದಲ್ಲಿ ತೀವ್ರ ಚರ್ಚೆಗೆ ಎಡೆ ಮಾಡಿದೆ. ಲೋಕಸಭಾ ಚುನಾವಣಾ ಫಲಿತಾಂಶ ಹೊರಬರುತ್ತಿದ್ದಂತೆ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಮಹಾರಾಷ್ಟ್ರದ ಮಾದರಿಯಲ್ಲಿ ತೆಗೆಯುತ್ತೇವೆ ಎಂದು ಅಲ್ಲಿನ ಮುಖ್ಯಮಂತ್ರಿ ಶಿಂಧೆ ನೀಡಿರುವ ಹೇಳಿಕೆ ಸಿದ್ದರಾಮಯ್ಯ ಸರ್ಕಾರಕ್ಕೆ ಭೀತಿ ಮೂಡಿಸಿದೆ.**

ಜೆಡಿಎಸ್, ಎನ್‌ಡಿಎ ಮೈತ್ರಿಕೂಟದೊಂದಿಗೆ ಕೈಜೋಡಿಸಿದ ನಂತರ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸುವ ಸಂಚು ಕಳೆದ ಐದು ತಿಂಗಳಿಂದಲೂ ನಡೆಯುತ್ತಿದೆ. ಇದೀಗ ಅದಕ್ಕೆ ಬಿರುಸಿನ ಚಾಲನೆ ದೊರೆತಂತಿದೆ, ಕಾಂಗ್ರೆಸ್‌ನಲ್ಲಿ ಮೇಲ್ನೋಟಕ್ಕೆ ಒಗ್ಗಟ್ಟು ಕಂಡುಬಂದರೂ ಒಳಗಿಂದೊಳಗೆ ಎಲ್ಲವೂ ಸರಿ ಇಲ್ಲ. ನಮ್ಮಲ್ಲಿ ಬೆಂಗಳೂರಿನವರ, ದಾವಣಗೆರೆಯವರ ಇಲ್ಲವೇ ಬೆಳಗಾವಿ ನಾಯಕರು ಕರ್ನಾಟಕದ ಏಕನಾಥ ಶಿಂಧೆ ಆಗಿ ಹೊರ ಹೊಮ್ಮುತ್ತಾರಾ ಎಂಬ ಚರ್ಚೆ ನಡೆದಿದೆ. ಇದರ ಬೆನ್ನಲ್ಲೇ ಎಐಸಿಸಿ ಕೂಡ ಸರ್ಕಾರ ಉರುಳಿಸಲು ಬಿಜೆಪಿ ವರಿಷ್ಠರು ಯಾವ ಹಂತಕ್ಕಾದರೂ ಹೋಗಬಹುದು, ನೀವು ಎಚ್ಚರಿಕೆಯಿಂದಿರಿ ಎಂಬ ಸಂದೇಶವನ್ನು ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರಿಗೆ ರವಾನೆ ಮಾಡಿದ್ದಾರೆ. ಪಕ್ಷದ ಕೆಲವು ಶಾಸಕರು ಮತ್ತು ಸಚಿವರನ್ನು ಗೋವಾ ಹಾಗೂ ಮಹಾರಾಷ್ಟ್ರದ ಎನ್‌ಡಿಎ ಕೂಟದ ಮುಖಂಡರು ಸಂಪರ್ಕಿಸುವುದರೊಂದಿಗೆ ಅವರೊಂದಿಗೆ ಇತ್ತೀಚೆಗೆ ನಿರಂತರ ಸಂಪರ್ಕದಲ್ಲಿದ್ದಾರೆ. ನೀವು 80ಕ್ಕೂ ಹೆಚ್ಚು ಶಾಸಕರಿಗೆ ಸಂಪುಟ ದರ್ಜೆಯ ವಿವಿಧ ಹುದ್ದೆಗಳನ್ನು ನೀಡಿದ್ದರೂ ಅವರಲ್ಲೂ ಅಸಮಾಧಾನಿತರಿರಬಹುದು. ಜೊತೆಗೆ ಅಧಿಕಾರ ದೊರೆಯದವರೂ ಹುದ್ದೆಗೆ ಪರಿತಪಿಸುತ್ತಿರಬಹುದು. ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಜೊತೆಗೆ ಅವರ ಬೇಡಿಕೆಗಳನ್ನು ಈಡೇರಿಸುವಂತೆ ರಾಜ್ಯ ಕಾಂಗ್ರೆಸ್ ನಾಯಕರಿಗೆ ಸಂದೇಶ ಬಂದಿದೆ. ಇದರ ಬೆನ್ನಲ್ಲೇ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಇಲಾಖಾ ಪ್ರಧಾನ ಕಾರ್ಯದರ್ಶಿಗಳ ಜೊತೆ ಅನೌಪಚಾರಿಕ ಸಭೆ ನಡೆಸಿ, ಪ್ರತಿ ವಿಧಾನಸಭಾ ಕ್ಷೇತ್ರಗಳಿಗೆ ಅನುದಾನ ಬಿಡುಗಡೆಗೆ ಸಿದ್ಧತೆ ಮಾಡಿಕೊಳ್ಳಿ ಎಂದಿದ್ದಾರೆ.

ಚುನಾವಣಾ ಮಾದರಿ ನೀತಿ ಸಂಹಿತೆ ಮುಗಿಯುತ್ತಿದ್ದಂತೆ ಆದೇಶಗಳು ಹೊರಬೀಳಲಿವೆ ಮತ್ತು ಅನುದಾನವನ್ನು ತಕ್ಷಣವೇ ಬಿಡುಗಡೆ ಮಾಡಿ ಎಂದು ಸಲಹೆ ಮಾಡಿದ್ದಾರೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಐದು ಗ್ಯಾರಂಟಿಗಳ ಅನುಷ್ಠಾನಕ್ಕೆ ಒತ್ತು ನೀಡಿದ್ದರಿಂದ ಶಾಸಕರ ನಿಧಿ ಸೇರಿ ದಂತೆ ವಿವಿಧ ಅಭಿವೃದ್ಧಿ ಕಾಮಗಾರಿ ಗಳಿಗೆ ಹಣ ನೀಡಲು ಸಾಧ್ಯವಾಗಲಿಲ್ಲ. ಇದನ್ನು ಅರಿತ ಮುಖ್ಯಮಂತ್ರಿ ಅವರು, ಕಳೆದ ಮುಂಗಡಪತ್ರದಲ್ಲಿ ಒಂದು ಲಕ್ಷ ಕೋಟಿ ರೂ. ಸಾಲ ಪಡೆದು ಗ್ಯಾರಂಟಿ ಯೋಜನೆಗಳನ್ನು ಮುಂದುವರಿ ಸುವುದರ ಜೊತೆಗೆ ಅಭಿವೃದ್ಧಿ ಕೈಗೊಳ್ಳು ವುದಾಗಿ ತಿಳಿಸಿದ್ದಾರೆ. ಅಷ್ಟೇ ಅಲ್ಲ 3 ಲಕ್ಷ ಕೋಟಿ ರೂ.ನಷ್ಟು ಕಾಮಗಾರಿ ಕೈಗೆತ್ತಿಕೊಳ್ಳುವುದಾಗಿಯೂ ಹೇಳಿದ್ದಾರೆ.

ಅವರು ಬಜೆಟ್ ಮಂಡನೆ ಮಾಡಿ ಅನುಮೋದನೆ ಪಡೆಯುತ್ತಿದ್ದಂತೆ ಲೋಕಸಭಾ ಚುನಾವಣಾ ವೇಳಾಪಟ್ಟಿ ಪ್ರಕಟಗೊಂಡಿತು. ಇದರಿಂದ ಬಜೆಟ್‌ನ ಕಾರ್ಯಕ್ರಮಗಳು ಆದೇಶದ ರೂಪದಲ್ಲಿ ಹೊರಬರಲು ಸಾಧ್ಯವಾಗಲಿಲ್ಲ, ಅಭಿವೃದ್ಧಿ ಆಗುತ್ತಿಲ್ಲ, ಕ್ಷೇತ್ರಕ್ಕೆ ಹಣ ನೀಡುತ್ತಿಲ್ಲ ಎಂಬ ಅಸಮಾಧಾನ ಶಾಸಕರಲ್ಲಿ ವ್ಯಾಪಕವಾಗಿ ಕೇಳಿಬಂದಿದೆ.

ಇದು ನಮಗೆ ಮುಳುವಾಗಬಾರದೆಂಬ ಉದ್ದೇಶದಿಂದ ಮುಖ್ಯಮಂತ್ರಿ ಅವರು ಅಧಿಕಾರಿಗಳ ಜೊತೆ ಅನೌಪಚಾರಿಕ ಸಭೆ ನಡೆಸಿ ಹಣ ಬಿಡುಗಡೆಗೆ ಸಿದ್ಧತೆ ಮಾಡಿಕೊಳ್ಳಿ ಎಂದಿದ್ದಾರೆ.

ಜೂನ್ ಒಳಗೆ ಅಭಿವೃದ್ಧಿ ಕಾಮಗಾರಿಗಳ ಕೈಗೆತ್ತಿಕೊಳ್ಳಿ;

ಶಾಸಕರ ಅನುದಾನ ಬಿಡುಗಡೆ ಮಾಡಿ

- ಆಯಾಯ ಇಲಾಖಾ ಕಾರ್ಯದರ್ಶಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ
- ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ, ಸಚಿವರು ಭಾಗಿ
- ಮುಂಗಾರು ವಿಳಂಬ ಹಿನ್ನೆಲೆಯಲ್ಲಿ ಕುಡಿಯುವ ನೀರು, ಮೇವಿನ ಬಗ್ಗೆ ಗಮನಹರಿಸಲು ಸೂಚನೆ

ಬೆಂಗಳೂರು, ಮೇ 17(ಕೆಎಂಶಿ)– ಶಾಸಕರ ಅನುದಾನ ಬಿಡುಗಡೆ ಮಾಡಿ, ಜೂನ್ ತಿಂಗಳ ಒಳಗೆ ಟೆಂಡರ್ ಕರೆದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಲಾಖಾ ಕಾರ್ಯ ದರ್ಶಿಗಳಿಗೆ ಸಲಹೆ ನೀಡಿದ್ದಾರೆ.

ಜೂನ್ ತಿಂಗಳೊಳಗಾಗಿ ಟೆಂಡರ್ ಕರೆಯದಿದ್ದರೆ, ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆ ಮಾಡಿ ಎಂದು ತಾಕೀತು ಮಾಡಿದ್ದಾರೆ.

ವಿಧಾಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಲಾಖಾ ಪ್ರಧಾನಕಾರ್ಯದರ್ಶಿಗಳ ಜೊತೆ ಅನೌಪಚಾರಿಕವಾಗಿ ಬರ ಪರಿಸ್ಥಿತಿ ನಿರ್ವಹಣೆ, ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಚರ್ಚೆ ನಡೆಸಿದ ಸಂದರ್ಭದಲ್ಲಿ ಈ ಸಲಹೆ ನೀಡಿದ್ದಾರೆ. ಮಾದರಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಮುಖ್ಯಕಾರ್ಯದರ್ಶಿಗಳು ಕರೆದಿದ್ದ ಸಭೆಯಲ್ಲಿ ಮುಖ್ಯಮಂತ್ರಿ ಮತ್ತು ಸಚಿವರುಗಳು ಭಾಗಿಯಾಗಿ, ಮುಂಗಾರು ವಿಳಂಬ ಹಿನ್ನೆಲೆಯಲ್ಲಿ ಕುಡಿಯುವ ನೀರು, ಮೇವಿನ ಬಗ್ಗೆ ಗಮನ ಹರಿಸುವಂತೆ ಸೂಚಿಸಿದರು. ಅನುದಾನ ವೆಚ್ಚ ಮಾಡದೆ ಪಿ.ಡಿ. ಖಾತೆಯಲ್ಲಿ ಹಣ ಇಟ್ಟುಕೊಂಡಿರಬಾರದು, ವೆಚ್ಚವಾಗದೆ ಇರಲು ಸಕಾರಣಗಳಿದ್ದರೆ ಮಾತ್ರ ಒಪ್ಪಲಾಗುವುದು, ಆರ್ಥಿಕ ಪ್ರಗತಿಯೊಂದಿಗೆ ಗುಣಾತ್ಮಕ ಖರ್ಚು ಮಾಡಲು ಸಹ ಒತ್ತು ನೀಡಿ. ಯೋಜನಾ ಇಲಾಖೆಯಲ್ಲಿ 44% ಮಾತ್ರ ವೆಚ್ಚವಾಗಿದ್ದು, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ನಿಧಿಯ ವೆಚ್ಚದಲ್ಲಿ ಪ್ರಗತಿ ಕುಂಠಿತವಾಗಿದ್ದು, ಇವೆರಡರ ಕ್ರಿಯಾ ಯೋಜನೆಗಳನ್ನು ಜೂನ್ ತಿಂಗಳಿನಲ್ಲಿಯೇ ಅನುಮೋದನೆ ಪಡೆದುಕೊಂಡು ಅನುಷ್ಠಾನ ಮಾಡುವುದಾಗಿ ಅಧಿಕಾರಿಗಳು ಮುಖ್ಯಮಂತ್ರಿಗಳಿಗೆ ಇದೇ ಸಂದರ್ಭದಲ್ಲಿ ಮಾಹಿತಿ ನೀಡಿದರು.



ಶಾಸಕರ ಅನುದಾನ ಬಹಳ ವರ್ಷಗಳ ಕಾಲ ವೆಚ್ಚವಾಗಿಲ್ಲದಿದ್ದರೆ ಅದನ್ನು ವಾಪಸ್ಸು ಪಡೆಯಲಾಗುವುದು ಎಂದು ಮುಖ್ಯಮಂತ್ರಿಗಳು ಹಿಂದೆಯೇ ನೀಡಿದ್ದ ಸೂಚನೆಯಂತೆ ಕ್ರಮ ವಹಿಸುತ್ತಿದ್ದೇವೆ, ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು ಎಲ್ಲಿ ತೊಡಕುಂಟಾಗಿದೆ ಎಂದು ಪರಿಶೀಲನೆ ನಡೆಸುತ್ತಿದ್ದಾರೆ ಎನ್ನುವ ಮಾಹಿತಿ ಹಂಚಿಕೊಂಡರು.

ಸಕಾರಣಗಳಿಲ್ಲದೇ, ಕಳೆದ ವರ್ಷಕ್ಕಿಂತ ಹೆಚ್ಚಿನ ಸಾಧನೆ ಮಾಡಿದ್ದೇವೆ ಎಂದರೆ ಒಪ್ಪಲಾಗದು. ಹಣ ಲಭ್ಯವಿದ್ದು ಖರ್ಚು ಮಾಡದೇ ಹೋದರೆ ಅದು ಅಧಿಕಾರಿಗಳ ತಪ್ಪಾಗುತ್ತದೆ ಎಂದು ಮುಖ್ಯಮಂತ್ರಿಗಳು ಎಚ್ಚರಿಕೆ ನೀಡಿದರು.

561 ಹೊಸ ಘೋಷಣೆಗಳಿದ್ದು, 403 ಘೋಷಣೆಗಳಿಗೆ ಸರ್ಕಾರಿ ಆದೇಶ ಹೊರಡಿಸಬೇಕಿದೆ. ಬಾಕಿಯಿದ್ದಲ್ಲಿ ಕೂಡಲೇ ಕ್ರಮ ಕೈಗೊಳ್ಳಬೇಕು. 27 ಘೋಷಣೆಗಳು ಪಿಪಿಪಿ ಮಾದರಿಯಲ್ಲಿದ್ದು, ಪ್ರಸ್ತಾವನೆಗಳು ಬರಬೇಕಿವೆ, ಇವನ್ನು ಶೀಘ್ರ ತರಿಸಲು ಕ್ರಮ ವಹಿಸುವ ಅಗತ್ಯವಿದೆ ಎಂದು ಮುಖ್ಯಮಂತ್ರಿ ಅಭಿಪ್ರಾಯಪಟ್ಟರು.

ಅನುದಾನ ಬಳಕೆ ಪ್ರಮಾಣಪತ್ರ ಕೇಂದ್ರ ಸರ್ಕಾರಕ್ಕೆ ಸಕಾಲದಲ್ಲಿ ಕಳುಹಿಸದಿದ್ದರೆ ಮುಂದಿನ ಕಂತು ಬಿಡುಗಡೆಯಾಗುವುದಿಲ್ಲ, ಟೆಂಡರ್ ಕರೆಯಲು ಚುನಾವಣಾ ಆಯೋಗದಿಂದ ಅನುಮತಿ ಪಡೆದಿರುವುದರಿಂದ ಕೇಂದ್ರ ಪ್ರಾಯೋಜಿತ ಯೋಜನೆಗಳ ಟೆಂಡರ್ ಕರೆಯುವಂತೆ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಹೇಳಿದರು.

ಬರ ಸಂಬಂಧ 33.50 ಲಕ್ಷ ರೈತರಿಗೆ ಬೆಳೆ ಹಾನಿ ಪರಿಹಾರ ನೀಡಲಾಗಿದೆ, 20.13 ಲಕ್ಷ ರೈತ ಕುಟುಂಬಗಳಿಗೆ ತಲಾ 2,400 ರೂ. ನಂತೆ 476.40 ಕೋಟಿ ರೂಗಳನ್ನು ಜೀವನೋಪಾಯ ನಷ್ಟಕ್ಕೆ ನೀಡಲಾಗುತ್ತಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಬೀಜ ಬಿತ್ತನೆ ಮಾಡಿ ಚಿಗುರದೇ ಒಣಗಿ ಹೋಗಿರುವ ಪ್ರಕರಣಗಳಲ್ಲಿ ಬೆಳೆ ಹಾನಿ ಪರಿಹಾರ ನೀಡುವ ಬಗ್ಗೆ ಎನ್‌ಡಿಆರ್‌ಎಫ್ ಮಾರ್ಗಸೂಚಿ ಬದಲಾವಣೆ ಮಾಡುವ ಬಗ್ಗೆ ಸಚಿವ ಸಂಪುಟದ ಉಪಸಮಿತಿಯಲ್ಲಿ ಚರ್ಚಿಸಿ ಕೇಂದ್ರ ಸರ್ಕಾರಕ್ಕೆ ಕೋರಲು ಕ್ರಮ ಕೈಗೊಳ್ಳಬಹುದಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

53,500 ಕ್ವಿಂಟಾಲ್ ಬಿತ್ತನೆ ಬೀಜ ಅಗತ್ಯವಿದೆ. ಎಲ್ಲಾ ಜಿಲ್ಲೆಗಳಲ್ಲೂ ಬೀಜ ದಾಸ್ತಾನಿದೆ. 26 ಲಕ್ಷ ಮೆಟ್ರಿಕ್ ಟನ್ ಗೊಬ್ಬರ ಅಗತ್ಯವಿದ್ದು, 15 ಲಕ್ಷ ಟನ್ ಲಭ್ಯವಿದೆ, ಬಿತ್ತನೆ ಬೀಜ, ಗೊಬ್ಬರಕ್ಕೆ ರಾಜ್ಯದಲ್ಲಿ ತೊಂದರೆ ಇಲ್ಲ ಎಂದರು.

ಜನ ಸ್ಪಂದನ ಕಾರ್ಯಕ್ರಮದಡಿ ನಗರಾಭಿವೃದ್ಧಿ ಇಲಾಖೆಯಲ್ಲಿ 828 ಅಹವಾಲು ಸ್ವೀಕೃತಿಯಾಗಿದೆ, 554 ಬಾಕಿ ಉಳಿದಿದೆ. ವಿಲೇವಾರಿ ಮಾಡುವಾಗ ಪರಿಹಾರ ಏಕಾಗಿಲ್ಲ ಎಂದು ಸ್ಪಷ್ಟವಾಗಿ ಬರೆಯಬೇಕಿದೆ ಎಂದರು.

ಕಂದಾಯ, ವಸತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಬಾಕಿ ಉಳಿದಿರುವ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಲು ಏನು ಮಾಡಲಾಗಿದೆ ಎನ್ನುವ ಬಗ್ಗೆ ಮುಖ್ಯಮಂತ್ರಿಗಳು ಮಾಹಿತಿ ಕೇಳಿ ಪಡೆದರು. ಅದಕ್ಕೆ, ಈ ತಿಂಗಳೊಳಗೆ ಅರ್ಜಿಗಳ ಇತ್ಯರ್ಥಗೊಳಿಸಲು ಮುಂದಾಗಿದ್ದೇವೆ ಎಂದು ಅಧಿಕಾರಿಗಳು ತಿಳಿಸಿದರು.

ಕೆರೆಗಳ ಅಭಿವೃದ್ಧಿಯಡಿ ರಾಜ್ಯದ 33 ಸಾವಿರ ಕೆರೆಗಳ ಪೈಕಿ, 13 ಸಾವಿರ ಕೆರೆಗಳ ಪುನಶ್ಚೇತನಕ್ಕೆ ನರೇಗಾ ಯೋಜನೆಯಡಿ ಕ್ರಮ ವಹಿಸಲಾಗಿದೆ, ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಅಮೃತ ಕೆರೆ ಅಭಿವೃದ್ಧಿ ಯೋಜನೆಯಡಿ 824 ಕೆರೆಗಳ ಪುನಶ್ಚೇತನಕ್ಕೆ ಕ್ರಮ ವಹಿಸಲಾಗಿದೆ.

ಬರಪೀಡಿತ ಹಾಗೂ ಮಳೆ ಆಶ್ರಿತ ಪ್ರದೇಶಗಳಲ್ಲಿ 7,421 ಕೃಷಿ ಹೊಂಡಗಳನ್ನು ಪೂರ್ಣ ಮಾಡಲಾಗಿದೆ, 56,000 ಕೃಷಿ ಹೊಂಡಗಳನ್ನು ಈ ವರ್ಷ ನಿರ್ಮಾಣ ಮಾಡಲಾಗುವುದು ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಹುಬ್ಬಳ್ಳಿ ಅಂಜಲಿ ಕೊಲೆ ಆರೋಪಿ ದಾವಣಗೆರೆಯಲ್ಲಿ ಬಂಧನ

ಮಹಿಳೆ ಇರಿದು ರೈಲಿನಿಂದ ಜಿಗಿದಿದ್ದ ಹಂತಕ



ದಾವಣಗೆರೆ, ಮೇ 17–ಹುಬ್ಬಳ್ಳಿಯಲ್ಲಿ ಅಂಜಲಿ ಎಂಬ ಯುವತಿಯನ್ನು ಬರ್ಬರವಾಗಿ ಹತ್ಯೆ ಮಾಡಿ ಪರಾರಿಯಾಗಿದ್ದ ವಿಶ್ವ ಎಂಬಾತನನ್ನು ದಾವಣಗೆರೆಯಲ್ಲಿ ಶುಕ್ರವಾರ ಮುಂಜಾನೆ ಹುಬ್ಬಳ್ಳಿ–ಧಾರವಾಡ ಪೊಲೀಸರು ಬಂಧಿಸಿದ್ದಾರೆ.

ಈತ ಗುರುವಾರ ವಿಶ್ವ ಮಾನವ ಎಕ್ಸ್‌ಪ್ರೆಸ್ ರೈಲಿನಲ್ಲಿ ತೆರಳುತ್ತಿದ್ದಾಗ ಶೌಚಾಲಯಕ್ಕೆ ಹೋಗಿ ಹಿಂದಿರುಗುತ್ತಿದ್ದ ಮಹಿಳೆ ಜೊತೆ ಅನುಚಿತವಾಗಿ ವರ್ತಿಸಿದ್ದಾನೆ. ಆಕೆ ವಿರೋಧಿಸಿದಾಗ ಚಾಕುವಿನಿಂದ ಆಕೆಯ ಹೊಟ್ಟೆಗೆ ಇರಿಯಲು ಪ್ರಯತ್ನಿಸಿದ ವೇಳೆ ಕೈ ಅಡ್ಡ ಇಟ್ಟಾಗ ಕೈಗೆ ಇರಿದಿದ್ದಾನೆ. ಈ ವೇಳೆ ಆಕೆಯ ಪತಿ ಮತ್ತು ಇನ್ನಿತರ ಪ್ರಯಾಣಿಕರು ಹಲ್ಲೆ ಮಾಡಲು ಮುಂದಾದಾಗ ಚಲಿಸುತ್ತಿದ್ದ ರೈಲಿನಿಂದ ಧುಮುಕಿ ತೀವ್ರವಾಗಿ ಗಾಯಗೊಂಡಿದ್ದಾನೆ.

ಈತನನ್ನು ರಕ್ಷಿಸಿದ ದಾವಣಗೆರೆ ರೈಲ್ವೆ ಪೊಲೀಸರು ವಿಚಾರಣೆ ನಡೆಸಿದಾಗ ಹುಬ್ಬಳ್ಳಿಯಲ್ಲಿ ಅಂಜಲಿ ಎಂಬ ಯುವತಿಯನ್ನು ಹತ್ಯೆಗೈದ ಆರೋಪಿ ಈತನೇ ಎಂಬುದು ಗೊತ್ತಾದ ಹಿನ್ನೆಲೆಯಲ್ಲಿ ಅವರು ನೀಡಿದ ಮಾಹಿತಿ ಮೇರೆಗೆ ದಾವಣಗೆರೆಗೆ ತೆರಳಿದ ಹುಬ್ಬಳ್ಳಿ–ಧಾರವಾಡ ಪೊಲೀಸರು ಈತನನ್ನು ಬಂಧಿಸಿ, ಕಿಮ್ಸ್ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಹುಬ್ಬಳ್ಳಿ–ಧಾರವಾಡ ಪೊಲೀಸ್ ಆಯುಕ್ತೆ ರೇಣುಕಾ ಸುಕುಮಾರ, ದಾವಣಗೆರೆ ರೈಲ್ವೆ ಪೊಲೀಸರ ಸಹಕಾರದೊಂದಿಗೆ ಈತನನ್ನು ಇಂದು ಮುಂಜಾನೆ ಬಂಧಿಸಿದ್ದೇವೆ. ರೈಲಿನಿಂದ ಬಿದ್ದು ಮುಖ ಮತ್ತು ತಲೆ ಭಾಗಕ್ಕೆ ಪೆಟ್ಟಾಗಿರುವುದರಿಂದ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈತ ಗೋವಾ ಅಥವಾ ಮಹಾರಾಷ್ಟ್ರಕ್ಕೆ ಹೋಗಿ ತಲೆಮರೆಸಿಕೊಳ್ಳಲು ಪ್ಲಾನ್ ಮಾಡಿದ್ದ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಈತನ ಮೇಲೆ ಬೈಕ್ ಕಳ್ಳತನದ ನಾಲ್ಕು ಪ್ರಕರಣಗಳು ದಾಖಲಾಗಿವೆ ಎಂದು ಮಾಹಿತಿ ದೊರೆತಿದೆ. ಅಂಜಲಿ ಮತ್ತು ಈತ ಪರಸ್ಪರ ಪ್ರೀತಿಸುತ್ತಿದ್ದರಂತೆ. ಇತ್ತೀಚೆಗೆ ಈತನ ನಂಬರ್ ಅನ್ನು ಅಂಜಲಿ ಬ್ಲಾಕ್ ಮಾಡಿದ ಕಾರಣದಿಂದ ಹತ್ಯೆ ಮಾಡಿರುವುದಾಗಿ ತಿಳಿಸಿದ್ದಾನೆ. ಆದರೆ ಆತ ಹೇಳಿರುವುದೇ ನಿಜ ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಆಸ್ಪತ್ರೆಯಿಂದ ವಿಶ್ವ ಬಿಡುಗಡೆಯಾದ ನಂತರ ವಿಚಾರಣೆಗೊಳಪಡಿಸಿ ಸಂಪೂರ್ಣ ಮಾಹಿತಿ ಪಡೆಯಬೇಕಾಗಿದೆ ಎಂದರು.

ಮೈಸೂರಿನ ಹೋಟೆಲ್‌ನಲ್ಲಿ ಸಪ್ಲೇಯರ್ ಆಗಿದ್ದ ವಿಶ್ವ!

ಮೈಸೂರು,ಮೇ.17–ಹುಬ್ಬಳ್ಳಿಯಲ್ಲಿ ನಡೆದ ಅಂಜಲಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತನಾಗಿರುವ ಆರೋಪಿ ವಿಶ್ವ ಆಲಿಯಾಸ್ ಗಿರೀಶ್ ಮೈಸೂರಿನ ಹೋಟೆಲ್ ಒಂದರಲ್ಲಿ ಸಪ್ಲೇಯರ್ ಆಗಿ ಕೆಲಸ ನಿರ್ವಹಿಸಿದ್ದ ಎಂಬುದು ಬೆಳಕಿಗೆ ಬಂದಿದೆ

ಗೋವರ್ಧನ್ ಎಂಬುವವರ ಮಾಲೀಕತ್ವದ ಮೈಸೂರಿನ ಮಹಾರಾಜ ಹೋಟೆಲ್‌ನಲ್ಲಿ ಈತ ಕಳೆದ ನಾಲ್ಕು ತಿಂಗಳಿಂದ ಸಪ್ಲೇಯರ್ ಆಗಿ ಕೆಲಸ ಮಾಡುತ್ತಿದ್ದ. ವಿನಾಯಕ ನರ್ಸಿಂಗ್ ಕೇರ್ ಏಜೆನ್ಸಿ ಮೂಲಕ ಬಂದಿದ್ದ ವಿಶ್ವ ಆಲಿಯಾಸ್ ಗಿರೀಶ್‌ನನ್ನು ಮೊದಲಿಗೆ ಹೋಟೆಲ್ ಮಾಲೀಕ ಗೋವರ್ಧನ್, ತಮ್ಮ ತಂದೆಯನ್ನು ನೋಡಿಕೊಳ್ಳಲು ನೇಮಿಸಿದ್ದರು.

ಬಳಿಕ ಆರೋಪಿ ವಿಶ್ವ ಅಲಿಯಾಸ್ ಗಿರೀಶ್ ಕೆಲಸ ಬಿಟ್ಟು ಊರಿಗೆ ಹೋಗಿದ್ದ, ಮತ್ತೆ ಕೆಲಸ ಕೇಳಿಕೊಂಡು ಬಂದಾಗ ಆತನನ್ನು ನಮ್ಮ ಹೋಟೆಲ್‌ನಲ್ಲಿ ರೂಂ ಬಾಯ್ ಹಾಗೂ ಸಪ್ಲೈಯರ್ ಆಗಿ ಸೇರಿಸಿಕೊಳ್ಳಲಾಗಿತ್ತು. ಆದರೆ ಆತ ಸರಿಯಾಗಿ ಕೆಲಸಕ್ಕೆ ಬರುತ್ತಿರಲಿಲ್ಲ. ಆಗಾಗ ರಜಾ ತೆಗೆದು ಕೊಂಡು ಬಿಟ್ಟು ಬಿಟ್ಟು ಕೆಲಸಕ್ಕೆ ಬರುತ್ತಿದ್ದ. ಕಳೆದ ಮಂಗಳವಾರ ಸಂಜೆ 5 ಸಾವಿರ ರೂ. ಅಡ್ವಾನ್ಸ್ ತೆಗೆದುಕೊಂಡು ಹೋದವನು ಮತ್ತೆ ವಾಪಸ್ ಬಂದಿಲ್ಲ. ಮರುದಿನ ಪೊಲೀಸರು ನನಗೆ ಕರೆ ಮಾಡಿದಾಗಲೇ ಈತ ಕೊಲೆ ಮಾಡಿದ್ದಾನೆ ಎಂಬುದು ಗೊತ್ತಾಗಿದ್ದು ಎಂದು ಮಹಾರಾಜ ಹೋಟೆಲ್ ಮಾಲೀಕ ಗೋವರ್ಧನ್ ಮಾಹಿತಿ ನೀಡಿದರು.

ನಮ್ಮ ಹೋಟೆಲ್‌ನಲ್ಲಿ ಕೆಲಸ ಮಾಡುವ ಸಿಬ್ಬಂದಿಗಳು ಆತ ಮೊಬೈಲ್‌ನಲ್ಲಿ ಹೆಚ್ಚು ಮಾತನಾಡುತ್ತಿದ್ದ ಎಂದು ಹೇಳಿದರು. ಜೊತೆಗೆ ಕಂಪನಿಯ ಫೋನ್‌ನಿಂದಲೂ ಹೆಚ್ಚು ದಿನ ಮಾತನಾಡಿದ್ದಾನೆ. ಘಟನೆ ನಡೆಯುವ ಹಿಂದಿನ ದಿನ ಜೋರಾಗಿ ಕೂಗಾಡಿ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದನಂತೆ. ನಮ್ಮ ಹೋಟೆಲ್‌ಗೆ ಏಳು ಜನ ಪೊಲೀಸರು ಬಂದಿದ್ದರು. ನಿನ್ನೆ ರಾತ್ರಿಯವರೆಗೂ ಪೊಲೀಸರು ನಮ್ಮ ಹೋಟೆಲ್ ಬಳಿಯೇ ಇದ್ದರು. ಆತ ದಾವಣಗೆರೆಯಲ್ಲಿ ಸಿಕ್ಕ ಬಳಿಕ ಮಧ್ಯರಾತ್ರಿ ಪೊಲೀಸರು ಇಲ್ಲಿಂದ ತೆರಳಿದ್ದಾರೆ ಎಂದು ಮಹಾರಾಜ ಹೋಟೆಲ್ ಮಾಲೀಕ ಗೋವರ್ಧನ್ ತಿಳಿಸಿದ್ದಾರೆ.

ಮಹಾರಾಣಿ ಕೆಂಪನಂಜಮ್ಮಣ್ಣಿ ಮಹಿಳಾ ಅಭಿವೃದ್ಧಿ ಕನಸು ಕಂಡಿದ್ದರು

- ಅಕ್ಕ ಮಹಾದೇವಿ ಮಹಿಳಾ ವಿವಿ ವಿಶ್ರಾಂತ ಕುಲಪತಿ ಪ್ರೊ.ಸಬೀಹಾ ಭೂಮಿಗೌಡ ವಿವರಣೆ
- ಬರೀ ಪರೀಕ್ಷೆಯಲ್ಲಿ ಅಂಕ ಗಳಿಸುವುದಷ್ಟೇ ಅಲ್ಲ ಉತ್ತಮ ನಡೆ–ನುಡಿಯೂ ಬೇಕು
- ಮೈಸೂರು ಮಹಾರಾಣಿ ವಿಜ್ಞಾನ ಕಾಲೇಜಿನ ಕಾರ್ಯಕ್ರಮದಲ್ಲಿ ಭಾಗಿ

ಮೈಸೂರು, ಮೇ 17(ಎಸ್‌ಬಿಡಿ)– ಎಲ್ಲಾ ವರ್ಗದ ಹೆಣ್ಣು ಮಕ್ಕಳಿಗೂ ಶಿಕ್ಷಣ ಕಲ್ಪಿಸುವ ಮೂಲಕ ಮಹಾರಾಣಿ ಕೆಂಪನಂಜಮ್ಮಣ್ಣಿ ಅವರು ಮಹಿಳಾ ಅಭಿವೃದ್ಧಿಯ ಕನಸು ಕಂಡಿದ್ದರು ಎಂದು ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಸಬೀಹಾ ಭೂಮಿಗೌಡ ಬಣ್ಣಿಸಿದರು.



ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ, ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ರೇಂಜರ್ಸ್ ಚಟುವಟಿಕೆಗಳ ಸಮಾರೋಪ ಸಮಾರಂಭವನ್ನು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಸಬೀಹಾ ಭೂಮಿಗೌಡ ಗಿಡಕ್ಕೆ ನೀರೆರೆದು ಉದ್ಘಾಟಿಸಿದರು.

ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ, ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ರೇಂಜರ್ಸ್ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಮಹಾರಾಣಿಯವರ ಆಶಯ ಹಾಗೂ ಆ ನಿಟ್ಟಿನಲ್ಲಿ ಅವರ ಸೇವಾಕಾರ್ಯವನ್ನು ಅರಿತುಕೊಂಡು ಎಲ್ಲಾ ಹೆಣ್ಣು ಮಕ್ಕಳು ಉತ್ತಮ ಶಿಕ್ಷಣ ಪಡೆದು ಸಮಾಜದ ಸಂಪತ್ತಾಗಬೇಕು ಎಂದು ಆಶಿಸಿದರು.

ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸುವುದಷ್ಟೇ ನಿಮ್ಮ ಗುರಿಯಾಗಬಾರದು. ಉತ್ತಮ ನಡೆ–ನುಡಿಯೊಂದಿಗೆ ಉನ್ನತ ಹುದ್ದೆ ಗಳಿಸುವತ್ತ ನಿಮ್ಮ ಪ್ರಯತ್ನವಿರಬೇಕು. ಮೇರಿಕ್ಯೂರಿ, ಕಲ್ಪನಾ ಚಾವ್ಲಾ ಅವರಂತಹ ಹಲವರ ಸಾಧನೆ ನಮ್ಮ ಕಣ್ಮುಂದಿದೆ. 180 ವರ್ಷಗಳ ಹಿಂದೆಯೇ ಮಹಿಳೆಯರಿಗೆ ಶಿಕ್ಷಣ ನೀಡಲು ಶ್ರಮಿಸಿದ ತಾಯಿ ಸಾವಿತ್ರಿ ಬಾಯಿ ಫುಲೆ ಅವರದ್ದು ಎಂಥಾ ಸಾಧನೆ ಅಲ್ಲವೇ ಎಂದರು.

ಮಹಿಳಾ ಸಾಧಕಿಯರು, ಹೋರಾಟಗಾರ್ತಿಯರ ಹಾದಿಯನ್ನು ಅನುಸರಿಸುವ ಮೂಲಕ ಅವರಿಗೆ ಕೃತಜ್ಞತೆ ಸಲ್ಲಿಸಬೇಕು. ತುಳಿಯಲು ಯತ್ನಿಸುವವರ ವಿರುದ್ಧ ಧೈರ್ಯವಾಗಿ ಧ್ವನಿ ಎತ್ತಬೇಕು. ಯಾವುದೇ ಸನ್ನಿವೇಶವನ್ನೂ ದಿಟ್ಟತನದಿಂದ ಎದುರಿಸುವ ಛಾತಿ ರೂಢಿಸಿಕೊಳ್ಳಬೇಕು. ಪದವಿ ಜೊತೆಯಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ತಯಾರಿ ನಡೆಸಿ, ಉನ್ನತ ಹುದ್ದೆ ಗಳಿಸಿಕೊಳ್ಳಬೇಕು ಎಂದು ವಿದ್ಯಾರ್ಥಿನಿಯರಿಗೆ ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಂ.ಅಬ್ದುಲ್ ರಹಿಮಾನ್ ಮಾತನಾಡಿ, ಭಾರತೀಯ ಸಂಸ್ಕೃತಿ ಸರ್ವಶ್ರೇಷ್ಠವಾದುದು. ಇದು ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುತ್ತದೆ. ಸಹಜೀವಿಗಳ ಬಗ್ಗೆ ಉದಾತ್ತತೆಯನ್ನು ಬಿತ್ತುತ್ತದೆ. ಹಾಗಾಗಿ ನಮ್ಮ ದೇಶದ ಸಂಸ್ಕೃತಿಯನ್ನು ಬಿಂಬಿಸುವಂತಹ ನಡೆ–ನುಡಿಯನ್ನು ಎಲ್ಲರೂ ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ವಿವಿಧ ವಿಭಾಗಗಳಲ್ಲಿ ಹೆಚ್ಚು ಅಂಕ ಗಳಿಸಿದ ಎನ್‌ಸಿಸಿ, ಎನ್‌ಎಸ್‌ಎಸ್, ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳ ಜೊತೆಗೆ ಮಾರ್ಗದರ್ಶನ ನೀಡಿದ ಅಧ್ಯಾಪಕರನ್ನು ಅಭಿನಂದಿಸಲಾಯಿತು.

ಸಮಾರಂಭದಲ್ಲಿ ಸಾಂಸ್ಕೃತಿಕ ಸಮಿತಿ ಸಂಚಾಲಕಿ ಡಾ.ವಿ.ಲಲಿತಾ, ಖಜಾಂಚಿ ಆರ್.ರಶ್ಮಿ, ದೈಹಿಕ ಶಿಕ್ಷಣ ನಿರ್ದೇಶಕಿ ಡಾ.ಡಿ.ರಮಣಿ, ರೇಂಜರ್ಸ್ ಸಂಚಾಲಕಿ ಮಂಜುಳಾ ಶೇಷಗಿರಿ, ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿಗಳಾದ ಡಾ.ಲಕ್ಷ್ಮೀ ಎಂ ಪಲೋಟಿ, ಪತ್ರಾಂಕಿತ ವ್ಯವಸ್ಥಾಪಕಿ ಆರ್.ಮೀನಾಕ್ಷಿ, ವಿದ್ಯಾರ್ಥಿ ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ಶರಣ್ಯಾ, ಸ್ನಾತಕೋತ್ತರ ಪದವಿ ವಿಭಾಗದ ಉಪಾಧ್ಯಕ್ಷೆ ಎಚ್.ಎಂ.ಜಯಲಕ್ಷ್ಮಿ, ಸ್ನಾತಕ ಪದವಿ ವಿಭಾಗದ ಉಪಾಧ್ಯಕ್ಷೆ ಬಿ.ಎಂ. ಅರ್ಚನಾ, ಸಾಂಸ್ಕೃತಿಕ ಸಮಿತಿ ಕಾರ್ಯದರ್ಶಿ ಕಾವ್ಯ ಎಂ ಕಟ್ಟಿ, ಜಂಟಿ ಕಾರ್ಯದರ್ಶಿ ಆರ್.ಮೇಘನಾ, ಎಂ.ಕೀರ್ತಿ, ಆರ್.ಚೈತ್ರ, ಕೆ.ಆರ್.ಸಹನಾ, ವಿ.ಲಿಖಿತಾ, ಎಸ್.ಎಂ.ಐಶ್ವರ್ಯ, ಹರ್ಷಿತಾ, ಮಮತಾ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶನಿವಾರ 18 ಮೇ 2024

ಖಾಸಗಿ ಜಮೀನಿನ ಮರಗಳ ಸರ್ವೇ ಕಾರ್ಯ ಸುತ್ತೋಲೆ ಹಿಂಪಡೆಯಲು ಒತ್ತಾಯಿಸಿ

ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ

ಮಡಿಕೇರಿ, ಮೇ 17–ಜಿಲ್ಲೆಯ ಖಾಸಗಿ ಜಮೀನುಗಳ ಮರಗಳ ಸರ್ವೇ ಕಾರ್ಯದ ಸುತ್ತೋಲೆ ಹಿಂಪಡೆಯಬೇಕು ಎಂದು ಒತ್ತಾಯಿಸಿ ಜಿಲ್ಲಾ ಬಿಜೆಪಿ ಕಾರ್ಯಕರ್ತರು ಅರಣ್ಯ ಭವನ ಎದುರು ಶುಕ್ರವಾರ ಬೃಹತ್ ಪ್ರತಿಭಟನೆ ನಡೆಸಿದರು.



ಖಾಸಗಿ ಜಮೀನುಗಳ ಮರಗಳ ಸರ್ವೇ ಸುತ್ತೋಲೆಯನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿ ಜಿಲ್ಲಾ ಬಿಜೆಪಿ ಕಾರ್ಯಕರ್ತರು ಅರಣ್ಯ ಭವನ ಎದುರು ಪ್ರತಿಭಟನೆ ನಡೆಸಿದರು.

ಕೊಡಗು ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಎಂಎಲ್‌ಸಿ ಸುಜಾ ಕುಶಾಲಪ್ಪ, ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್, ಮಾಜಿ ಎಂಎಲ್‌ಸಿ ಎಸ್.ಜಿ. ಮೇದಪ್ಪ ನೇತೃತ್ವದಲ್ಲಿ ನಗರದಂಚಿನ ಅರಣ್ಯ ಭವನ ಎದುರು ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು, ರಾಜ್ಯ ಸರ್ಕಾರ ಹೊರಡಿಸಿರುವ ಕೊಡಗಿಗೆ ಮಾರಕವಾಗಿರುವ ಸುತ್ತೋಲೆಯನ್ನು ತಕ್ಷಣ ಹಿಂಪಡೆಯಬೇಕು. 'ಸಿ' ಮತ್ತು 'ಡಿ' ದರ್ಜೆಯ ಜಾಗದಲ್ಲಿ ಹಲವು ದಶಕಗಳಿಂದ ನೆಲೆಸಿರುವ ಬಡವರಿಗೆ ಪಟ್ಟೆ ನೀಡಲು ಅರಣ್ಯ ಇಲಾಖೆ ಅಡ್ಡಿಪಡೆಸುತ್ತಿದೆ ಎಂದು ಆರೋಪಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಅರಣ್ಯ ಸಚಿವ ಈಶ್ವರ್ ಖಂಡ್ರೆ ಹಾಗೂ ಕೊಡಗಿನ ಕಾಂಗ್ರೆಸ್ ಇಬ್ಬರು ಶಾಸಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಅಧಿಕಾರಿಗಳ ಅನುಪಸ್ಥಿತಿಗೆ ಆಕ್ರೋಶ: ಮರಗಳ ಸರ್ವೇ ಸಂಬಂಧಿಸಿದಂತೆ ಪ್ರತಿಭಟನೆ ನಡೆಸುತ್ತಿರುವ ಬಗ್ಗೆ ಅರಿವಿದ್ದರೂ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಉದ್ದೇಶ ಪೂರ್ವಕವಾಗಿಯೇ ಇಂದು ಬೆಂಗಳೂರಿನ ಸಭೆಯ ನೆಪದಲ್ಲಿ ಗೈರಾಗಿದ್ದಾರೆ. ಖಾಸಗಿ ಜಮೀನುಗಳ ಮರಗಳ ಸರ್ವೇ ಸುತ್ತೋಲೆ ಹಿಂದಕ್ಕೆ ಪಡೆಯಬೇಕೆನ್ನುವ ನಮ್ಮ ಪ್ರಮುಖ ಬೇಡಿಕೆ ಈಡೇರಿಕೆಗಾಗಿ ಅಹೋರಾತ್ರಿ ಹೋರಾಟ ನಡೆಸಲು ಸಿದ್ಧ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಎಚ್ಚರಿಸಿದರು.

ಸರ್ಕಾರದಿಂದ ನಿರಂತರ ಕಿರುಕುಳ: ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿ, ರಾಜ್ಯದ ಕಾಂಗ್ರೆಸ್ ಸರ್ಕಾರ ಜಿಲ್ಲೆಯ ಜನತೆಗೆ ಒಂದಲ್ಲ ಒಂದು ಕಿರುಕುಳವನ್ನು ನೀಡುತ್ತಲೇ ಬರುತ್ತಿದೆ. ಖಾಸಗಿ ಜಾಗಗಳ ಮರಗಳ ಸರ್ವೇ ಕಾರ್ಯಕ್ಕೆ ಅರಣ್ಯ ಇಲಾಖಾಧಿಕಾರಿಗಳು ಸುತ್ತೋಲೆ ಹೊರಡಿಸಿ ಅನಗತ್ಯ ತೊಂದರೆ ನೀಡಲು ಮುಂದಾಗಿದ್ದಾರೆ ಎಂದು ಆರೋಪಿಸಿದರು.

ತೋಟದಿಂದ ಹೊರ ಹಾಕುತ್ತೇವೆ: ಎಂಎಲ್‌ಸಿ ಸುಜಾ ಕುಶಾಲಪ್ಪ ಮಾತನಾಡಿ, ಜಿಲ್ಲೆಯ ಬೆಳೆಗಾರರು ತಮ್ಮ ಜಾಗಗಳಲ್ಲಿ ಮರಗಳನ್ನು ಬೆಳೆಸಿ ತಲ ತಲಾಂತರಗಳಿಂದ ಸಂರಕ್ಷಿಸಿಕೊಂಡು ಬಂದಿದ್ದಾರೆ. ಇದೀಗ ಇಂತಹ ಮರಗಳ ಸರ್ವೇ ಕಾರ್ಯ ಮಾಡುವುದು ಏಕೆ? ಮರ ಗಣತಿ ನೆಪದಲ್ಲಿ ಖಾಸಗಿ ಜಾಗಗಳಿಗೆ ಬರುವ ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿಯನ್ನು ತೋಟದಿಂದ ಹೊರ ಹಾಕುವುದಾಗಿ ಎಚ್ಚರಿಕೆ ನೀಡಿದರು.

ಬೀಗ ಜಡಿಯುವ ಎಚ್ಚರಿಕೆ: ಮಾಜಿ ಎಂಎಲ್‌ಸಿ ಸುನೀಲ್ ಸುಬ್ರಮಣಿ ಮಾತನಾಡಿ, ನಮ್ಮ ಬೇಡಿಕೆಗಳ ಈಡೇರಿಕೆಗೆ ಸಂಬಂಧಿಸಿದಂತೆ ಅಧಿಕಾರಿಗಳು ಸ್ಥಳಕ್ಕೆ ಬಾರದಿದ್ದಲ್ಲಿ ಕಚೇರಿಗೆ ಬೀಗ ಜಡಿಯುವುದಾಗಿ ಎಚ್ಚರಿಕೆ ನೀಡಿದರು.

ನಂತರ ಅರಣ್ಯ ಇಲಾಖಾಧಿಕಾರಿಗಳ ಅನುಪಸ್ಥಿತಿಯಲ್ಲಿ ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿ ವೆಂಕಟ್‌ರಾಜಾ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಬಿಜೆಪಿ ಮುಖಂಡರಾದ ಕೋಡಿ ಪೊನ್ನಪ್ಪ, ಎಸ್.ಜಿ.ಮೇದಪ್ಪ, ರೀನಾ ಪ್ರಕಾಶ್, ಡಾ. ಬಿ.ಸಿ.ನವೀನ್, ಶಾಂತೆಯಂಡ ರವಿ ಕುಶಾಲಪ್ಪ, ಸುಬ್ರಮಣ್ಯ ಉಪಾಧ್ಯಾಯ, ಬಿ.ಕೆ. ಅರುಣ್ ಕುಮಾರ್, ಅನಿತಾ ಪೂವಯ್ಯ, ನೆಲ್ಲೀರ ಚಲನ್, ತೆಕ್ಕಡೆ ಶೋಭಾ, ಲೋಕೇಶ್ವರಿ ಗೋಪಾಲ್, ಕೊಮಾರಪ್ಪ, ಪಿ.ಎಂ. ರವಿ, ಬಲ್ಲಾರಂಡ ಮಣಿ ಉತ್ತಪ್ಪ ಹೊಸೂರು ಸತೀಶ್ ಜೋಯಪ್ಪ ಪಾಲ್ಗೊಂಡಿದ್ದರು.

> “ಜಿಲ್ಲೆಯಲ್ಲಿ ಕಾಡಾನೆಗಳ ಸಂಖ್ಯೆ ಮಿತಿಮೀರಿದ್ದು, ಅವುಗಳ ಉಪಟಳದಿಂದ ಗ್ರಾಮೀಣರು ಕಂಗಾಲಾಗಿದ್ದಾರೆ. ಕಾಡಾನೆಗಳ ಬಗ್ಗೆ ಕಾಳಜಿಯಿಂದ ಮಾತನಾಡುವ ಪರಿಸರವಾದಿಗಳು ತಮ್ಮ ಮನೆಯಲ್ಲಿ ಕಾಡಾನೆಗಳನ್ನು ಸಾಕಿಕೊಳ್ಳಲಿ. ಅರಣ್ಯ ಇಲಾಖೆ 'ಅರಣ್ಯ ಭವನ'ವನ್ನೇ ಆನೆ ಕೇಂದ್ರವನ್ನಾಗಿ ಮಾಡಲಿ. ಇಲ್ಲದಿದ್ದಲ್ಲಿ ಕಾಡಾನೆಗಳ ನಿಯಂತ್ರಣಕ್ಕೆ ತಮಗೆ ಗುಂಡು ಹೊಡೆಯಲು ಅವಕಾಶ ನೀಡಲಿ.
>
> –ಎಂ.ಪಿ.ಅಪ್ಪಚ್ಚು ರಂಜನ್, ಮಾಜಿ ಶಾಸಕ

ಸಾರ್ವಜನಿಕರಿಂದ ಲೋಕಾಯುಕ್ತರ ಅಹವಾಲು ಸ್ವೀಕಾರ

ಮಡಿಕೇರಿ ಮೇ 17–ಲೋಕಾಯುಕ್ತ ಡಿವೈಎಸ್‌ಪಿ ಪವನ್ ಕುಮಾರ್ ನೇತೃತ್ವದಲ್ಲಿ ಶುಕ್ರವಾರ ನಗರದಲ್ಲಿ ಸಾರ್ವಜನಿಕರ ಅಹವಾಲು ಸ್ವೀಕಾರ ಹಾಗೂ ಕುಂದುಕೊರತೆ ಸಭೆ ನಡೆಯಿತು.



ಮಡಿಕೇರಿ ತಹಶೀಲ್ದಾರ್ ಕಚೇರಿಯಲ್ಲಿ ಲೋಕಾಯುಕ್ತ ಡಿವೈಎಸ್‌ಪಿ ಪವನ್ ಕುಮಾರ್ ಅವರಿಗೆ ಸಾರ್ವಜನಿಕರು ಅಹವಾಲು ಸಲ್ಲಿಸಿದರು.

ನಗರದ ತಹಶೀಲ್ದಾರ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಲೋಕಾಯುಕ್ತ ಡಿವೈಎಸ್‌ಪಿಗೆ ಸಲ್ಲಿಸಿದರು. ಜಾತಿ, ಆದಾಯ ಹಾಗೂ ವಿವಿಧ ಪ್ರಮಾಣ ಪತ್ರ ಪಡೆಯಲು ಹರಸಾಹಸ ಪಡಬೇಕಿದೆ ಎಂದು ಸಾರ್ವಜನಿಕರು ದೂರಿದರು.

ಸಕಾಲದಲ್ಲಿ ಇಷ್ಟು ದಿನದೊಳಗೆ ಪ್ರಮಾಣ ಪತ್ರ ನೀಡಬೇಕು ಎಂಬ ಆದೇಶ ಇದ್ದರೂ ಸತಾಯಿಸುತ್ತಿದ್ದಾರೆ. ಪ್ರಮಾಣ ಪತ್ರ ಪಡೆಯಲು ಅಗತ್ಯ ದಾಖಲಾತಿಯ ಮಾಹಿತಿ ಫಲಕವನ್ನು ಅಳವಡಿಸಿದ್ದಲ್ಲಿ ಒದಗಿಸುತ್ತೇವೆ. ಆದರೆ, ಅಧಿಕಾರಿಗಳು ಸತಾಯಿಸುವುದು ಏಕೆ? ಎಂದು ಸಾರ್ವಜನಿಕರು ಅಳಲು ತೋಡಿಕೊಂಡರು.

ನಂತರ ಪ್ರತಿಕ್ರಿಯಿಸಿದ ಲೋಕಾಯುಕ್ತ ಡಿವೈಎಸ್‌ಪಿ, ಯಾರು ಸತಾಯಿಸುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿ ನೀಡಿದ್ದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಜಾಗದ ಖಾತೆಗೆ ಸಂಬಂಧಿಸಿದಂತೆ ಸುಮಾರು ನಾಲ್ಕು ದಶಕಗಳಿಂದ ಓಡಾಡಿದರೂ ಖಾತೆ ಬದಲಾವಣೆ ಆಗಿಲ್ಲ. ಈ ಬಗ್ಗೆ ತ್ವರಿತ ಕ್ರಮ ಕೈಗೊಳ್ಳಬೇಕಿದೆ ಎಂದು ಸಾರ್ವಜನಿಕರೊಬ್ಬರು ಮನವಿ ಮಾಡಿದರು.

ಪಡಿತರ ಚೀಟಿ ಕೊಡಿಸುವಂತೆ ಸಾರ್ವಜನಿಕರೊಬ್ಬರು ಮನವಿ ಮಾಡಿದರು. ವಿವಿಧ ಇಲಾಖೆ ಕಚೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿ ತಪ್ಪಿಸಿ, ಸಾರ್ವಜನಿಕರಿಗೆ ನೇರವಾಗಿ ಕೆಲಸಗಳು ಆಗುವಂತಾಗಬೇಕು ಎಂದರು.

ಈ ಕುರಿತು ಪ್ರತಿಕ್ರಿಯಿಸಿದ ಲೋಕಾಯುಕ್ತ ಡಿವೈಎಸ್‌ಪಿ, ಸಾರ್ವಜನಿಕರನ್ನು ಗೌರವಯುತವಾಗಿ ಮಾತನಾಡಿಸಿದಲ್ಲಿ ಅರ್ಧ ಕೆಲಸಗಳು ಬಗೆಹರಿಯುತ್ತವೆ. ನಂತರ ಅವರ ಕುಂದುಕೊರತೆಗಳನ್ನು ಆಲಿಸಿ ಪರಿಹರಿಸಬಹುದು ಎಂದರು. ಇದೇ ವೇಳೆ ತಹಸಿಲ್ದಾರ್ ರಮೇಶ್ ಬಾಬು ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಕಾರು ಪಲ್ಟಿ: ಚಾಲಕ ಪಾರು

ಮಡಿಕೇರಿ, ಮೇ 17–ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿಯಾಗಿ ಚಾಲಕ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ನಾಪೋಕ್ಲು ಕೊಳಕೇರಿ ಮುಖ್ಯ ರಸ್ತೆಯ ಕೋಟೇರಿಯಲ್ಲಿ ಶುಕ್ರವಾರ ನಡೆದಿದೆ.

ಕಕ್ಕಬ್ಬೆ ಸಮೀಪದ ಕುಂಜಿಲ ಗ್ರಾಮದ ಖಾಲಿದ್ ಪ್ರಾಣಾಪಾಯದಿಂದ ಪಾರಾದ ಚಾಲಕ. ಈತ ಸಂಜೆ ಕಾರಿನಲ್ಲಿ ನಾಪೋಕ್ಲುವಿಗೆ ಬರುತ್ತಿದ್ದಾಗ ಕೋಟೇರಿ ಬಳಿ ನಿಯಂತ್ರಣ ತಪ್ಪಿದೆ. ಪರಿಣಾಮ ರಸ್ತೆಬದಿಗೆ ಪಲ್ಟಿ ಹೊಡೆದು ಕಾರಿನ ಮೇಲ್ಭಾಗ ಸಂಪೂರ್ಣವಾಗಿ ಜಖಂಗೊಂಡಿದೆ. ಸಾರ್ವಜನಿಕರ ನೆರವಿನಿಂದ ಕಾರನ್ನು ತೆರವುಗೊಳಿಸಲಾಯಿತು.

ಮಳೆಗೆ ಮನೆ ಕಾಂಪೌಂಡ್ ಕುಸಿತ

ನಾಪೋಕ್ಲು, ಮೇ 17– ನಾಪೋಕ್ಲು ಹೋಬಳಿಯ ಎಮ್ಮೆಮಾಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಡಿಯಾಣಿ ಗ್ರಾಮದ ಬೊಟ್ಟೋಳಂಡ ಬಿ.ಅಪ್ಪಣ್ಣ ಅವರ ಮನೆಯ ಕಾಂಪೌಂಡ್ ಮಳೆಗೆ ಕುಸಿದಿದೆ.

ಈ ಭಾಗದಲ್ಲಿ ಗುರುವಾರ ರಾತ್ರಿ ಮೂರು ಕಾಲು ಇಂಚು ಮಳೆಯಾಗಿದ್ದು, ಅಪ್ಪಣ್ಣನವರ ಮನೆಯ 100 ಅಡಿ ಉದ್ದ ಹಾಗೂ 8 ಅಡಿ ಎತ್ತರದ ತಡೆಗೋಡೆ ಸಂಪೂರ್ಣವಾಗಿ ಕುಸಿದಿದೆ. ಸ್ಥಳಕ್ಕೆ ನಾಪೋಕ್ಲು ಕಂದಾಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ, ಪರಿಶೀಲಿಸಿದರು. ನಾಪೋಕ್ಲು ವ್ಯಾಪ್ತಿಯಲ್ಲಿ ನಾಲ್ಕೈದು ದಿನಗಳಿಂದ ನಿರಂತರವಾಗಿ ಮಳೆಯಾಗುತ್ತಿದ್ದು, ಶುಕ್ರವಾರ ಮಧ್ಯಾಹ್ನವೂ ವಿವಿದೆಡೆ ಮಳೆ ಸುರಿಯಿತು.



ಎಮ್ಮೆಮಾಡು ಗ್ರಾಪಂ ವ್ಯಾಪ್ತಿಯ ಪಡಿಯಾಣಿ ಗ್ರಾಮದ ಬೊಟ್ಟೋಳಂಡ ಬಿ.ಅಪ್ಪಣ್ಣ ಅವರ ಮನೆಯ ಕಾಂಪೌಂಡ್ ಕುಸಿದಿರುವುದು.

ಕಾಡು ಹಂದಿ ದಾಳಿಗೆ ವ್ಯಕ್ತಿ ದುರ್ಮರಣ

ಮಿಮ್ಸ್ ಶವಾಗಾರದ ಎದುರು ಕುಟುಂಬಸ್ಥರ ಪ್ರತಿಭಟನೆ

ಮಂಡ್ಯ, ಮೇ 17– ಕಾಡು ಹಂದಿ ದಾಳಿಗೆ ವ್ಯಕ್ತಿಯೊಬ್ಬ ಸಾವನ್ನಪ್ಪಿದ್ದರಿಂದ ರೊಚ್ಚಿಗೆದ್ದ ಗ್ರಾಮಸ್ಥರು ಮತ್ತು ಮೃತನ ಕುಟುಂಬದವರು ಆಸ್ಪತ್ರೆ ಮುಂದೆ ಪ್ರತಿಭಟನೆ ನಡೆಸಿದರು.



ಪ್ರತಿಭಟನಾಕಾರರ ಜೊತೆ ಮಾತುಕತೆ ನಡೆಸುತ್ತಿರುವ ಶಾಸಕ ರವಿಕುಮಾರ್ ಗಣಿಗ

ಚಿಂದಗಿರಿದೊಡ್ಡಿ ಗ್ರಾಮದ ಪುಟ್ಟಸ್ವಾಮಿ ಎಂಬುವರ ಮಗ ಶಿವ (48) ಸಾವನಪ್ಪಿದ ದುರ್ದೈವಿ. ಗುರುವಾರ ಸಂಜೆ ಶಿವ ಚಿಕ್ಕಯಗಟಿ ಬಳಿ ಮಂಡ್ಯ–ನಾಗಮಂಗಲ ರಸ್ತೆಯಲ್ಲಿ ಬೈಕಿನಲ್ಲಿ ಬರುತ್ತಿದ್ದಾಗ ಏಕಾಏಕಿ ಕಾಡು ಹಂದಿ ದಾಳಿ ಮಾಡಿ, ಎಡ ತೊಡೆ ಮತ್ತು ಮರ್ಮಾಂಗಕ್ಕೆ ಗುದ್ದಿದ ಪರಿಣಾಮ ತೀವ್ರ ರಕ್ತಸ್ರಾವ ಗೊಂಡು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾನೆ.

ನಾಗಮಂಗಲ ಗ್ರಾಮಾಂತರ ಠಾಣಾ ಪೊಲೀಸರು ಸ್ಥಳಕ್ಕೆ ಆಗಮಿಸಿ ಮೃತದೇಹವನ್ನು ಮಿಮ್ಸ್ ಆಸ್ಪತ್ರೆಗೆ ರವಾನಿಸಿದರು. ಮರಣೋತ್ತರ ಪರೀಕ್ಷೆ ನಡೆಯುವ ಮಿಮ್ಸ್ ಶವಾಗಾರದ ಬಳಿ ಶುಕ್ರವಾರ ಬೆಳಗ್ಗೆ ಜಮಾಯಿಸಿದ ಮೃತನ ಸಂಬಂಧಿಕರು ಹಾಗೂ ಚಿಂದಗಿರಿದೊಡ್ಡಿ ಗ್ರಾಮಸ್ಥರು ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದರು.

ಸುದ್ದಿ ತಿಳಿದ ಶಾಸಕ ರವಿಕುಮಾರ್ ಗಣಿಗ ಸ್ಥಳಕ್ಕೆ ಬರುವುದಾಗಿ ಭರವಸೆ ನೀಡಿದ ಹಿನ್ನೆಲೆಯಲ್ಲಿ ಮರಣೋತ್ತರ ಪರೀಕ್ಷೆಗೆ ಅವಕಾಶ ಮಾಡಿಕೊಟ್ಟರು. ಮಧ್ಯಾಹ್ನದ ವೇಳೆಗೆ ಶಾಸಕರು ಆಗಮಿಸಿದಾಗ ಅಲೆಮಾರಿ ಬುಡಕಟ್ಟು ಮಹಾಸಭಾ ಮತ್ತು ಮಂಡ್ಯ ಜಿಲ್ಲಾ ಕುಳುವ ಸಮಾಜದ ಆಶ್ರಯದಲ್ಲಿ ಕೆಲಕಾಲ ಪ್ರತಿಭಟನೆ ನಡೆಸಿದ ಸಂಬಂಧಿಕರು ಸೂಕ್ತ ಪರಿಹಾರ ದೊರಕಿಸಿ ಕೊಡುವಂತೆ ಒತ್ತಾಯಿಸಿದರು. ಅಲೆಮಾರಿ ಸಮುದಾಯಕ್ಕೆ ಸೇರಿದ ಮೃತ ವ್ಯಕ್ತಿಯ ಕುಟುಂಬಕ್ಕೆ ಆಸ್ತಿ ಇಲ್ಲ. ಕೂಲಿ ಮಾಡಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದರು. ಆದರೆ ದುರಂತದಲ್ಲಿ ಮನೆ ನಿರ್ವಹಣೆ ಮಾಡುತ್ತಿದ್ದ ಶಿವು ಸಾವನಪ್ಪಿರುವುದರಿಂದ ಕುಟುಂಬ ಬೀದಿಗೆ ಬಿದ್ದಂತಾಗಿದೆ. ಅವರ ಬದುಕು ಮೂರಾಬಟ್ಟೆಯಾಗಿದೆ ಎಂದು ಪ್ರತಿಭಟನಾಕಾರರು ಹೇಳಿದರು.

ಮೃತನ ಕುಟುಂಬಕ್ಕೆ 25 ಲಕ್ಷ ಪರಿಹಾರ ನೀಡಬೇಕು. ಕುಟುಂಬದ ಜೀವನ ಭದ್ರತೆಗಾಗಿ ಮೃತರ ಪುತ್ರ ಶ್ರೀನಿವಾಸ್‌ಗೆ ಖಾಯಂ ಸರ್ಕಾರಿ ಉದ್ಯೋಗ ನೀಡಬೇಕು. ಮೃತನ ಪತ್ನಿ ಅನಾರೋಗ್ಯ ಪೀಡಿತರಾಗಿದ್ದು ಇವರಿಗೆ ಮಾಸಿಕ ಪಿಂಚಣಿ ನೀಡಬೇಕು ಎಂದು ಒತ್ತಾಯಿಸಿದರು.

ಮೃತರ ಸಂಬಂಧಿಕರ ಬೇಡಿಕೆಗೆ ಸ್ಪಂದಿಸಿದ ಶಾಸಕ ರವಿಕುಮಾರ್ ಗಣಿಗ ಅರಣ್ಯ ಇಲಾಖೆ ವತಿಯಿಂದ 15 ಲಕ್ಷ ಪರಿಹಾರ ನೀಡಲಾಗುವುದು. ಪರಿಹಾರದ ಹಣವನ್ನು ಮೂರು ನಾಲ್ಕು ದಿನಗಳ ನಂತರ ನೀಡಲಾಗುವುದು, ಖಾಯಂ ಸರ್ಕಾರಿ ಉದ್ಯೋಗ ನೀಡಲು ಅವಕಾಶ ಇಲ್ಲದ ಪರಿಣಾಮ, ಯಾವುದಾದರೂ ಸರ್ಕಾರಿ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಉದ್ಯೋಗ ದೊರಕಿಸಿ ಕೊಡುವ ಭರವಸೆ ನೀಡಿದರು. ಅಷ್ಟೇ ಅಲ್ಲದೆ ಮೃತನ ಕುಟುಂಬಕ್ಕೆ ವೈಯಕ್ತಿಕವಾಗಿ 50 ಸಾವಿರ ಪರಿಹಾರ ನೀಡಿದರು. ಇದೇ ವೇಳೆ ಸಹಾಯಕ ಅರಣ್ಯ ಅಧಿಕಾರಿ ಶಿವರಾಮು ಹಾಜರಿದ್ದರು.

ಅಖಿಲ ಕರ್ನಾಟಕ ಕುಳುವ ಮಹಾಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಿರಣ್‌ಕುಮಾರ್ ಕೊತ್ತಗೆರೆ, ಗೌರವಾಧ್ಯಕ್ಷ ರಾಮಶೆಟ್ಟಿ ಹನಕೆರೆ, ರಾಜ್ಯ ಉಪಾಧ್ಯಕ್ಷ ವೆಂಕಟೇಶ್ ರಾಮನಗರ, ಕೃಷ್ಣಕುಮಾರ್ ಗಣಂಗೂರು, ರವಿ ಕೊಡಗಹಳ್ಳಿ, ಟೆಂಪೋ ರಾಮಕೃಷ್ಣ, ಸಂದೀಪ್ ಭಾಗವಹಿಸಿದ್ದರು.

ಮಂಡ್ಯದಲ್ಲಿ 180 ಬಾಲ್ಯ ವಿವಾಹ ಪ್ರಕರಣ ಪತ್ತೆ

ಜಿಲ್ಲೆಯಲ್ಲಿ ಬಾಲ್ಯ ವಿವಾಹ ತಡೆಯಲು ಜಾಗೃತಿ ಕಾರ್ಯಕ್ರಮ ಆಯೋಜಿಸಿ

ಮಂಡ್ಯ, ಮೇ 17– ಬಾಲ್ಯ ವಿವಾಹ ಸಮಾಜದ ಪಿಡುಗಾಗಿದ್ದು, ಇದನ್ನು ತಡೆಗಟ್ಟಲು ಹೆಚ್ಚು ಜಾಗೃತಿ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ಆಯೋಜಿಸುವಂತೆ ಸೂಚಿಸಿದ ಜಿಲ್ಲಾಧಿಕಾರಿ ಡಾ.ಕುಮಾರ ಜಿಲ್ಲೆಯಲ್ಲಿ 180 ಬಾಲ್ಯವಿವಾಹ ಪ್ರಕರಣಗಳು ವರದಿಯಾಗಿದ್ದು, 105 ಪ್ರಕರಣಗಳನ್ನು ತಡೆಯಲಾಗಿದೆ ಎಂದರು.



ಅಧಿಕಾರಿಗಳೊಂದಿಗೆ ಸಭೆ ನಡೆಸುತ್ತಿರುವ ಜಿಲ್ಲಾಧಿಕಾರಿ ಡಾ.ಕುಮಾರ್

ಇಂದು ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಮಿಷನ್ ವಾತ್ಸಲ್ಯ ಮಾರ್ಗ ಸೂಚಿಯನ್ವಯ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ, ಮಕ್ಕಳ ಸಹಾಯವಾಣಿ ಹಾಗೂ ಮಕ್ಕಳ ಕಲ್ಯಾಣ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ 2023–24ನೇ ಸಾಲಿನಲ್ಲಿ 180 ಪ್ರಕರಣಗಳು ವರದಿಯಾಗಿದ್ದು,105 ಬಾಲ್ಯ ವಿವಾಹವನ್ನು ತಡೆಯಲಾಗಿದೆ. 75 ಬಾಲ್ಯ ವಿವಾಹ ಪ್ರಕರಣಗಳ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ. ಮಂಡ್ಯ –42, ಮದ್ದೂರು–15, ಮಳವಳ್ಳಿ–20, ಶ್ರೀರಂಗಪಟ್ಟಣ–26, ಪಾಂಡವಪುರ–25, ನಾಗಮಂಗಲ–13, ಕೆಆರ್.ಪೇಟೆ –39 ಬಾಲ್ಯ ವಿವಾಹ ಪ್ರಕರಣಗಳು ವರದಿಯಾಗಿದ್ದು, ಅವುಗಳಲ್ಲಿ ಒಟ್ಟು 105 ಬಾಲ್ಯ ವಿವಾಹವನ್ನು ತಡೆಯಲಾಗಿದ್ದು, 75 ಬಾಲ್ಯ ವಿವಾಹ ಪ್ರಕರಣಗಳ ಮೇಲೆ ಎಫ್‌ಐಆರ್ ದಾಖಲಾಗಿವೆ ಎಂದರು.

ಬಾಲ್ಯ ವಿವಾಹವು ಒಂದು ಸಾಮಾಜಿಕ ಪಿಡುಗಾಗಿದೆ. ಸ್ಥಳೀಯ ಮಟ್ಟದಲ್ಲಿ ಒಂದು ಸಮಿತಿ ರಚಿಸಿ ಬಾಲ್ಯ ವಿವಾಹ ನಡೆಯಲು ಕಾರಣಗಳೇನು ಎಂಬ ಸಮೀಕ್ಷೆ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ ಎಂದರು.

ಬಾಲ್ಯ ವಿವಾಹ ನಡೆದ ಮೇಲೆ ಕ್ರಮ ಕೈಗೊಳ್ಳುವುದಕ್ಕಿಂತ, ಬಾಲ್ಯ ವಿವಾಹ ನಡೆಯದಂತೆ ಜನರಲ್ಲಿ ಅರಿವು ಮೂಡಿಸುವುದು ಮುಖ್ಯವಾಗಿದೆ. ಬಾಲ್ಯ ವಿವಾಹಗಳು ಜರುಗುವ ಹಾಗೂ ಪದೇ ಪದೇ ಮರುಕಳಿಸುವಂತಹ ಸ್ಥಳಗಳಿಗೆ ಭೇಟಿ ನೀಡಿ ಜಾಗೃತಿ ಮೂಡಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು.

ಬಾಲನ್ಯಾಯ ಕಾಯ್ದೆಯಡಿ ಒಟ್ಟು 20 ಮಕ್ಕಳ ಪಾಲನಾ ಸಂಸ್ಥೆಗಳು ನೋಂದಣಿಯಾಗಿವೆ. 02 ಮಕ್ಕಳ ಪಾಲನಾ ಸಂಸ್ಥೆಗಳು ಬಾಲ ನ್ಯಾಯ ಕಾಯ್ದೆಯಡಿ ನವೀಕರಣಗೊಂಡಿದ್ದು, ನವೀಕರಣಕ್ಕೆ ಪ್ರಸ್ತಾವನೆ ಸಲ್ಲಿಸಲು ಉಳಿದ 18 ಸಂಸ್ಥೆಗಳು ಬಾಕಿ ಇವೆ ಎಂದರು.

ಜಿಲ್ಲೆಯಲ್ಲಿ 2023–24ನೇ ಸಾಲಿನ ಪ್ರಾಯೋಜಕತ್ವ ಯೋಜನೆಯಡಿಯಲ್ಲಿ ಒಟ್ಟು 452 ಫಲಾನುಭವಿಗಳು ಸಹಾಯಧನ ಪಡೆದಿದ್ದು, 2024–25ನೇ ಸಾಲಿನಲ್ಲಿ ಒಟ್ಟು 167 ಅರ್ಜಿಗಳು ಸ್ವೀಕೃತವಾಗಿವೆ.

ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಸಿದ್ದಲಿಂಗೇಶ್, ಪೊಲೀಸ್ ಇನ್ಸ್‌ಪೆಕ್ಟರ್ ಬಿ.ದೇವರಾಜು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಎಸ್.ರಾಜಮೂರ್ತಿ, ನಿರೂಪಣಾಧಿಕಾರಿ ಧರಣಿಕುಮಾರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಶ್ಮಿ, ಕೌಶಲಾಭಿವೃದ್ಧಿ ಇಲಾಖೆಯ ಅಧಿಕಾರಿ ನಾಗಾನಂದ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮುನಿದ ವರುಣನ ಕೃಪೆಗಾಗಿ ಕತ್ತೆಗಳಿಗೆ ಮದುವೆ

ನಾಗಮಂಗಲ: ಮುಂಗಾರು ಪ್ರಾರಂಭವಾಗಿ ಒಂದು ತಿಂಗಳು ಕಳೆದರೂ ತಾಲೂಕಿನ ಸುತ್ತ ಮುತ್ತಲಿನ ಹಲವಾರು ಪ್ರದೇಶಗಳಲ್ಲಿ ಮಳೆಯಾಗುತ್ತಿದ್ದರೂ ಪಟ್ಟಣದ ಸುತ್ತಮುತ್ತ 5 ಕಿಮೀ ವ್ಯಾಪ್ತಿಯಲ್ಲಿ ಮಳೆಯಾಗದೇ ಕೃಷಿಗೆ ತೊಂದರೆಯಾಗಿರುವುದರಿಂದ ಮುನಿದ ವರುಣನನ್ನು ಒಲಿಸಿ ಮಳೆಯಾಗಲೆಂದು ಇಂದು ಗ್ರಾಮ ದೇವತೆ ಬಡಗೊಡಮ್ಮ ದೇವತೆಗೆ ಲಘುನ್ಯಾಸ ಪೂರ್ವಕ ಅಭಿಷೇಕವನ್ನು ಮಾಡಿ ವಿಶೇಷವಾಗಿ ಕತ್ತೆಗಳಿಗೆ ಮದುವೆ ಮಾಡಲಾಯಿತು.

ಮೇಗಲ ಕೇರಿಯ ಬಡಗೊಡಮ್ಮ ದೇವಿ ಸಮಿತಿ ಮತ್ತು ವಿಪ್ರ ಸಮಾಜದವರು ಸೇರಿ ಇಂದು ದೇವಳದಲ್ಲಿ ಪರ್ಜನ್ಯ ಜಪದೊಂದಿಗೆ ವಿಷ್ಣು ಸಹಸ್ರನಾಮ, ಶ್ರೀ ಸೂಕ್ತ ಮತ್ತು ಪುರುಸೂಕ್ತ ವನ್ನು ದೇವಿಯ ಮುಂದೆ ಪಠಿಸಲಾಯಿತು. ನಂತರ ಶುಭ ಲಗ್ನದಲ್ಲಿ ಶಾಸ್ತ್ರೋಕ್ತವಾಗಿ ಧಾರಾ ಮಹೂರ್ತದಲ್ಲಿ ಎರಡು ಕತ್ತೆಗಳಿಗೆ ಲಗ್ನ ನೆರವೇರಿಸಲಾಯಿತು. ನಂತರ ಎರಡು ಕತ್ತೆಗಳಿಗೂ ಹೂವುಗಳಿಂದ ಅಲಂಕರಿಸಿ ತಮಟೆ ವಾದ್ಯದೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಹುಯ್ಯೋ..ಹುಯ್ಯೋ ಮಳೆರಾಯ ಎಂದು ಜಪಿಸುತ್ತಾ ಮೆರವಣಿಗೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ವೇದ ವಿದ್ವಾಂಸರಾದ ಶ್ರೀ ಕಂಠಶಾಸ್ತ್ರಿ, ಸುಬ್ಬರಾಮು, ಮುರಳಿ ಹೊಯ್ಸಳ, ಸಮಿತಿಯ ರಂಗನಾಥ್, ರಾಮಕೃಷ್ಣ, ಸುರೇಶ್, ಕಿರಣ್, ಕುಮಾರ್ ಮುಂತಾದವರು ಭಾಗವಹಿಸಿದ್ದರು



ಹೆಚ್ಚುವರಿ ಬಸ್‌ಗೆ ಆಗ್ರಹಿಸಿ ಮನವಿ

ಚಾಮರಾಜನಗರ, ಮೇ 17–ವಿದ್ಯಾರ್ಥಿಗಳು ಹಾಗೂ ಪ್ರಯಾಣಿಕರ ಅನುಕೂಲಕ್ಕಾಗಿ ಮೈಸೂರಿನಿಂದ ಚಾಮರಾಜನಗರ ಹಾಗೂ ಚಾ.ನಗರದಿಂದ ಮೈಸೂರಿಗೆ ಹೆಚ್ಚುವರಿ ಬಸ್ ಸೇವೆ ಒದಗಿಸುವಂತೆ ಒತ್ತಾಯಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಕೆಎಸ್‌ಆರ್‌ಟಿಸಿ ಸೂಪರಿಡೆಂಟೆಂಟ್ ವಿನಾಯಕ ಅವರಿಗೆ ಮನವಿ ಸಲ್ಲಿಸಿದರು.



ಹೆಚ್ಚುವರಿ ಬಸ್ ಸೇವೆಗೆ ಒತ್ತಾಯಿಸಿ ಕರ್ನಾಟಕ ಸೇನಾ ಪಡೆಯ ಕಾರ್ಯಕರ್ತರು ಕೆಎಸ್‌ಆರ್‌ಟಿಸಿ ಸೂಪರಿಡೆಂಟೆಂಟ್ ವಿನಾಯಕ ಅವರಿಗೆ ಮನವಿ ಸಲ್ಲಿಸಿದರು.

ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ರಾಜ್ಯ ಸರ್ಕಾರ ಮಹಿಳೆಯರಿಗೆ ಉಚಿತ ಬಸ್ ಸೇವೆ ನೀಡಿರುವುದು ಸ್ವಾಗತಾರ್ಹ. ಬೆಳಗ್ಗೆ ಹಾಗೂ ಸಂಜೆ ಬಸ್‌ಗಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಇದರಿಂದ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತಿದೆ ಎಂದರು.

ಬಹಳ ದಿನಗಳಿಂದಲೂ ಬಸ್‌ಗಳ ಸಮಸ್ಯೆ ಇದ್ದು, ಮೈಸೂರಿನಿಂದ ಚಾಮರಾಜನಗರಕ್ಕೆ ಹಾಗೂ ಚಾಮರಾಜನಗರದಿಂದ ಮೈಸೂರಿಗೆ ಬೆಳಗ್ಗೆ ಹಾಗೂ ಸಂಜೆ ಹೆಚ್ಚುವರಿ ಬಸ್‌ಗಳ ಸೇವೆ ಒದಗಿಸುವ ಮೂಲಕ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿದರು.

ಈ ವೇಳೆ ಚಾ.ರಂ.ಕುಮಾರ್, ಆಟೋ ನಾಗೇಶ್, ಗು.ಪುರುಷೋತ್ತಮ್, ಪ್ಯಾದಹುಂಡಿ ರಾಜು, ನಂಜುಂಡ ಶೆಟ್ಟಿ, ಸಾಗರ್ ರಾವತ್, ಬದನಗುಪ್ಪೆ ಮಹೇಶ್, ಸುರೇಶ್, ಮೂಡ್ಲುಪುರ ಪ್ರಕಾಶ್ ಮತ್ತಿತರರಿದ್ದರು.

ಚಾಮರಾಜನಗರಕ್ಕೆ ವಾಲ್ಮೀಕಿಶ್ರೀ ಭೇಟಿ

ಚಾಮರಾಜನಗರ, ಮೇ 17– ಶುಕ್ರವಾರ ನಗರಕ್ಕೆ ಭೇಟಿ ನೀಡಿದ ದಾವಣಗೆರೆ ಜಿಲ್ಲೆ ಹರಿಹರ ತಾಲೂಕಿನ ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಅವರನ್ನು ಸಮುದಾಯದ ಮುಖಂಡರು ಸನ್ಮಾನಿಸಿದರು.



ಚಾಮರಾಜನಗರಕ್ಕೆ ಭೇಟಿ ನೀಡಿದ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಸ್ವಾಮೀಜಿ ಅವರನ್ನು ಸಮುದಾಯದ ಮುಖಂಡರು ಸನ್ಮಾನಿಸಿದರು.

ನಗರದ ಬಸವೇಶ್ವರ ಬಡಾವಣೆಯ ಪು.ಶ್ರೀನಿವಾಸ ನಾಯಕರ ನಿವಾಸಕ್ಕೆ ಭೇಟಿ ನೀಡಿದ ಶ್ರೀಗಳಿಗೆ ಸಮುದಾಯದ ಮುಖಂಡರು ಶಾಲು ಹೊದಿಸಿ, ಹಾರ ಹಾಕಿ ಫಲ ತಾಂಬೂಲ ನೀಡಿ ಗೌರವಿಸಿದರು.

ಈ ಸಂದರ್ಭ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನಾಯಕರ ಸಂಘದ ಅಧ್ಯಕ್ಷ ಎಂ.ರಾಮಚಂದ್ರ, ಜಿಪಂ ಮಾಜಿ ಸದಸ್ಯರಾದ ಎಸ್.ಸೋಮನಾಯಕ, ರಮೇಶ್, ತಾಪಂ ಮಾಜಿ ಅಧ್ಯಕ್ಷ ಎಚ್.ವಿ.ಚಂದ್ರು, ಮುಖಂಡರಾದ ಕಪಿನಿ ನಾಯಕ, ಕಂಡಕ್ಟರ್ ಸೋಮನಾಯಕ, ಆರ್.ಸುಂದರ್, ಸುರೇಶ್ ನಾಗ್, ವೆಂಕಟರಾಮು ನಾಯಕ, ಬಂಗಾರನಾಯಕ, ನಟರಾಜು, ನಾಗೇಂದ್ರ, ಮಸಗಾಪುರ ಸ್ವಾಮಿ, ಶಿವು ವಿರಾಟ್, ತಾಲೂಕಿನ ವಿವಿಧ ಗ್ರಾಮಗಳ ಸಮುದಾಯದ ಮುಖಂಡರು ಹಾಜರಿದ್ದರು.



ಗುಂಡ್ಲುಪೇಟೆ ತಾಲೂಕಿನ ಬೇಗೂರಿನಲ್ಲಿ ಶುಕ್ರವಾರ ಸಂಜೆ ಸುರಿದ ಭಾರಿ ಮಳೆಗೆ ಹೆದ್ದಾರಿಯ ಬಿಎಂಪಿ ಪೆಟ್ರೋಲ್ ಬಂಕ್ ಬಳಿಯ ಬೇಕರಿಯೊಂದಕ್ಕೆ ನೀರು ನುಗ್ಗಿರುವುದು.

16 ವರ್ಷದ ಬಳಿಕ ಸಿಕ್ಕಿಬಿದ್ದ ಕಳ್ಳ



ಕೊಳ್ಳೇಗಾಲ: ಹದಿನಾರು ವರ್ಷಗಳ ಹಿಂದೆ ಹಸುಗಳನ್ನು ಕಳ್ಳತನ ಮಾಡಿ ತಲೆ ಮರೆಸಿಕೊಂಡಿದ್ದ ಕಳ್ಳನನ್ನು ಕೊಳ್ಳೇಗಾಲ ಉಪವಿಭಾಗ ಅಪರಾಧ ಪತ್ತೆ ದಳದ ಪೊಲೀಸರು ಬಂಧಿಸಿದ್ದಾರೆ.

ಕೆ.ಆರ್.ನಗರದ ಇಸ್ಮಾಯಿಲ್ ಷರೀಫ್ ಅಲಿಯಾಸ್ ಮುನ್ನ(56) ಬಂಧಿತ ಆರೋಪಿ. ಈತ 2008ರಲ್ಲಿ ಕೊಳ್ಳೇಗಾಲ ಸುತ್ತಮುತ್ತ ಹಸುಗಳನ್ನು ಕಳ್ಳತನ ಮಾಡಿ ಟೆಂಪೋದಲ್ಲಿ ಸಾಗಿಸಿ, ಬೇರೆಡೆ ಮಾರಾಟ ಮಾಡಿದ್ದ. ಈ ಸಂಬಂಧ ಈತನ ವಿರುದ್ಧ ಕೊಳ್ಳೇಗಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಅಂದಿನಿಂದ ಈತ ತಲೆಮರೆಸಿಕೊಂಡು ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಿದ್ದ. ಕೊಳ್ಳೇಗಾಲ ಉಪವಿಭಾಗ ಅಪರಾಧ ಪತ್ತೆ ದಳದ ಪೊಲೀಸರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಧರ್ಮೇಂದ್ರ ನೇತೃತ್ವದಲ್ಲಿ ಎಎಸ್‌ಐ ತಖೀವುಲ್ಲಾ, ಮುಖ್ಯ ಪೇದೆಗಳಾದ ವೆಂಕಟೇಶ್, ಕಿಶೋರ್, ಬಿಳಿಗೌಡ, ಶಿವಕುಮಾರ್ ಕಾರ್ಯಾಚರಣೆ ನಡೆಸಿ, ಕೆ.ಆರ್.ನಗರದ ಮನೆಯೊಂದರಲ್ಲಿ ಅಡಗಿದ್ದ ಈತನನ್ನು ಬಂಧಿಸಿದ್ದಾರೆ.

ಜಾನಪದದಿಂದ ಮಕ್ಕಳ ಮಾನಸಿಕ ಬೆಳವಣಿಗೆ

ಚಾ.ನಗರ: ಮಕ್ಕಳಿಗೆ ಜಾನಪದ ಸಂಸ್ಕೃತಿಯನ್ನು ಕಥೆ, ನಾಟಕ, ಸಾಹಿತ್ಯ ರೂಪದಲ್ಲಿ ತಿಳಿಸಿದರೆ ಅವರ ಮಾನಸಿಕ ಬೆಳವಣಿಗೆಯಾಗುತ್ತದೆ ಎಂದು ಜಾನಪರ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ. ಎಂ.ಮಹೇಶ್ ಚಿಕ್ಕಲ್ಲೂರು ತಿಳಿಸಿದರು.



ಬೇಸಿಗೆ ಶಿಬಿರದಲ್ಲಿ ಮಕ್ಕಳು ಕುಬೇರನ ಔತಣ ನಾಟಕ ಪ್ರದರ್ಶಿಸಿದರು.

ನಗರದ ಭುವನೇಶ್ವರಿ ವೃತ್ತದ ಸಂತ ಜೋಸೆಫರ ಶಾಲೆಯಲ್ಲಿ ಆತ್ಮೀಯ ರಂಗ ಪ್ರಯೋಗಾಲಯ ಟ್ರಸ್ಟ್ ಆಯೋಜಿಸಿದ್ದ ಆಡು ಬಾ ಕಂದ ಬೇಸಿಗೆ ಶಿಬಿರ ಸಮಾರೋಪದಲ್ಲಿ ಮಾತನಾಡಿದ ಅವರು, ಮಕ್ಕಳಿಗೆ ಜಾನಪದ ಗೀತೆ, ಚಿತ್ರಕಲೆ, ಅಭಿನಯ, ನಾಟಕಗಳನ್ನು ಕಲಿಸಿದರೆ ಅವರಲ್ಲಿ ಭೌತಿಕ ಬೆಳವಣಿಗೆ, ಹಿರಿಯರಿಗೆ ಗೌರವ ನೀಡುವುದು ಹಾಗೂ ಜೀವನದ ಮೌಲ್ಯಗಳು ಅರ್ಥವಾಗುತ್ತದೆ ಎಂದರು.

ನಿವೃತ್ತ ಸರ್ಕಾರಿ ನೌಕರ ಪಿ.ಮನೋರಾಜ್, ಸಂತ ಜೋಸೆಫರ ಮಹಿಳಾ ಅಭಿವೃದ್ಧಿ ಕೇಂದ್ರದ ಆಡಳಿತಾಧಿಕಾರಿ ಸಿಸ್ಟರ್ ಮರಿಯಾ ಜೋಸ್, ಆತ್ಮೀಯ ರಂಗ ಪ್ರಯೋಗಾಲಯ ಟ್ರಸ್ಟ್ ಅಧ್ಯಕ್ಷ ಶಿವು ಜನ್ನೂರು ಹೊಸೂರು, ಶಿಬಿರದ ವ್ಯವಸ್ಥಾಪಕ ಶಿವಶಂಕರ ಎನ್.ಚಟ್ಟು, ಕಾರ್ಯದರ್ಶಿ ಜೇಮ್ಸ್ ದೇಶವಳ್ಳಿ, ನವೀನ್ ಉಡಿಗಾಲ, ಮಧುಸೂದನ್ ಹೊಸೂರು, ನಂದಿನಿ ರವಿಕುಮಾರ್, ಗೌರಿ ರಾಮ ಕೃಷ್ಣ, ಮುತ್ತುರಾಜ್, ಮಲ್ಲೇಶ್ ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟ್‌ಗಳು ಮಾರಾಟಕ್ಕಿದೆ
ಮುಡಾ ಅಪ್ರೂಡ್ ಲೇಔಟ್
1) ನಾಗಾರ್ಜುನ ಲೇಔಟ್
2) ಶ್ರೇಯಸ್ ಮೆಡೋಸ್
3) ಸಾತಗಳ್ಳಿ 2ನೇ ಹಂತ
30x40, 30x50, 40x60
(East & West)
IMMEDIATE REGISTRATION
Contact: 9980657556

Expoglow Global Consultants Pvt Ltd
URGENT HIRING
Manager & Telecalling Executive (Female/Male)
Freshers & Experienced. Location: Mysuru
Email Id: hr@expoglowglobalconsultants.com
Contact: 9560105912

ಹೊಸ ಮನೆ ಮಾರಾಟಕ್ಕಿದೆ
20x30 N/F 2 BHK
ಸೋಮೇಶ್ವರ ಲೇಔಟ್
(Muda Approved)
ನಿಂಗದೇವರ ಕೊಪ್ಪಲು, ಸಾಯಿ ಗಾರ್ಮೆಂಟ್ಸ್ ಹತ್ತಿರ, ಮೈಸೂರು
9902634441

ಮನೆ ಬಾಡಿಗೆಗೆ
#876/1, ಮೊದಲನೆ ಮಹಡಿ, 8ನೇ ಮುಖ್ಯರಸ್ತೆ, 13ನೇ ಅಡ್ಡ ರಸ್ತೆ, ಸರಸ್ವತಿಪುರಂ, ಮೈಸೂರು–09. ಸಂಪರ್ಕಿಸಿ:
Mob: 8904547516

EAST FACE
MUDA APPROVED
40x60
SITE FOR SALE
Nityananda Sagara, Huilalu, Mysore
8217851695

ಶ್ರೀ ಗೌರಿಶಂಕರ ಟ್ರಾವೆಲ್ಸ್
5-6-2024 (11 ದಿನ): ಅಯೋಧ್ಯೆ, ನೇಪಾಳ್, ಕಠ್ಮಂಡು, ಪೋಕ್ರ, ಮುಕ್ತಿನಾಥ್, ಲುಂಬಿನಿ, ಮನೋಕಾಮನ, ಕಾಶಿ, ಇತ್ಯಾದಿ.
24-7-2024 (4 ದಿನ): ಭೀಮಾ ಶಂಕರ, ಶಿರಡಿ, ಘೃಷ್ಣೇಶ್ವರ, ಎಲ್ಲೋರ, ತ್ರ್ಯಯಂಬಕೇಶ್ವರ ಇತ್ಯಾದಿ.
21-8-24 (3 ದಿನ): ಇಂದೋರ್, ಉಜ್ಜಯಿನಿ, ಓಂಕಾರೇಶ್ವರ
(ವಿಮಾನ, ಬಸ್, ಊಟ, ರೂಂ)
Mob: 9620002114

ಪ್ಯಾಂಟ್–ಮೇಕರ್ ಬೇಕಾಗಿದ್ದಾರೆ.
(ಗಂಡಸರು ಮಾತ್ರ)
ಶ್ರೀದೇವಿ ಗಾರ್ಮೆಂಟ್ಸ್
ಹನುಮಂತು ಹೋಟೆಲ್ ಎದುರು
ಮಂಡಿಮಾರ್ಕೆಟ್ ಹತ್ತಿರ, ಮೈಸೂರು
7899284230

Shree Lakshmi Constructions & Consultants
Vijayanagar 4th Stage, 2nd Phase, Mysuru-17
Prop: ಮಾಸ ಪ್ರವೀಣ್
ನಮ್ಮಲ್ಲಿ ಮೂಡ ನಕ್ಷೆ ಮತ್ತು ಕಾರ್ಪೋರೇಷನ್ (ಆನ್‌ಲೈನ್) ನಕ್ಷೆಯನ್ನು ರಿಯಾಯಿತಿ ದರದಲ್ಲಿ ಮಾಡಿಕೊಡಲಾಗುವುದು.
8971960152, 7892769176

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ತಕ್ಷಣ ಬೇಕಾಗಿದ್ದಾರೆ
Vodaphone IDEA Comapany
- Sales Executive
- Flexible Timings
- Any Qualification
- Attractive Salary
9886018660
9886018667

WANTED
Sales Staff: Male / female. Sales Executives: 5 ; Accountant: 1 ; Sales Manager: 1 ; Helper: 1.
Place: Cauvery TVS, Chamaraja Double Road, Mysore.
9480418919, 9108699110

ADMISSION OPEN
DISTANCE & ONLINE UG & PG UNIVERSITY COURSES-
BA, BCom, BSc, BCA, MA, MCom, MCA, MBA & many more
For Details Contact:
YUVA INFOTECH MYSORE
Call: 9986492001

ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ (ರಿ.)
ನಂ.122/ಎ, ಹೊಸ ನ್ಯಾಯಾಲಯದ ಎದುರು, ಜಯನಗರ, ಮೈಸೂರು–570014
13ನೇ ಮತ್ತು 2024ನೇ ಸಾಲಿನ
ಒಕ್ಕಲಿಗ ವಧು–ವರರ ಸಮಾವೇಶ
ದಿ:19–05–2024, ಸಮಯ:ಬೆಳಗ್ಗೆ 9.30 ಗಂಟೆಗೆ
ಸ್ಥಳ: ನೇಗಿಲಯೋಗಿ ಮರುಳೇಶ್ವರ ಸೇವಾಭವನ, ಹೊಸ ನ್ಯಾಯಾಲಯದ ಎದುರು, ಜಯನಗರ/ಕೆ.ಜಿ.ಕೊಪ್ಪಲ್, ಮೈಸೂರು–14 ನೊಂದಣಿ & ಮಾಹಿತಿಗಾಗಿ
9900629393, 9483453005

ಸೈಟುಗಳು ಮಾರಾಟಕ್ಕಿವೆ
30x40, 30x50, 40x60
ಡಿಟಿಸಿಪಿ ಹಾಗೂ ರೇರಾ ಅನುಮೋದನೆ ನೋಂದಣಿಗೆ ಸಿದ್ಧವಾಗಿದೆ.
ಬಡಾವಣೆಯು ಗುಂಡ್ಲುಪೇಟೆ ಪ್ರಥಮ ದರ್ಜೆ ಪದವಿ ಪೂರ್ವ ಕಾಲೇಜಿನ ಹತ್ತಿರ, ಮೈಸೂರು ರಸ್ತೆ,
9606443551

ಸಪ್ತಪದಿ ಮ್ಯಾಟ್ರಿಮೋನಿ (ರಿ.)
BE/MBA/M.Tech/MCA /MBBS/MD/ MS & Any degree ಯ India /USA/ UK/ GERMANY / CANADA/AUSTRALIA/ BANGALORE/MYSOREನ ವಧು–ವರರ ಮಾಹಿತಿ/ನೋಂದಣಿಗೆ ಸಂಪರ್ಕಿಸಿ ಕಂಪ್ಯೂಟರ್ ತಿಳಿದಿರುವ ಮಹಿಳೆ ಕೆಲಸಕ್ಕೆ ಬೇಕಾಗಿದ್ದಾರೆ.
9663199511

ಬೇಕಾಗಿದ್ದಾರೆ
ಮೈಸೂರು ಹಾಗೂ ಮಂಡ್ಯದಲ್ಲಿರುವ ಸಾಯಿ ಆಶ್ರಮಕ್ಕೆ SSLC / PUC ಓದಿರುವ ಹುಡುಗಿಯರು, ಮಹಿಳೆಯರು ರಿಸೆಪ್ಷನಿಷ್ಟ್ ನಿಷ್ಟ, ಟೆಲಿಕಾಲರ್, ಕೌನ್ಸಿಲರ್ ಕೆಲಸಕ್ಕೆ ಬೇಕಾಗಿದ್ದಾರೆ. ಊಟ ವಸತಿಯೊಂದಿಗೆ ಉತ್ತಮ ಸಂಬಳವಿರುತ್ತದೆ. ವಯಸ್ಸು 18 ರಿಂದ 45
6366631403, 6366631307
(ಆಶ್ರಮದಲ್ಲೇ ಉಳಿದುಕೊಂಡು ಕೆಲಸ ಮಾಡುವವರಿಗೆ ಮೊದಲ ಆದ್ಯತೆ)

DTCP Sites for Sale
Amruthaa Nagar, Off Jayapura, HD Kote Main Road
30x40, 30x50 & Odd sites
RERA No. PRM/KA/RERA/1268/378/PR/200219/003298
7829331999, 6364382399

ಸೈಟು ಬೇಕಾಗಿದೆ
20x40, 30x40, 40x60
ಪೊಲೀಸ್ ಲೇಔಟ್, 2ನೇ ಹಂತ, ಮತ್ತು 3ನೇ ಹಂತ, ಜೆ.ಎಸ್.ಎಸ್. ಲೇಔಟ್ 2ನೇ ಹಂತ,
ಸಂಪರ್ಕಿಸಿ: ಮಾಲೀಕರೂ ಮತ್ತು ಮಾಲೀಕರು ನೇರ ಸಂಪರ್ಕಿಸುವ ಮಧ್ಯವರ್ತಿಗಳು ಸಹ ಸಂಪರ್ಕಿಸಿ:
8050332377

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಬೇಕಾಗಿದ್ದಾರೆ
ಪ್ರಿಯ ಇಂಜಿನಿಯರಿಂಗ್ ಟೂಲ್ಸ್ ಅಂಡ್ ಸೀಲ್ಸ್ ಇಂಡಸ್ಟ್ರಿಯಲ್ ಸಬರ್ಬ್ ಮೈಸೂರು
ಅನುಭವವುಳ್ಳ ನುರಿತ Miller, Turner / Grinder ಬೇಕಾಗಿದ್ದಾರೆ.
9448048871
8073983253

DTCP SITES FOR SALE
DTCP Sites
With RERA
Near Jayapura,
H.D. Kote Road, Mysore.
9590491194, 9606783264

HOUSE FOR RENT
NEWLY CONSTRUCTED 1ST FLOOR 2BHK HOUSE & ONE ATTACHED BATH ROOM 2ND FLOOR (SIZE 15X12) AT SRIRAMPURA, 2ND STAGE MAIN ROAD, MYSORE.
9739004633

20X30 ಮನೆ ಮಾರಾಟಕ್ಕಿದೆ
20x30 ಎರಡು ವರ್ಷದ ಟ್ರಿಪ್ಲೆಕ್ಸ್, ಫುಲ್ ಟೀಕ್, 3 ಬೆಡ್ ರೂಂ, 3 ಹಾಲ್, ಯುಟಿಲಿಟಿ, ಸಿಟ್‌ಔಟ್ ಎಲ್ಲಾ ಇರುವ ಉತ್ತಮವಾದ ಮನೆ ಆಂದೋಲನ ಸರ್ಕಲ್ ಹತ್ತಿರ ಮಾರಾಟಕ್ಕಿದೆ.
9945245946

ಸುವರ್ಣ ಯಾತ್ರ
1. ನೇಪಾಳ ಅಯೋಧ್ಯ ಮುಕ್ತಿನಾಥ ಪಶುಪತಿನಾಥ ಪ್ರವಾಸ 9 ದಿನಗಳು
29–5–2024 ಹಾಗೂ 18–6–2024
2. ಕಾಶಿ ಪ್ರವಾಸ ಬಾಬಾ ಬೈದ್ಯನಾಥ್ ಗಯಾ ಅಯೋಧ್ಯ ನೈಮಿಶರಣ್ಯ ಪ್ರಯಾಗ್‌ರಾಜ್ 7 ದಿನಗಳು
24–5–24 ಹಾಗೂ 23–7–24
9019462508
8660233673

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8861401315

Star Solar Renewable Energy

JUST 19,499/- 200 Ltr
Easy EMI
7/15 Years Guaranty
Limited Period Offer
Old system Exchange offer available
Manufacturing : Belawadi Industrial Sub, Mysore
9945616293 / 9449966293

ಬೇಕಾಗಿದ್ದಾರೆ
ನುಡಿ ಟೈಪ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ 15000/-
Ph.7406 369 369
ಶಿವರಾಂಪೇಟೆ, ಮೈಸೂರು

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

WANTED
Part time sales Asst. for filling petrol & Diesel for vehicles at Petrol Bunk at Mysore City
Preference PUC & above salary as Per Qualification
Timing morning 6.30 -10.30am or evening 6.30 - 11.30 pm
9844002226

SHOP RENT
100 ಚ.ಅಡಿಯುಳ್ಳ ಮೊದಲನೇ ಅಂತಸ್ತಿನಲ್ಲಿ ಕಛೇರಿಯ ಉಪಯೋಗಕ್ಕೆ ಬಾಡಿಗೆಗೆ ಇರುತ್ತದೆ.
ಶಾರದಾದೇವಿನಗರ/ ರಾಮಕೃಷ್ಣನಗರ ಮುಖ್ಯ ರಸ್ತೆ
9844775166

Sudarshan Saur SOLAR WATER HEATER

ATTRACTIVE OFFER
ಸೇಲ್ಸ್ & ಸರ್ವೀಸ್
10 years Guarantee
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

ಬೇಕಾಗಿದೆ
ಒಳ್ಳೆಯ ಗಾಳಿ ಬೆಳಕು ಬರುವ ಹಾಗೂ ವಾಷ್ ರೂಮ್ ಹೊಂದಿರುವ ಆಫೀಸ್ ರೂಮ್ ಸರಸ್ವತಿಪುರಂ ಮತ್ತು ಕುವೆಂಪುನಗರ ಸುತ್ತಮುತ್ತ ಬೇಕಾಗಿದೆ. ಸಂಪರ್ಕಿಸಿ:
9902508150 / 7406833379

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

SITE FOR SALE
30x40, KHB
Kenchalagudu, Mysore.
Brokers Excuse and
Room for Rent
2nd Floor, Anandanagara, Mysore
9448601908/9741607851

ಜಮೀನು ಮಾರಾಟಕ್ಕಿದೆ
2 ಎಕರೆ 08 ಗುಂಟೆ ಜಮೀನು ಮಾರಾಟಕ್ಕೆ ಇರುತ್ತದೆ.
ಹತ್ತಿ ಫ್ಯಾಕ್ಟರಿ ಹಿಂಭಾಗ, ಕಂಪಲಾಪುರ
ಪಿರಿಯಾಪಟ್ಟಣ ತಾಲೂಕು
9844775166

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರೋಡ್ – ಜಯಲಕ್ಷ್ಮೀಪುರಂನಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್ ಗೆ ಅನುಭವವುಳ್ಳ Experienced - ಅಡುಗೆ ಭಟ್ಟರು (South Cook) ಅಸಿಸ್ಟೆಂಟ್ ಕುಕ್ (ಸಹಾಯಕ /Helper) Cutting, Grinding ಮತ್ತು ಕೌಂಟರ್ ಪಾರ್ಸೆಲ್ Store Supervisor/ ಅಂಗಡಿ ಮೇಲ್ವಿಚಾರರ ಮಾಡುವ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ವಸತಿ ಹಾಗೂ ಉತ್ತಮ ಸೌಲಭ್ಯಗಳನ್ನೂ ನೀಡಲಾಗುತ್ತದೆ – ಸಂಪರ್ಕಿಸಿ:
9019916266

ಹೊಸ ಮನೆ ಮಾರಾಟಕ್ಕಿದೆ
ಸರ್ದಾರ್ ವಲ್ಲಭಾಯಿಪಟೇಲ್ ನಗರ ಮುಡಾ ಅನುಮೋದಿತ ಲೇಔಟ್
20*40 ಅಡಿ. ಪೂರ್ವ ದಿಕ್ಕು.
3 ಬೆಡ್‌ರೂಕೆ, ಬೋರ್‌ವೆಲ್ ಮತ್ತು ಪಿಲ್ಲರ್ ಹೊಂದಿದೆ, 100% ವಾಸ್ತು, ಉತ್ತಮ ಗುಣಮಟ್ಟದ ಹೊಸ ಮನೆ
Call: 9380284276

ವಧು–ವರರ ಅನ್ವೇಷಣೆ
ನಮ್ಮಲ್ಲಿ ಎಲ್ಲಾ ಜಾತಿಯ ವಧು–ವರರು, ವಿಚ್ಛೇದಿತರು ವಿಧುರರು–ವಿಧವೆಯರು ಸಂಪರ್ಕಿಸಿ:
8105747339

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7204494854

ಹೆಲ್ತ್ ಕೇರ್ ತರಬೇತಿ
SSLC / PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. GNM/BSC ನರ್ಸಿಂಗ್ ಆದವರಿಗೆ ಕೆಲಸವಿದೆ.
ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್ NIE ಕಾಲೇಜ್ ಪಕ್ಕ, ಮೈಸೂರು
9916908454

ನಿವೃತ್ತ ಅಧಿಕಾರಿಗಳಿಗೆ ಉದ್ಯೋಗ
ಪ್ರತಿಷ್ಠಿತ ಕಂಪನಿಯಲ್ಲಿ ನಿವೃತ್ತ ಅಧಿಕಾರಿಗಳಿಗೆ ಉದ್ಯೋಗಾವಕಾಶಗಳು ಲಭ್ಯವಿದೆ ವಿದ್ಯಾರ್ಹತೆ: ಯಾವುದೇ ಪದವಿ, ವೇತನ: ರೂ. 30,000/– ಮತ್ತು ಇತರೆ ಭತ್ಯೆಗಳು ಹಾಗೂ ವಿದೇಶ್ ಪ್ರವಾಸಗಳು
9886647852

ಸುಗ್ಗಿ ರಿಯಲ್ ಎಸ್ಟೇಟ್
ಬೋಗಾದಿ ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ 40x60 ಪಶ್ಚಿಮ ಮುಖ. ರೈಲ್ವೆ ಬಡಾವಣೆ ಉತ್ತರ ಮುಖ 40x60 ಅಳತೆಯ ಸೈಟ್ ಮಾರಾಟಕ್ಕಿದೆ. ದಟ್ಟಗಳ್ಳಿ, ಶಾರದ ಪಬ್ಲಿಕ್ ಸ್ಕೂಲ್ ಹತ್ತಿರ 40x60 ಅಳತೆಯ ಪಶ್ಚಿಮ ಮುಖ ಸೈಟ್ ಮಾರಾಟಕ್ಕಿದೆ. ನಿವೇದಿತನಗರದಲ್ಲಿ 40x60 W/F ಸೈಟ್ ಮಾರಾಟಕ್ಕಿದೆ. ಜೆ.ಪಿ. ನಗರ ನಿಯರ್ ರಿಂಗ್ ರಸ್ತೆ W/F 40x60. Contact:
Mob: 9945148025

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಐಸ್ ಕ್ರೀಂ ಅಂಗಡಿಗಾಗಿ ಪಾರ್ಟ್ ಟೈಂ ಸೇಲ್ಸ್ ಪರ್ಸನ್: 1 ಹುದ್ದೆ (ಹುಡುಗರು ಮಾತ್ರ). ವಯೋಮಿತಿ: 20 ರಿಂದ 35 ವರ್ಷ, ಅನುಭವ ಫ್ರೆಶರ್ಸ್. ಕೆಲಸದ ಸಮಯ: ಸಂಜೆ 5 ರಿಂದ ರಾತ್ರಿ 10. ಮಾಸಿಕ ಸಂಬಳ: ರೂ. 5,000 + ರೂ. 1000 ಆಹಾರ ಭತ್ಯೆ. ತರಬೇತಿ ನೀಡಲಾಗುವುದು. ಇಂಗ್ಲೀಷ್ ಓದಲು ಮತ್ತು ಮಾತನಾಡಲು ತಿಳಿದಿರಬೇಕು. ಸಂಪರ್ಕಿಸಿ:
Mob: 7760023629

Sunrise Public School
Malavalli-571430
Wanted Teachers
1) B.A., B.Ed. / M.A., B.Ed. (Kannada, English, Social, Hindi). (2) B.Sc., B.Ed. / M.Sc., B.Ed. (Science / Maths)
Trained teachers with fluency in English. Salary on the basis of experience and subject competency. Apply within 5 days.
9448740876, 9902824055

ಮನೆ ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿ ವಾಸಿಸುತ್ತಿರುವ ಕುಟುಂಬಕ್ಕೆ ಮೂರು ವರ್ಷದ ಮಗು ನೋಡಿಕೊಂಡು ಬಿಡುವಿನ ವೇಳೆಯಲ್ಲಿ ಮನೆ ಕೆಲಸ ಮಾಡಲು 18 ರಿಂದ 35 ವರ್ಷದ ಒಳಗಿನವರು ಕೆಲಸಕ್ಕೆ ಬೇಕಾಗಿದ್ದಾರೆ. ಮನೆಯಲ್ಲಿಯೇ ಉಳಿದುಕೊಳ್ಳುವವರಿಗೆ ಆದ್ಯತೆ. ಊಟ, ವಸತಿ ನೀಡಲಾಗುವುದು. ವಿಚ್ಛೇದಿತರು ಹಾಗೂ ವಿಧವೆಯರು ಸಹ ಅರ್ಜಿ ಸಲ್ಲಿಸಬಹುದು. ಸಂಬಳ: Negotiable.
Mob: 95353 05693

ಬೇಕಾಗಿದ್ದಾರೆ
ಚೆಫ್ ದಕ್ಷಿಣ ಭಾರತ ಮತ್ತು ಚೈನೀಸ್ – 01 ಅನುಭವವುಳ್ಳವರಿಗೆ ಸಂಬಳ: 15000 – 18000
ಕಿಚನ್ ಹೆಲ್ಪರ್ – 02 (ಸಂಬಳ 8000 – 10000)
ಹೌಸ್‌ಕೀಪಿಂಗ್ ಸಂಜೆಗೆ (ಸಂಬಳ: 5000)
ದಟ್ಟಗಳ್ಳಿಯಲ್ಲಿರುವ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಬೇಕಾಗಿದ್ದಾರೆ.
Mob: 7975860025

ನಿವೇಶನ ಮಾರಾಟಕ್ಕಿದೆ
40x60 ಪಶ್ಚಿಮ ದಿಕ್ಕು, ಮುಡಾ ಹರಾಜಿನ ಕಮರ್ಶಿಯಲ್ ಸೈಟ್ 80 ಅಡಿ ಮುಖ್ಯ ರಸ್ತೆಯಲ್ಲಿ ವಸಂತನಗರ, ಬನ್ನೂರು ಮುಖ್ಯ ರಸ್ತೆ, ಮೈಸೂರು
ಪ್ರತಿ ಚದರ ಮೀಗೆ 6700/– ನೆಗೋಷಿಯಬಲ್
8861139197

ವೃದ್ಧಾಶ್ರಮ
ವಯಸ್ಸಾದ ಮತ್ತು ಹಾಸಿಗೆ ಇಡಿದ ವಯೋವೃದ್ಧರನ್ನು ನಿಮ್ಮ ಮನೆಯಂತೆಯೇ ಸುಸಜ್ಜಿತವಾದ ಊಟ ವಸತಿ ಮತ್ತು ಮೆಡಿಕಲ್ ಸೌಲಭ್ಯದೊಂದಿಗೆ ನೋಡಿಕೊಳ್ಳಲಾಗುತ್ತದೆ.
9916905188

HOUSE FOR SALE
3 years old. W/F 30x40
Ground floor 2bhk,
1st floor 1 Room
At Sourish layout behind sahukar Hundi bogadi
9620349543

ಕರ್ನಾಟಕದಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ ಕಂಪನಿ ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು. (+ಸಂಬಳ :18000 Rs ಇಂದ 30000 Rs + ಇನ್ಸೆಂಟಿವ್ಸ್) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ:
+91 72040 27259, -91 77604 67259

DOCUMENT LOST
I, Ningaraju, S/o. Virabadrappa, 43/3, Kasaba Hobli, Hosahundi, Mysore have lost the Original Document of House Sale Deed, Canara Bank FD Bond & Gas Book. Finders please contact:
9632763375 / 9035241669

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡಿ ಪ್ರತಿ ತಿಂಗಳಿಗೆ ರೂ. 15,000 ಸಂಪಾದಿಸಿ.
Mob: 9731891409

ವಿವಾಹ ಭಾಗ್ಯ
MRJ ಮ್ಯಾಟ್ರಿಮೋನಿ
ಎಲ್ಲಾ ಜಾತಿಯ ವಧು / ವರರಿಗಾಗಿ ಸಂಪರ್ಕಿಸಿ:
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿದುರರು
FREE REGISTRATION
8904890413

ಬೇಕಾಗಿದ್ದಾರೆ
ಹೆಬ್ಬಾಳು, ಮೇಟಗಳ್ಳಿ, ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ ITI, Diploma, B.Com, 8th, 2nd PUC, ವರೆಗೆ ಊಟ ವಸತಿ ESI PF ಸೌಲಭ್ಯ ಇರುತ್ತದೆ ಸಂಬಳ 11500 ರಿಂದ 18000 ಇರುತ್ತದೆ.
8951869646
9902645646

ನಿವೇಶನ ಮಾರಾಟಕ್ಕಿದೆ
ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿಯವರು ನಿರ್ಮಿಸಿರುವ Muda Approved West facing 30x40 Site KBL ಗಾರ್ಡೇನಿಯ Back side ಕೆ.ಹೆಮ್ಮನಹಳ್ಳಿ ಸರ್ವೆ ನಂ.
8277585900
9483253323

ಬೇಕಾಗಿದ್ದಾರೆ
ಯೂತ್ ಹಾಸ್ಟೆಲ್ ಮೈಸೂರು ಉದ್ಯಾನಪಾಲಕ ಮತ್ತು ಸ್ವಚ್ಛತಾ ಸಹಾಯಕ (ಗಂಡು)
SSLC Pass / Fail
9481107371

ತಕ್ಷಣದ ಬೇಕಾಗಿದ್ದಾರೆ
ಹೇರ್ ಸಲೂನ್‌ಗೆ ಹುಡುಗರು ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ.
ವೇತನ: 25000 ರೂ.ಗಳಿಂದ 30000 ರೂ. ಸ್ಥಳ: ಸಾತಗಳ್ಳಿ ಮೈಸೂರು. ಸಂಪರ್ಕಿಸಿ:
9844341652

ಬೇಕಾಗಿದ್ದಾರೆ
ಕುಶಾಲನಗರದಲ್ಲಿರುವ ಸಸ್ಯಾಹಾರಿ ಹೋಟೆಲ್ಗೆ ಕೆಲಸಗಾರರು ಬೇಕಾಗಿದ್ದಾರೆ
ವಾಷಿಂಗ್ (ಪಾತ್ರೆ)6
ಅಡುಗೆ ಸಹಾಯಕರು 2
ನಾರ್ತ್ ಇಂಡಿಯನ್ ಕುಕ್.1
ಚೈನೀಸ್ ಕುಕ್–1, ತಂದೂರಿ ಮಾಸ್ಟರ್–1
ಕಾಫಿ ಟೀ ಮೇಕರ್–2, ಜ್ಯೂಸ್ ಮೇಕರ್–2
ಕೂಡಲೇ ಸಂಪರ್ಕಿಸಿ:
8317454665

WANTED
DRIVER For Leyland Dost 12000 & Helpers for Lime Past Packing to Construction at J.P. Nagar Surrounding Prepered
9945781094

ಬೇಕಾಗಿದ್ದಾರೆ
ವಾಹನ ಚಾಲನೆ ಲೈಸನ್ಸ್‌ವುಳ್ಳ ಸ್ಟೋರ್ ಕೀಪರ್ ಸಂಸ್ಥೆಯಲ್ಲಿ ವಾಸಿಸಲು ಸಿದ್ಧರಿರಬೇಕು.
ಉಚಿತ ವಸತಿ+ಸಸ್ಯಾಹಾರಿ ಊಟ+
Rs.12,000/- to 15,000/-
ದಿವ್ಯ ದೀಪ ಚಾರಿಟಬಲ್ ಟ್ರಸ್ಟ್
ಕೆಂಚಲಗೂಡು, ಮಹಾಂದವಾಡಿ ರಸ್ತೆ ಮೈಸೂರು–08
www.divyadeepatrust.org
9341369901, 9538499901
8088586087

ವಧು ಬೇಕಾಗಿದೆ
33 ವರ್ಷ, 5, 11, BE ಮಾಡಿ Commercial Tax Officer (Govt.) ಆಗಿರುವ ವರನಿಗೆ ಒಕ್ಕಲಿಗ ಜಾತಿಯ ವಧು ಬೇಕಾಗಿದೆ. (ಎಲ್ಲಾ ಜಾತಿಯ ವಧು–ವರರಿಗಾಗಿ)
9343175000

REQUIRED
MARKETING EXECUTIVE- 4
(Any Degree) Freshers also welcome
Male and Female STAR BAJAJ (Authorised main Dealer of Bajaj Auto Ltd.) opp. Axis bank V V Mohalla, Mysore- 570002
9743647484
Ganesha Temple Road, Maruthi Circle, N.R.Mohalla-570007.
8660381094

ಬಂಧನ ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ:
ಪ್ರತಿದಿನ ವಧುವರರ ನೇರ ಸಂದರ್ಶನ ಇರುತ್ತದೆ
9448229184
7899625268

ಮನೆ ಬಾಡಿಗೆಗೆ ಇದೆ
3 BHK, N/F
ವಿಜಯನಗರ 4ನೇ ಹಂತ 2ನೇ ಫೇಸ್, ಮರಿಮಲ್ಲಪ್ಪ ಕಾಂಪ್ಲೆಕ್ಸ್ ಹತ್ತಿರ
6366484442

ಬೇಕಾಗಿದ್ದಾರೆ
ಗೌಡ್ರು ಪೋರ್ಕ್ ಹೋಟೆಲ್ ಹಿನಕಲ್ ಮೈಸೂರು ಇಲ್ಲಿ ಕೆಲಸ ಮಾಡಲು ನಾಟಿ ಸ್ಟೈಲ್ ಅಡುಗೆ ಭಟ್ಟರು ಹಾಗೂ ಕ್ಲೀನಿಂಗ್ ಕೆಲಸಕ್ಕೆ ಜನ ಬೇಕಾಗಿದ್ದಾರೆ.
ಸಂಪರ್ಕಿಸಿ:
9886181222

WANTED IMMEDIATELY
Accountant
(2-3 years experience)
Tele callers (Female)
(1-2 Years Experience)
8884666543

30x40 ಪೂರ್ವ ದಿಕ್ಕಿನ DTCP 'A' ಖಾತೆ ಸೊಸೈಟಿ ಸೈಟ್ ಮಾರಾಟಕ್ಕಿದೆ
15 ಲಕ್ಷಗಳು ನಂಜುಂಡೇಶ್ವರ ನಗರ TVS ಫ್ಯಾಕ್ಟರಿ ಹತ್ತಿರ ಮೈಸೂರು
9742198093
9972557534

ತಕ್ಷಣ ಬೇಕಾಗಿದ್ದಾರೆ
ಟಿ.ವಿ.ಎಸ್ ಫ್ಯಾಕ್ಟರಿ ಏರಿಯಾದ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು
ಸಂಬಳ : 17500/- (26days)
ವಯೋಮಿತಿ : 45 ವರ್ಷದ ಒಳಗೆ
ESI & PF ಊಟ ತಿಂಡಿ ವಸತಿ ಸೌಲಭ್ಯವಿದೆ.
9620777819
9620667819

HOUSE FOR RENT
2BHK I FLOOR
2ND STAGE
GAYATHRIPURAM
6360777652

LAND REQUIRED
Required Vacent Land for Lease 6000 sqft with in 5 KM radius from Mysore City
9036461253

ಬೇಕಾಗಿದ್ದಾರೆ
ಮೈಸೂರಿನ ಯಾದವಗಿರಿಯಲ್ಲಿ ಕಂಪ್ಯೂಟರ್‌ನಲ್ಲಿ ಬಿಲ್ ಮಾಡಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ.
9916842472

ಬೇಕಾಗಿದ್ದಾರೆ
ಕಾರ್ ವ್ಹೀಲ್ ಅಲೈನ್‌ಮೆಂಟ್ ಅಂಗಡಿಯಲ್ಲಿ ಕೆಲಸ ಮಾಡಲು ITI ಮಾಡಿರುವ ಹುಡುಗರು ಕುಶಾಲನಗರ ಮತ್ತು ಮೈಸೂರು ಎರಡೂ ಕಡೆ ಬೇಕಾಗಿದ್ದಾರೆ.
9916842472

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದರಿಗೆ ಬಿಜೆಪಿ ಅಭ್ಯರ್ಥಿ ಡಾ.ಇ.ಸಿ.ನಿಂಗರಾಜ್‌ಗೌಡ ಬೆಂಬಲ ಘೋಷಣೆ



ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡರು ಹಾಗೂ ಬಿಜೆಪಿ ಮುಖಂಡರ ಸಮ್ಮುಖದಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಅವರಿಗೆ ಬಿಜೆಪಿ ಅಭ್ಯರ್ಥಿಯಾಗಿ ಘೋಷಿಸಲಾಗಿದ್ದ ಇ.ಸಿ.ನಿಂಗರಾಜ್ ಗೌಡರು ಬೆಂಬಲ ಘೋಷಿಸಿದರು.

ಮೈಸೂರು, ಮೇ 17(ಎಸ್‌ಬಿಡಿ)- ರಾಜ್ಯ ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಘೋಷಿಸಲಾಗಿದ್ದ ಡಾ.ಇ.ಸಿ.ನಿಂಗರಾಜ್ ಗೌಡರು, ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದರಿಗೆ ಶುಕ್ರವಾರ ಅಧಿಕೃತವಾಗಿ ಬೆಂಬಲ ಘೋಷಿಸಿದರು.

ಮೈಸೂರು ಬಿಜೆಪಿ ಕಚೇರಿಯಲ್ಲಿ ಉಭಯ ಪಕ್ಷಗಳ ಮುಖಂಡರ ಜಂಟಿ ಸುದ್ದಿಗೋಷ್ಠಿಯಲ್ಲಿ ಅವರು, ಎಬಿವಿಪಿಯಿಂದ ಈವರೆಗೆ ಕಳೆದ 35 ವರ್ಷಗಳಿಂದ ವಿವಿಧ ಹಂತಗಳಲ್ಲಿ ಕೆಲಸ ಮಾಡಿದ್ದೇನೆ. ಹಲವು ಹೋರಾಟಗಳಲ್ಲಿ ಭಾಗಿಯಾಗಿ ಬೆಳೆದು ಬಂದಿದ್ದೇನೆ. ಆರ್‌ಎಸ್‌ಎಸ್ ಹಾಗೂ ಬಿಜೆಪಿ, ನಮಗೆ ವ್ಯಕ್ತಿಗಿಂತ ಪಕ್ಷ ಮುಖ್ಯ, ಪಕ್ಷಕ್ಕಿಂತ ದೇಶ ಮುಖ್ಯ ಎನ್ನುವುದನ್ನು ಕಲಿಸಿಕೊಟ್ಟಿದೆ. ನಾನು ಪಕ್ಷದ ನಿರ್ಧಾರವನ್ನು ಗೌರವಿಸಿ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷರಾದ ಬಿ.ವೈ.ವಿಜಯೇಂದ್ರ ಅವರ ಕೈ ಬಲಪಡಿಸುವ ಉದ್ದೇಶದಿಂದ ಕೆ.ವಿವೇಕಾನಂದರಿಗೆ ವೈಯಕ್ತಿಕ ಬೆಂಬಲ ಘೋಷಿಸಿದ್ದೇನೆ ಎಂದರು.

ನಾನು 2008ರಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಾಕಾಂಕ್ಷಿಯಾಗಿದ್ದೆ. 2018ರಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಟಿಕೆಟ್ ಕೇಳಿದ್ದೆ. ಆದರೆ ಪಕ್ಷ ನಿರಂಜನ್ ಮೂರ್ತಿ ಅವರಿಗೆ ಟಿಕೆಟ್ ನೀಡಿತು. ಆಗ ಎಲ್ಲರೂ ಒಮ್ಮತದಿಂದ ಕೆಲಸ ಮಾಡಿದೆವು. ನಂತರ ದಕ್ಷಿಣ ಪದವೀಧರ ಕ್ಷೇತ್ರಕ್ಕೆ ಸ್ಪರ್ಧಿಸುವ ಅವಕಾಶವೂ ತಪ್ಪಿತು. ಆ ಸಂದರ್ಭದಲ್ಲಿ ಶಿಕ್ಷಕರ ಕ್ಷೇತ್ರಕ್ಕೆ ಅವಕಾಶ ನೀಡುವ ಭರವಸೆ ನೀಡಿದ್ದರು. ಪಕ್ಷ ಹಾಗೂ ಸಂಘ ಪರಿವಾರದ ಮುಖಂಡರು, ನಾಲ್ಕು ಜಿಲ್ಲೆಗಳ ಜಿಲ್ಲಾಧ್ಯಕ್ಷರು, ಕಾರ್ಯಕರ್ತರು ಸಮಾಲೋಚನೆ ನಡೆಸಿ, 10 ಆಕಾಂಕ್ಷಿಗಳ ಅಭಿಪ್ರಾಯ ಪಡೆದು ನನ್ನ ಹೆಸರನ್ನು ಸೂಚಿಸಲಾಗಿತ್ತು. ಕಳೆದ ಶನಿವಾರ ಅಭ್ಯರ್ಥಿಯಾಗಿ ನನ್ನನ್ನು ಅಧಿಕೃತವಾಗಿ ಪ್ರಕಟಿಸಲಾಯಿತು. ಎಲ್ಲಾ ಪಕ್ಷದವರೂ ಕರೆ ಮಾಡಿ ಅಭಿನಂದನೆ ತಿಳಿಸಿದ್ದರು. ಆದರೆ ಬದಲಾದ ಪರಿಸ್ಥಿತಿಯಲ್ಲಿ ಜೆಡಿಎಸ್‌ಗೆ ಬೆಂಬಲ ನೀಡಲಾಗಿದೆ ಎಂದು ತಿಳಿಸಿದರು.

ಅಭಿವೃದ್ಧಿ ಕಾರ್ಯಗಳ ಜೊತೆಗೆ ದೇಶದ ಹಿತದೃಷ್ಟಿಯಿಂದ ಪ್ರಾದೇಶಿಕ ಪಕ್ಷಗಳನ್ನು ಜೋಡಿಸಿಕೊಳ್ಳುವ ಬಿಜೆಪಿಯ ದೃಷ್ಟಿಕೋನದಿಂದಾಗಿ ರಾಜ್ಯದಲ್ಲೂ ಮೈತ್ರಿ ಮಾಡಿಕೊಂಡಿದ್ದೇವೆ. ನಾನು ಹಿಂದೆ ಮೂರು ಬಾರಿ ಪ್ರಯತ್ನ ಮಾಡಿದ್ದರೂ ಈ ಬಾರಿ ಅಭ್ಯರ್ಥಿಯಾಗಿ ಘೋಷಣೆಯಾಗಲು ಬಿಜೆಪಿ ರಾಜ್ಯಾಧ್ಯಕ್ಷರಾದ ಬಿ.ವೈ.ವಿಜಯೇಂದ್ರ ಅವರ ಮುತುವರ್ಜಿ ಹಾಗೂ ಎಲ್ಲರ ಬೆಂಬಲ ಕಾರಣ. ಕೆಲ ದಿನಗಳ ಹಿಂದೆಯೂ ರಾಜ್ಯಾಧ್ಯಕ್ಷರು ನನ್ನೊಂದಿಗೆ ಮಾತನಾಡಿದರು. ಇಂದೂ ಮಾತನಾಡಿ, ನಾವೆಲ್ಲರೂ ಮೈತ್ರಿ ಧರ್ಮ ಪಾಲನೆ ಮಾಡಬೇಕು. ಮೋದಿ ಅವರು ಮತ್ತೆ ಪ್ರಧಾನಿ ಆಗಬೇಕು. ಪಕ್ಷ ಹಾಗೂ ನಾನು ನಿಮ್ಮ ಜೊತೆಗಿರುತ್ತೇನೆ. ಕೆ.ವಿವೇಕಾನಂದರಿಗೆ ಬೆಂಬಲ ನೀಡಿ ಎಂದು ಹೇಳಿದರು ಎಂದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ. ದೇವೇಗೌಡರು, ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ರಾಜ್ಯ ಕಾರ್ಯದರ್ಶಿ ತಮ್ಮೇಶ್ ಗೌಡ, ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿ ವಿವೇಕಾನಂದ, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿಗಳಾದ ಬಿ.ಎಂ.ರಘು, ಮಹೇಶ್ ಮಟವಾಡಿ, ಮುಖಂಡ ನಿರಂಜನ್ ಮೂರ್ತಿ, ವಕ್ತಾರ ಮೋಹನ್, ಸಹ ವಕ್ತಾರ ಕೆ.ದೇವರಾಜ, ಮಾಧ್ಯಮ ನಗರ ಸಂಚಾಲಕ ಮಹೇಶ್ ರಾಜೇ ಅರಸ್, ಸಹ ಸಂಚಾಲಕ ಬಿ.ಎಂ. ಸಂತೋಷ್ ಕುಮಾರ್ ಮತ್ತಿತರರಿದ್ದರು.

ಮೈತ್ರಿ ಬಾಂಧವ್ಯ ಗಟ್ಟಿಯಾಗಿದೆ...

ಮೈಸೂರು: ರಾಜ್ಯದಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿ ಬಾಂಧವ್ಯ ಗಟ್ಟಿಯಾಗಿದೆ ಎಂಬುದು ದಕ್ಷಿಣ ಶಿಕ್ಷಕರ ಕ್ಷೇತ್ರ ಚುನಾವಣೆ ಮೂಲಕ ಮತ್ತೊಮ್ಮೆ ಸಾಬೀತಾಗಿದೆ ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷರಾದ ಶಾಸಕ ಜಿ.ಟಿ.ದೇವೇಗೌಡರು ಹೇಳಿದರು. ಬಿಜೆಪಿ-ಜೆಡಿಎಸ್ ಮೈತ್ರಿ ಮುರಿದು ಬೀಳುತ್ತದೆ, ಮೈತ್ರಿಯನ್ನು ಮುರಿಯುತ್ತೇವೆ ಎನ್ನುವುದು ಕಾಂಗ್ರೆಸ್‌ನ ನಿತ್ಯ ಘೋಷಣೆಯಾಗಿದೆ. ಆದರೆ ಅವರಿಗೆ ಬಿಜೆಪಿ ನಿರ್ಧಾರದಿಂದ ದಿಟ್ಟ ಉತ್ತರ ಸಿಕ್ಕಿದೆ. ಜೆಡಿಎಸ್-ಬಿಜೆಪಿ ಮೈತ್ರಿ ಗಟ್ಟಿಯಾಗಿದೆ, ಇದು ಶಾಶ್ವತವಾಗಿ ಮುಂದುವರೆಯುತ್ತದೆ ಎಂಬುದು ಮತ್ತೆ ಸಾಬೀತಾಗಿದೆ. ಅತ್ಯಂತ ಹೆಚ್ಚು ಮತಗಳೊಂದಿಗೆ ಗೆಲ್ಲಿಸುವ ನಿರ್ಣಯವನ್ನು ಬಿಜೆಪಿ ಮಾಡಿದೆ. ಇದಕ್ಕಾಗಿ ನಾಯಕರು, ಮುಖಂಡರು, ಕಾರ್ಯಕರ್ತರಿಗೆ ಅಭಿನಂದನೆ ತಿಳಿಸುತ್ತೇನೆ. ಪಕ್ಷದ ನಿರ್ಧಾರಕ್ಕೆ ಬದ್ಧರಾಗಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದರಿಗೆ ಬೆಂಬಲ ಘೋಷಿಸಿದ ಇ.ಸಿ.ನಿಂಗರಾಜ್ ಗೌಡರಿಗೂ ಅಭಿನಂದನೆ ತಿಳಿಸುತ್ತೇನೆ ಎಂದರು.

ಪ್ರಚಾರಕ್ಕೆ ಕೆಟಿಎಸ್: ನಾಳೆಯಿಂದ ಕೆ.ಟಿ.ಶ್ರೀಕಂಠೇಗೌಡರೂ ಪ್ರಚಾರದಲ್ಲಿ ಭಾಗಿಯಾಗುತ್ತಾರೆ. ಅವರು ಹಾಗೂ ಇ.ಸಿ.ನಿಂಗರಾಜ್ ಗೌಡರ ಮುಂಚೂಣಿಯಲ್ಲಿ ಕೆಲಸ ಮಾಡುತ್ತಾರೆ. ವಿಧಾನಪರಿಷತ್‌ನ 6 ಕ್ಷೇತ್ರಗಳ ಸಂಬಂಧ ಉಭಯ ಪಕ್ಷಗಳ ಸಮನ್ವಯ ಸಮಿತಿ ಸಭೆಯಲ್ಲೇ ತೀರ್ಮಾನವಾಗಿತ್ತು. ನಂತರ ಮರಿತಿಬ್ಬೇಗೌಡರು ಕಾಂಗ್ರೆಸ್‌ಗೆ ಹೋದರು. ಅಂತಿಮ ನಿರ್ಣಯ ಕೈಗೊಳ್ಳುವ ಸಮಯಕ್ಕೆ ಬೇರೆ ಬೆಳವಣಿಗೆ ನಡೆಯಿತು. ಅದರ ಮಧ್ಯೆ ನೈರುತ್ಯ ಶಿಕ್ಷಕರ ಕ್ಷೇತ್ರವನ್ನು ಭೋಜೇಗೌಡರಿಗೆ ಬಿಟ್ಟು, ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯನ್ನು ಘೋಷಿಸಿದ್ದರು. ನಂತರ ನಮಗೆ ಕ್ಷೇತ್ರವನ್ನು ಬಿಟ್ಟುಕೊಟ್ಟಿದ್ದಾರೆ. ಕೆ.ಟಿ.ಶ್ರೀಕಂಠೇಗೌಡ ಅನುಭವಿ. ಆದರೆ ಸಾಮಾನ್ಯ ಕಾರ್ಯಕರ್ತರಿಗೆ, ಹೊಸಬರಿಗೆ ಅವಕಾಶ ನೀಡಬೇಕೆಂದು ಕೆ.ವಿವೇಕಾನಂದರಿಗೆ ಟಿಕೆಟ್ ನೀಡಲಾಗಿದೆ ಎಂದು ತಿಳಿಸಿದರು.

ಸಮನ್ವಯತೆಯಿಂದ ಕೆಲಸ ಮಾಡುತ್ತೇವೆ...

ಮೈಸೂರು: ಪಕ್ಷದ ನಿಷ್ಠಾವಂತ ಕಾರ್ಯಕರ್ತ ಇ.ಸಿ.ನಿಂಗರಾಜು ಅವರಿಗೆ ಮುಂದಿನ ದಿನಗಳಲ್ಲಿ ಸೂಕ್ತ ಅವಕಾಶ ಸಿಗಲಿದೆ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ ತಮ್ಮೇಶ್ ಗೌಡ ಭರವಸೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಿಜೆಪಿ ಅಧಿಕೃತ ಅಭ್ಯರ್ಥಿಯಾಗಿ ನಿಂಗರಾಜ್ ಗೌಡರನ್ನು ಘೋಷಿಸಿತ್ತು. ಆದರೆ ವಿಧಾನಪರಿಷತ್ ಚುನಾವಣೆಯನ್ನೂ ಜೆಡಿಎಸ್-ಬಿಜೆಪಿ ಮೈತ್ರಿಯಾಗಿ ಎದುರಿಸಿದಂತೆ ಕೇಂದ್ರದ ವರಿಷ್ಠರ ತೀರ್ಮಾನಕ್ಕೆ ಬದ್ಧವಾಗಿ, ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿಯಾದ ಕೆ.ವಿವೇಕಾನಂದ ಅವರಿಗೆ ಬೆಂಬಲ ನೀಡಬೇಕು ಎಂದು ರಾಜ್ಯ ಘಟಕ ನಿರ್ಧಾರ ಕೈಗೊಂಡಿದೆ. ರಾಜ್ಯಾಧ್ಯಕ್ಷ ರಾದ ಬಿ.ವೈ. ವಿಜಯೇಂದ್ರ ಅವರು ನಿಂಗರಾಜ್‌ಗೌಡರೊಂದಿಗೆ ಮಾತನಾಡಿ, ಮೈತ್ರಿ ಅಭ್ಯರ್ಥಿ ವಿವೇಕಾನಂದ ಪರವಾಗಿ ಕೆಲಸ ಮಾಡುವಂತೆ ವಿನಂತಿ ಮಾಡಿದರು. ಅದಕ್ಕೆ ಒಪ್ಪಿ, ಪಕ್ಷದ ಕಚೇರಿಯಲ್ಲೇ ಅಧಿಕೃತವಾಗಿ ಘೋಷಣೆ ಮಾಡಿದ್ದಾರೆ. ಆರು ಕ್ಷೇತ್ರಗಳಲ್ಲೂ ಉತ್ತಮವಾದ ವಾತಾವರಣವಿದ್ದು, ದಕ್ಷಿಣ ಶಿಕ್ಷಕರ ಕ್ಷೇತ್ರವನ್ನೂ ನಾವು ಗೆದ್ದೇ ಗೆಲ್ಲುತ್ತೇವೆ. ಸಿಕ್ಕ ಅವಕಾಶದಲ್ಲಿ ಶಿಕ್ಷಕರ ಪರವಾಗಿ ಯಾವುದೇ ಕೆಲಸ ಮಾಡದೆ, ಕಾಂಗ್ರೆಸ್‌ಗೆ ಹೋಗಿರುವ ಮರಿತಿಬ್ಬೇಗೌಡರಿಗೆ ಪ್ರಬುದ್ಧ ಮತದಾರರು ತಕ್ಕ ಪಾಠ ಕಲಿಸುತ್ತಾರೆ ಎಂಬ ವಾತಾವರಣ ನಿರ್ಮಾಣ ಆಗಿದೆ. ಬಿಜೆಪಿಯ ಎಲ್ಲಾ ಮುಖಂಡರು ಜೆಡಿಎಸ್‌ನೊಂದಿಗೆ ಸಮನ್ವಯತೆಯಿಂದ ಕೆಲಸ ಮಾಡುತ್ತೇವೆ ಎಂದು ಹೇಳಿದರು.

ಇಂದು ಬಿವಿಬಿಯಲ್ಲಿ ವಿದ್ವಾನ್ ಶಂಕರ್ ಶಾನ್‌ಬೋಗ್‌ರಿಂದ ಸುಗಮ ಸಂಗೀತ



ಮೈಸೂರು, ಮೇ 17(ಎಂಕೆ)- ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನ(ಬಿವಿಬಿ)ದಲ್ಲಿ ನಾಳೆ (ಮೇ 18) ಸಂಜೆ 6 ಗಂಟೆಗೆ ವಿದ್ವಾನ್ ಶಂಕರ್ ಶಾನ್‌ಬೋಗ್, ಭಕ್ತಿಗೀತೆಗಳ ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಅವರೊಂದಿಗೆ ತಬಲ ವಾದನದಲ್ಲಿ ರಘುನಾಥ, ಕೀ ಬೋರ್ಡ್‌ನಲ್ಲಿ ಷಣ್ಮುಗ ಸಜ್ಜಾ, ರಿದಂ ಪ್ಯಾಡ್‌ನಲ್ಲಿ ಗುರುದತ್ ಹುಣಸೂರು ಸಹಕಾರ ನೀಡಲಿದ್ದಾರೆ.

ಕನ್ನಡ ಭಕ್ತಿ ಸಂಗೀತ ಮತ್ತು ಸುಗಮ ಸಂಗೀತ ಕ್ಷೇತ್ರದಲ್ಲಿ ಪ್ರಖ್ಯಾತರಾಗಿರುವ ಶಂಕರ್ ಶಾನ್ಬೋಗ್ ಅವರು, ಚಿಕ್ಕಮಗಳೂರಿನ ಕಳಸದವರು. ತಮ್ಮ ತಾಯಿಯವರಿಂದ ಪ್ರೇರಣೆ ಪಡೆದ ಇವರು, ಬಿ.ರಾಧಾಕೃಷ್ಣ ಬಾಳಿಗಾ ಅವರಿಂದ ಭಕ್ತಿ ಸಂಗೀತದ ಲೋಕಕ್ಕೆ ದೀಕ್ಷೆ ಪಡೆದರು. ನಂತರ ಪಂಡಿತ್ ಮಹಾಬಲೇಶ್ವರ ಭಾಗವತ್, ಗುರು ಮಾಧವ್ ಭಟ್, ಪಂಡಿತ್ ರಾಮರಾವ್ ನಾಯ್ಕ್, ಪಂಡಿತ್ ರಾಜಭಾವು ಸೊಂಟಕ್ಕೆ, ಪಂಡಿತ್ ಪರಮೇಶ್ವರ ಹೆಗಡೆ ಅವರ ಮಾರ್ಗದರ್ಶನ ಹಾಗೂ ಪ್ರಸಿದ್ಧ ಕಲಾವಿದರಾದ ಬಿ.ಕೆ.ಚಂದ್ರಶೇಖರ್ ಮತ್ತು ಡಾ.ಮಾಯಾ ರಾವ್ ಅವರ ಪ್ರೋತ್ಸಾಹದಿಂದ ಸಂಗೀತ ಕ್ಷೇತ್ರದಲ್ಲಿ ಗಾಯಕರಾಗಿ, ಸೃಜನಶೀಲ ಸಂಗೀತ ಸಂಯೋಜಕರಾಗಿ ರೂಪುಗೊಂಡಿದ್ದಾರೆ.

ಶಾಸ್ತ್ರೀಯ ಮತ್ತು ಲಘು ಸಂಗೀತದಲ್ಲಿ ಪರಿಣಿತಿ ಪಡೆದಿರುವ ಶಂಕರ್ ಅವರು, ಯುಎಸ್, ಯುಕೆ, ಕೆನಡಾ, ದುಬೈ, ಕುವೈತ್ ಸೇರಿದಂತೆ ದೇಶ-ವಿದೇಶಗಳಲ್ಲಿ ಅನೇಕ ಸಂಗೀತ ಕಚೇರಿಗಳನ್ನು ನೀಡಿದ್ದಾರೆ. ಕನ್ನಡ ಮತ್ತು ಕೊಂಕಣಿಯಲ್ಲಿ ಇವರ ಭಜನ್ ಸಿಡಿ ಆಲ್ಬಂಗಳು ಜನಪ್ರಿಯವಾಗಿವೆ. ಅಲ್ಲದೆ ಅನೇಕ ಚಲನಚಿತ್ರಗಳು ಮತ್ತು ಇನ್ನಿತರೆ ಸಂಗೀತದ ಧ್ವನಿಮುದ್ರಣಗಳಿಗೆ ಹಿನ್ನೆಲೆ ಗಾಯಕರಾಗಿ ಧ್ವನಿ ನೀಡಿದ್ದಾರೆ. ನ್ಯಾಷನಲ್ ಗೇಮ್ಸ್ ಮತ್ತು ಏರೋ ಇಂಡಿಯಾ ಶೋಗಳಿಗೆ ಸಂಗೀತ ನಿರ್ಮಾಣಗಳನ್ನು ಮಾಡಿದ್ದಾರೆ.

ತಮ್ಮ ಸಾತ್ವಿಕ ಸಾಂಸ್ಕೃತಿಕ ಪ್ರತಿಷ್ಠಾನದ ಮೂಲಕ ಸಮಾಜದಲ್ಲಿ ಸಾಂಸ್ಕೃತಿಕ ಮತ್ತು ನೈತಿಕ ಜಾಗೃತಿಯನ್ನು ಉತ್ತೇಜಿಸುವ ಮತ್ತು ಜೀವನವನ್ನು ಪ್ರೇರೇಪಿಸುವ ಏಕೈಕ ಗುರಿಯೊಂದಿಗೆ ಅನಾಥಾಶ್ರಮಗಳು, ವೃದ್ಧಾಶ್ರಮಗಳು, ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ, ಸಾಂಸ್ಕೃತಿಕ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ, ಸಂಘಟಿತ ಸಾರ್ವಜನಿಕ ಕಾರ್ಯಕ್ರಮಗಳು ಹಾಗೂ ಖಾಸಗಿ ಸಂಗೀತ ಕಚೇರಿಗಳೊಂದಿಗೆ ಸಮಾಜದ ಎಲ್ಲಾ ವಿಭಾಗಗಳನ್ನು ತಲುಪಲು ಶ್ರಮಿಸುತ್ತಿದ್ದಾರೆ. ಸಂಗೀತ ಕ್ಷೇತ್ರದಲ್ಲಿ ಅಪಾರ ಸಾಧನೆಗೈದಿರುವ ಇವರು ಭಾರತೀಯ ವಿದ್ಯಾಭವನ ಮೈಸೂರು ಕೇಂದ್ರದ ತಿಂಗಳ ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ದಲಿತರು, ಹಿಂದುಳಿದ ವರ್ಗಕ್ಕೆ ಶ್ರೀನಿವಾಸಪ್ರಸಾದ್ ದೊಡ್ಡ ಶಕ್ತಿ

- ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಅಭಿಮತ
- ವರುಣಾ ಕ್ಷೇತ್ರದ ಕಾಂಗ್ರೆಸ್ ಸಮಿತಿ ವತಿಯಿಂದ ನುಡಿನಮನ



ಶ್ರೀನಿವಾಸ್‌ಪ್ರಸಾದ್ ಅವರ ನುಡಿನಮನ ಕಾರ್ಯಕ್ರಮವನ್ನು ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸಿದರು.

ಮೈಸೂರು, ಮೇ 17(ಎಂಟಿವೈ)- ಬುದ್ಧ, ಬಸವಣ್ಣ, ಡಾ.ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡಿದ್ದ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಸ್ವಾಭಿಮಾನಿ ರಾಜಕಾರಣಿಯಾಗಿದ್ದರು ಎಂದು ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ತಾಲೂಕಿನ ನಾಡನಹಳ್ಳಿಯ ಕಲ್ಯಾಣ ಮಂಟಪವೊಂದರಲ್ಲಿ ವರುಣಾ ಕ್ಷೇತ್ರದ ಕಾಂಗ್ರೆಸ್ ಸಮಿತಿ ವತಿಯಿಂದ ಶುಕ್ರವಾರ ಆಯೋಜಿಸಿದ್ದ ದಿ. ವಿ.ಶ್ರೀನಿವಾಸ್‌ಪ್ರಸಾದ್ ನುಡಿನಮನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶ್ರೀನಿವಾಸ್ ಪ್ರಸಾದ್‌ರವರು ದಲಿತ, ಹಿಂದುಳಿದ ವರ್ಗದ ದೊಡ್ಡ ಶಕ್ತಿಯಾಗಿದ್ದರು. ದಲಿತರು, ಹಿಂದುಳಿದವರು, ಅನ್ಯಾಯದ ವಿರುದ್ಧ ಹೋರಾಟ ಮಾಡುತ್ತಾ ಸ್ವಾಭಿಮಾನದಿಂದ ಬದುಕಬೇಕು ಎಂದು ಹೇಳುತ್ತಿದ್ದರು. ಕೆಲ ಕಾಲ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಶ್ರೀನಿವಾಸ್‌ಪ್ರಸಾದ್ ನಡುವೆ ರಾಜಕೀಯದಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಒಳ್ಳೆಯ ಸ್ನೇಹಿತರಾಗಿದ್ದರು. ಸಿದ್ದರಾಮಯ್ಯ ಅವರಿಗೆ ಶ್ರೀನಿವಾಸ್‌ಪ್ರಸಾದ್‌ರ ಬಗ್ಗೆ ಅಪಾರ ಗೌರವವಿದೆ. ಶ್ರೀನಿವಾಸ್ ಪ್ರಸಾದ್‌ರವರು 50 ವರ್ಷದ ರಾಜಕಾರಣದಲ್ಲಿ ಅಜಾತಶತ್ರುವಾಗಿದ್ದರು ಎಂದು ಬಣ್ಣಿಸಿದರು.

ರಾಜಕೀಯ ಮುತ್ಸದ್ಧಿಯಾಗಿರುವ ವಿ.ಶ್ರೀನಿವಾಸ್ ಪ್ರಸಾದ್ ಅವರಿಗೆ ಪಕ್ಷಾತೀತವಾಗಿ ಎಲ್ಲಾ ರಾಜಕಾರಣಿಗಳು ಅಪಾರ ಗೌರವ ನೀಡುತ್ತಿದ್ದರು. ರಾಜಕೀಯ ಕ್ಷೇತ್ರಕ್ಕೆ ಬಂದ ಮೇಲೆ ಹೇಗಿರಬೇಕು ಎಂದು ಪ್ರಸಾದ್ ಅವರನ್ನು ನೋಡಿ ಕಲಿಯಬೇಕು. ಸದಾ ಜನರ ಮಧ್ಯೆ ಇದ್ದು, ಜನರ ಪ್ರೀತಿಗೆ ಪಾತ್ರರಾಗಿ ಅಪಾರ ಜನಮನ್ನಣೆ ಗಳಿಸಿದ ಅಪರೂಪದ ರಾಜಕಾರಣಿಯಾಗಿದ್ದರು. ಶ್ರೀನಿವಾಸ್ ಪ್ರಸಾದ್‌ರವರ ಜೀವನ ಆದರ್ಶ ಎಲ್ಲಾ ಪಕ್ಷದ ಯುವ ರಾಜಕಾರಣಿಗಳಿಗೆ ಸ್ಫೂರ್ತಿಯಾಗಬೇಕು. ಅವರ ನೆನಪು ಶಾಶ್ವತವಾಗಿ ಉಳಿಯುವಂತಹ ಕೆಲಸವನ್ನು ಸರ್ಕಾರ ಮಾಡಬೇಕು ಎಂದರು.

ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ. ವಿಜಯ್‌ಕುಮಾರ್, ಭಂತೇಜಿ ಸ್ವಾಮೀಜಿ, ಜ್ಞಾನಪ್ರಕಾಶ ಸ್ವಾಮೀಜಿ, ಮಲ್ಲುಂಡಿ ಮಹದೇವಸ್ವಾಮಿ ಮಾತನಾಡಿದರು. ಮುಖಂಡರಾದ ಮಣಿಯಯ್ಯ, ರಂಗಸ್ವಾಮಿ, ರಮೇಶ ಮುದ್ದೇಗೌಡ, ಹೆಳವರಹುಂಡಿ ಸೋಮು, ಎಂ.ಟಿ. ರವಿಕುಮಾರ್, ಅಹಿಂದ ಜವರಪ್ಪ, ಮಂಜುಳಾ ಮಂಜುನಾಥ್, ಮಹದೇವ್, ಸಕ್ಕಳ್ಳಿ ಬಸವರಾಜು, ಕನಕಮೂರ್ತಿ, ಹುಣಸೂರು ಬಸವಣ್ಣ, ಆಪ್ತ ಸಹಾಯಕ ಶಿವಸ್ವಾಮಿ, ನಾಗರಾಜ್ ಉಪಸ್ಥಿತರಿದ್ದರು.

ಸಾತಗಳ್ಳಿ ಬಳಿ 11.66 ಕೋಟಿ ವೆಚ್ಚದ ಕಟ್ಟಡ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆ

ಹಂಚ್ಯಾ-ಸಾತಗಳ್ಳಿ ಎ ವಲಯದ ಮುಡಾ ಸಿಎ ನಿವೇಶನ ಸಂಖ್ಯೆ 5ರ 9 ಎಕರೆ ಜಾಗದಲ್ಲೇ ಸಿ ಅಂಡ್ ಡಿ ತ್ಯಾಜ್ಯ ವಿಲೇವಾರಿಗೆ ಮೈಸೂರು ಮಹಾನಗರ ಪಾಲಿಕೆ ಸೂಚನೆ



ಮೈಸೂರು, ಮೇ 17(ಆರ್‌ಕೆ)- ಬಹು ನಿರೀಕ್ಷಿತ ಕಟ್ಟಡ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸಲು ಮೈಸೂರು ಮಹಾನಗರ ಪಾಲಿಕೆ ಮುಂದಾಗಿದೆ. ಸಾತಗಳ್ಳಿ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಎದುರು ಹಂಚ್ಯಾ-ಸಾತಗಳ್ಳಿ ಬಡಾವಣೆಯ 'ಎ' ವಲಯದಲ್ಲಿರುವ ಮುಡಾ ಸಿಎ ನಿವೇಶನ ಸಂಖ್ಯೆ 5ರ 9 ಎಕರೆ ಖಾಲಿ ಜಾಗದಲ್ಲಿ ಸಿ ಅಂಡ್ ಡಿ (Construction and demolition) ತ್ಯಾಜ್ಯ ಘಟಕ ಸ್ಥಾಪಿಸಲು ಮೈಸೂರು ಮಹಾನಗರ ಪಾಲಿಕೆಯು 11.66 ಕೋಟಿ ರೂ. ವೆಚ್ಚದ ಯೋಜನೆ ರೂಪಿಸಿದೆ.

ಮೈಸೂರು ನಗರದಾದ್ಯಂತ ರಿಂಗ್ ರಸ್ತೆ ಬದಿ, ಖಾಲಿ ಜಾಗ ಸೇರಿದಂತೆ ಎಲ್ಲೆಂದರಲ್ಲಿ ಕಟ್ಟಡ ನಿರ್ಮಾಣ ಮತ್ತು ಡೆಮಾಲಿಷನ್‌ನಿಂದ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸುರಿಯುತ್ತಿರುವುದರಿಂದ ಪರಿಸರ ಹಾಳಾಗುವುದನ್ನು ತಡೆಯಲು ಮುಡಾ ಸಿಎ ನಿವೇಶನವನ್ನು ಪಾಲಿಕೆ ಬಳಸಿಕೊಳ್ಳುತ್ತಿದೆ.

ಅಲ್ಲದೇ ಸ್ವಚ್ಛ ಸರ್ವೇಕ್ಷಣೆ ವೇಳೆ ಎಲ್ಲೆಡೆ ಸುರಿದಿರುವ ಸಿ ಅಂಡ್ ಡಿ ವೇಸ್ಟ್‌ನಿಂದಾಗಿ ಮೈಸೂರು ನಗರಕ್ಕೆ ಅಂಕಗಳು ಕಡಿಮೆಯಾಗಿ ಸ್ವಚ್ಛನಗರ ಪ್ರಶಸ್ತಿ ಕೈತಪ್ಪುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಪಾಲಿಕೆಯು, ಈ ಯೋಜನೆ ಜಾರಿಗೊಳಿಸುತ್ತಿದೆ.

ಈ ನಡುವೆ ಪತ್ರಿಕಾ ಪ್ರಕಟಣೆ ನೀಡಿರುವ ಪಾಲಿಕೆ ಆಯುಕ್ತೆ ಡಾ. ಎನ್. ಎನ್. ಮಧು, ಸಿ ಅಂಡ್ ಡಿ ವೇಸ್ಟ್ ಅನ್ನು ಸಾತಗಳ್ಳಿ 'ಎ' ವಲಯದಲ್ಲಿ ಗುರ್ತಿಸಿರುವ ಮುಡಾ ಸಿಎ ನಿವೇಶನ ಸಂಖ್ಯೆ 5ರ ಜಾಗದಲ್ಲೇ ಸುರಿಯಬೇಕು. ಬೇರೆ ಕಡೆ ಸುರಿದಲ್ಲಿ ಅಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವುದಲ್ಲದೇ, ಭಾರೀ ಪ್ರಮಾಣದ ದಂಡ ವಿಧಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಯೋಜನೆ ಸಂಬಂಧ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಆಯುಕ್ತರು, ಪಿಪಿಪಿ ಮಾದರಿಯಲ್ಲಿ ಘಟಕ ನಿರ್ವಹಣೆ ಮಾಡಲು ಸಂಸ್ಥೆಯೊಂದು ಮುಂದೆ ಬಂದಿದ್ದು, ಮೈಸೂರು ನಗರದಾದ್ಯಂತ ಸುರಿದಿರುವ ಕಟ್ಟಡ ತ್ಯಾಜ್ಯ ತೆರವುಗೊಳಿಸುವ ಜೊತೆಗೆ ಸ್ಥಳಕ್ಕೆ ತಂದು ಹಾಕುವ ತ್ಯಾಜ್ಯವನ್ನು ಬೇರ್ಪಡಿಸಿ ಕಬ್ಬಿಣವನ್ನು, ಕಾಂಕ್ರಿಟ್ ಪುಡಿ ಮಾಡಿ ಎಂ ಸ್ಯಾಂಡ್ ಆಗಿ ಮಾಡಿ ಕೊಡಲಿದೆ ಎಂದರು. ಲೋಕಸಭಾ ಚುನಾವಣಾ ಮಾದರಿ ನೀತಿ ಸಂಹಿತೆ ಮುಗಿಯುತ್ತಿದ್ದಂತೆಯೇ ತ್ಯಾಜ್ಯ ವಿಲೇವಾರಿ ಘಟಕ ನಿರ್ಮಿಸಲು ಟೆಂಡರ್ ಪ್ರಕ್ರಿಯೆ ಆರಂಭಿಸುತ್ತೇವೆ. 11,66, 53,000 ರೂ. ಅಂದಾಜು ವೆಚ್ಚದ ಯೋಜನೆಯಲ್ಲಿ 4,85,64,860 ರೂ. ಸಿವಿಲ್ ಕಾಮಗಾರಿಗೂ, 93,78,000 ರೂ.ಗಳನ್ನು ಸಿ ಅಂಡ್ ಡಿ ವೇಸ್ಟ್ ಪ್ರೊಸೆಸಿಂಗ್ ಸೌಲಭ್ಯಕ್ಕೆ ಮೀಸಲಿರಿಸಲಾಗಿದೆ ಎಂದು ಅವರು ತಿಳಿಸಿದರು.

ಪವಿತ್ರಾ ಜಯರಾಮ್ ಜೊತೆಗಿದ್ದ ಗೆಳೆಯ ಚಂದು ಆತ್ಮಹತ್ಯೆ



ಹೈದರಾಬಾದ್: ಕೆಲವೇ ದಿನಗಳ ಹಿಂದೆ ರಸ್ತೆ ಅಪಘಾತದಲ್ಲಿ ಮೃತಪಟ್ಟ ನಟಿ ಪವಿತ್ರಾ ಜಯರಾಮ್ ಅವರ ಜೊತೆ ಸ್ನೇಹ ಹೊಂದಿದ್ದ ತೆಲುಗು ಕಿರುತೆರೆ ನಟ ಚಂದು ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪವಿತ್ರಾ ಜಯರಾಮ್ ಜೊತೆ ಆಪ್ತವಾಗಿದ್ದ ಚಂದು ಪವಿತ್ರಾ ನಿಧನದ ಬಳಿಕ ತೀವ್ರ ದುಃಖಕ್ಕೆ ಒಳಗಾಗಿದ್ದು, ಅವರು ಹೈದರಾಬಾದ್‌ನ ತಮ್ಮ ಮನೆಯಲ್ಲೇ ನೇಣಿಗೆ ಶರಣಾಗಿದ್ದಾರೆ. ಅವರ ಆತ್ಮಹತ್ಯೆಗೆ ನಿಖರ ಕಾರಣ ಏನು ಎಂಬುದು ಇನ್ನೂ ತಿಳಿದುಬಂದಿಲ್ಲ. 2015ರಲ್ಲಿ ಶಿಲ್ಪಾ ಎಂಬವರನ್ನು ಪ್ರೀತಿಸಿ ಚಂದು ಮದುವೆ ಆಗಿದ್ದರು. ಈ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಹೈದರಾಬಾದ್‌ನ ನಾರಸಿಂಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಅಸಮಾನತೆ ದೂರ ಮಾಡುವ ಬಸವಣ್ಣನವರ ತತ್ವಾದರ್ಶ ಪಾಲಿಸುತ್ತಿಲ್ಲ

ಹಿರಿಯ ರಂಗಕರ್ಮಿ ಬಸವಲಿಂಗಯ್ಯ ಅಸಮಾಧಾನ

ಮೈಸೂರು, ಮೇ17(ಬಿಎಲ್ ಯು)- ಅಸಮಾನತೆ ದೂರ ಮಾಡುವ ಬಸವಣ್ಣನವರ ತತ್ವಾದರ್ಶಗಳನ್ನು ಯಾರೂ ಪಾಲಿಸುತ್ತಿಲ್ಲ ಎಂದು ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರಿನ ಗನ್ ಹೌಸ್ ಬಳಿಯ ಬಸವ ಪುತ್ಥಳಿ ಆವರಣದಲ್ಲಿ ಇಂದು ನಡೆದ ಬಸವ ಜಯಂತಿ ಹಾಗೂ ಬಸವ ಸಾಂಸ್ಕೃತಿಕ ಪುರಸ್ಕಾರ-2024 ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಅಸಮಾನತೆಯ ವಿರುದ್ಧ 12ನೇ ಶತಮಾನದಲ್ಲೆ ಬಸವಣ್ಣನವರು ದನಿ ಎತ್ತಿದರು ಎಂದರು.

ಆದರೆ ಇಂದೂ ಕೂಡ ಸಮ ಸಮಾಜ ನಿರ್ಮಾಣವಾಗಿಲ್ಲ. ಈ ಹಿನ್ನೆಲೆಯಲ್ಲಿ ಬಸವಾದಿ ಶರಣರ ತತ್ವಾದರ್ಶ ಪಾಲಿಸಿದರೆ ಅಸಮಾನತೆ ದೂರ ಮಾಡಬಹುದು. ಈ ದಿಕ್ಕಿನಲ್ಲಿ ಎಲ್ಲರೂ ಸಾಗಬೇಕು ಎಂದು ಸಲಹೆ ನೀಡಿದರು.

ಈ ವೇಳೆ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಸೂರು ಕಲ್ಚರಲ್ ಅಸೋಸಿಯೇಷನ್ ಅಧ್ಯಕ್ಷ ಎ.ಪಿ.ನಾಗೇಶ್, ಆಶಾದಾಯಕ ಸೇವಾ ಟ್ರಸ್ಟ್ ಸಂಸ್ಥಾಪಕ ಸಾ.ಕ.ಸುರೇಶ್, ಪೌರಕಾರ್ಮಿಕ ಮಹಿಳೆ ಸುಶೀಲ ಅವರಿಗೆ ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದಸ್ವಾಮಿ ಬಸವ ಸಾಂಸ್ಕೃತಿಕ ಪುರಸ್ಕಾರ ಪ್ರದಾನ ಮಾಡಿದರು.

ಸಂಸ್ಕೃತಿ ಪೋಷಕ ಡಾ.ಕೆ.ರಘುರಾಂ ವಾಜಪೇಯಿ, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್. ಶಿವರಾಮು, ಜಿಲ್ಲಾ ವೀರಶೈವ ಲಿಂಗಾಯಿತ ಮಹಾಸಭಾ ಅಧ್ಯಕ್ಷ ಎಸ್.ಶಿವಮೂರ್ತಿ ಕಾನ್ಯ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಗನ್‌ಹೌಸ್ ಬಳಿಯ ಬಸವ ಪುತ್ಥಳಿ ಆವರಣದಲ್ಲಿ ಶುಕ್ರವಾರ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಸಾಧಕರಿಗೆ ಬಸವ ಸಾಂಸ್ಕೃತಿಕ ಪುರಸ್ಕಾರ ನೀಡಿ ಗೌರವಿಸಲಾಯಿತು.

ಮೈಸೂರು ಮಿತ್ರ

ರಾಷ್ಟ್ರೀಯ ಹೆದ್ದಾರಿ ಸರ್ವೇಗೆ ತಡೆಯೊಡ್ಡಿದ ರೈತರು

ಪ್ರತಿ ಎಕರೆಗೆ 40 ಲಕ್ಷ ಪರಿಹಾರ ನೀಡುವಂತೆ ಆಗ್ರಹ



ಹಿರೀಕ್ಯಾತನಹಳ್ಳಿ, ಮೇ 17– ಹುಣಸೂರು ತಾಲೂಕಿನ ಅಗ್ರಹಾರ ಗ್ರಾಮದ ಮೂಲಕ ಹಾದು ಹೋಗಿರುವ ಶ್ರೀರಂಗಪಟ್ಟಣ– ಕುಶಾಲನಗರ ನೂತನ ರಾಷ್ಟ್ರೀಯ ಹೆದ್ದಾರಿ 275ರ ಕಾಮಗಾರಿ ಸರ್ವೇಗೆ ಆಗಮಿಸಿದ ಅಧಿಕಾರಿಗಳನ್ನು ಗ್ರಾಮಸ್ಥರು ಹಾಗೂ ರೈತರು ತಡೆದು ಆಕ್ರೋಶ ವ್ಯಕ್ತಪಡಿಸಿದರು.

ರೈತ ಮುಖಂಡ ರಾಮೇಗೌಡ ಮಾತನಾಡಿ, ನಮ್ಮ ಗ್ರಾಮದ ಸುತ್ತಮುತ್ತ ಒಂದು ಎಕರೆ ಭೂಮಿಗೆ ಖಾಸಗಿಯವರು 35 ರಿಂದ 40 ಲಕ್ಷ ನೀಡಿ ಖರೀದಿಸುತ್ತಾರೆ. ಆದರೆ ಕೇಂದ್ರ ಸರ್ಕಾರ ಒಂದು ಎಕರೆಗೆ ಕೇವಲ 9.25 ಲಕ್ಷ ರೂ. ನೀಡುವ ಮೂಲಕ ಅನ್ಯಾಯ ಮಾಡುತ್ತಿದೆ. ಹೀಗಾಗಿ ಕೇಂದ್ರ ಸರ್ಕಾರ ಪ್ರತಿ ಎಕರೆ ಜಮೀನಿಗೆ 40 ಲಕ್ಷ ಪರಿಹಾರದ ಜೊತೆಗೆ ಭೂಮಿ ಕಳೆದುಕೊಂಡ ಕುಟುಂಬಕ್ಕೆ ಸರ್ಕಾರಿ ನೌಕರಿ ನೀಡಬೇಕು. ಇಲ್ಲದಿದ್ದರೇ ರೈತರ ಉಳಿವೆಗಾಗಿ ಪರ್ಯಾಯ ಭೂಮಿ ವ್ಯವಸ್ಥೆ ಮಾಡಬೇಕಾಗಿ ಸ್ಥಳಕ್ಕೆ ಆಗಮಿಸಿದ ಅಧಿಕಾರಿಗಳಿಗೆ ಆಗ್ರಹಿಸಿದರು.

ನಂತರ ಅಧಿಕಾರಿಗಳು ರೈತರನ್ನು ಸಮಾಧಾನ ಪಡಿಸಿ ತಮ್ಮ ಬೇಡಿಕೆಯನ್ನು ಸಂಬಂಧಪಟ್ಟ ಇಲಾಖೆ ಮೇಲಧಿಕಾರಿಗಳಿಗೆ ತಿಳಿಸುವುದಾಗಿ ಭರವಸೆ ನೀಡಿದರು. ರೈತರ ಆಕ್ರೋಶಕ್ಕೆ ಮಣಿದ ಅಧಿಕಾರಿಗಳು ಸರ್ವೇ ಕಾರ್ಯ ಸ್ಥಗಿತಗೊಳಿಸಿ ತೆರಳಿದರು. ಸ್ಥಳಕ್ಕೆ ಡಿವೈಎಸ್ಪಿ ಗೋಪಾಲಕೃಷ್ಣ, ಬಿಳಿಕೆರೆ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಲೋಲಾಕ್ಷಿ, ಗಾವಡಗೆರೆ ಉಪ ತಹಸೀಲ್ದಾರ್ ಅರುಣ್ ಕುಮಾರ್, ರಾಜಸ್ವ ನಿರೀಕ್ಷಕ ಹೇಮಂತ್, ಗ್ರಾಮ ಆಡಳಿತಾ ಧಿಕಾರಿ ವಿಶಾಲ್, ಭೂಮಿ ಕಳೆದುಕೊಂಡ ರೈತರಾದ ರವಿ, ಧನಂಜಯ, ಗೋಪಾಲೇಗೌಡ, ರಮೇಶ್, ಸವಲೇ ಗೌಡ, ಪ್ರಕಾಶ್ ಸೇರಿದಂತೆ 25ಕ್ಕೂ ಹೆಚ್ಚು ರೈತರು ಹಾಜರಿದ್ದರು.

ಭಾರತ ಪ್ರಾಚೀನ ಇತಿಹಾಸ ಹೊಂದಿರುವ ದೇಶ



ನಂಜನಗೂಡು, ಮೇ 17– ಭಾರತ ಪ್ರಾಚೀನ ಇತಿಹಾಸ ಹೊಂದಿರುವ ದೇಶ ಎಂದು ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಶೆಲ್ವಪಿಳ್ಳೆ ಅಯ್ಯಂಗಾರ್ ತಿಳಿಸಿದರು.

ತಾಲೂಕಿನ ಹುಲ್ಲಹಳ್ಳಿ ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ರಾಜ್ಯ ಪತ್ರಾಗಾರ ಇಲಾಖೆ ವತಿಯಿಂದ ಆಯೋಜಿಸಿದ್ದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯನ ದೇಹದಲ್ಲಿ ಅಂಗಾಂಗಗಳು ಇರುವಂತೆ ದೇವಸ್ಥಾನಕ್ಕೂ ಅದರದೇ ಆದ ವಾಸ್ತು ವಿಭಾಗಗಳಿವೆ. ನಂಜನಗೂಡಿನ ನಂಜುಂಡೇಶ್ವರ ದೇವಾಲಯ ಕರ್ನಾಟಕದ ಬಹುದೊಡ್ಡ ದೇವಾಲಯ. ಸಾಮಾನ್ಯವಾಗಿ ಕಲ್ಲಿನಿಂದ ಹಾಗೂ ಗಾರೆ ಗಚ್ಚಿನಿಂದ ನಿರ್ಮಿಸಿದ ದೇವಾಲಯಗಳು 600 ವರ್ಷಗಳಿಗೂ ಹೆಚ್ಚು ಕಾಲ ಸುಸ್ಥಿತಿಯಲ್ಲಿರುತ್ತವೆ. ನಮ್ಮ ಪೂರ್ವಜರು ಕಲ್ಲು ಮತ್ತು ಗಾರೆಗಳನ್ನು ಹೆಚ್ಚಾಗಿ ಬಳಸಿ ದೇವಾಲಯಗಳನ್ನು ವೈಜ್ಞಾನಿಕವಾಗಿ ರಚನೆ ಮಾಡಿದ್ದಾರೆ ಎಂದು ತಿಳಿಸಿದರು.

ಗ್ರಾಮೀಣ ಭಾಗದಲ್ಲಿ ವಿಚಾರ ಸಂಕಿರಣ ಆಯೋಜಿಸುವುದರಿಂದ ವಿದ್ಯಾರ್ಥಿಗಳು ಸ್ಥಳೀಯ ಇತಿಹಾಸದ ಬಗ್ಗೆ ಹೆಚ್ಚು ತಿಳಿಯಲು ಸಾಧ್ಯವಾಗುತ್ತದೆ. ಅಲ್ಲದೇ ಶಿಕ್ಷಣದ ಕಡೆಗೆ ಹೆಚ್ಚು ಒತ್ತು ನೀಡಿ ಉದ್ಯೋಗ ಪಡೆಯಲು ಸಹಕಾರಿಯಾಗುತ್ತದೆ. ವಿದ್ಯಾರ್ಥಿಗಳಿಗೆ ನಮ್ಮ ಸಂಸ್ಕೃತಿ ಬಗ್ಗೆ ತಿಳಿಸುವುದರಿಂದ ಅವರಲ್ಲಿ ರಾಷ್ಟ್ರೀಯ ಭಾವೈಕ್ಯತೆ ಮೂಡುತ್ತದೆ. ಪೂರ್ವಜರ ಬಗ್ಗೆ ಅಭಿಮಾನ ಉಂಟಾಗುತ್ತದೆ. ಹೀಗಾಗಿ ವಿದ್ಯಾರ್ಥಿಗಳು ದೇವಸ್ಥಾನಗಳಿಗೆ ಭೇಟಿ ನೀಡಿ ಅಲ್ಲಿನ ಮಹತ್ವ ಅರಿಯುವುದು ಅವಶ್ಯಕ ಎಂದರು. ಕಾರ್ಯಕ್ರಮದಲ್ಲಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಬಿ.ಎಂ. ನಾಗರಾಜ್, ಡಾ.ರವಿಕುಮಾರ್, ಡಾ.ಸಂಧ್ಯಾ ರಾಣಿ, ಡಾ.ಬಿಂದು, ಡಾ.ಶಿವರಾಜು, ಲೋಕೇಶ್, ಡಾ.ಜಂಬುಕುಮಾರ್, ಪರಶಿವಮೂರ್ತಿ, ಶಾಮಸುಂದರ್, ಮಂಜುನಾಥ್, ತಿಮ್ಮೇಗೌಡ, ಹೊನ್ನೇಗೌಡ, ಸಂತೋಷ್ ಉಪಸ್ಥಿತರಿದ್ದರು.

ನಾಳೆ ಸಂಸದ ವಿ.ಶ್ರೀನಿವಾಸಪ್ರಸಾದ್ ನುಡಿ ನಮನ ಕಾರ್ಯಕ್ರಮ



ಸುದ್ದಿಗೋಷ್ಠಿಯಲ್ಲಿ ಹೆಚ್.ಸಿ.ನರಸಿಂಹಮೂರ್ತಿ ಮಾತನಾಡಿದರು.

ಹೆಚ್.ಡಿ.ಕೋಟೆ, ಮೇ 17– ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಮೇ 19ರಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ನುಡಿನಮನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಹೆಚ್.ಸಿ. ನರಸಿಂಹಮೂರ್ತಿ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿ.ಶ್ರೀನಿವಾಸ್‌ಪ್ರಸಾದ್ ಅವರು ತಮ್ಮ 50 ವರ್ಷಗಳ ಸುದೀರ್ಘ ರಾಜಕಾರಣದಲ್ಲಿ ಯಾವುದೇ ಕಪ್ಪುಚುಕ್ಕೆ ಇಲ್ಲದಂತೆ ಜನಸೇವೆ ಮಾಡಿ ಮನೆ ಮಾತಾಗಿದ್ದರು. ಕಳಂಕರಹಿತ ರಾಜಕಾರಣಿಯಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮಂತ್ರಿಯಾಗಿ ಜನಸೇವೆ ಮಾಡಿ ಸ್ವಾಭಿಮಾನಿ ರಾಜಕಾರಣಿಯಾಗಿದ್ದರು. ಹೀಗಾಗಿ ಅವರಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ಪಕ್ಷಬೇಧವಿಲ್ಲದೇ ಎಲ್ಲಾ ಸಮುದಾಯದವರ ಸಹಕಾರದೊಂದಿಗೆ ನುಡಿನಮನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಮೈಸೂರಿನ ಬೌದ್ಧ ವಿಹಾರದ ಕಲ್ಯಾಣ ಸಿರಿ ಬಂತೇಜಿ, ಅಂತರಸಂತೆ ಬೌದ್ಧ ವಿಹಾರದ ಗೌತಮಿ ಬಂತೆ, ಮೈಸೂರಿನ ಉರಿಲಿಂಗ ಪೆದ್ದಿ ಮಠದ ಜ್ಞಾನ ಪ್ರಕಾಶ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಅನಿಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ವಿ.ಶ್ರೀನಿವಾಸ್‌ಪ್ರಸಾದ್ ಕುರಿತು ನಿವೃತ್ತ ಪ್ರಾಧ್ಯಾಪಕ ನೀಲಗಿರಿ ತಳವಾರ್ ಮಾತನಾಡಲಿದ್ದು, ಮುಖ್ಯ ಅಥಿತಿಗಳಾಗಿ ವಿ.ಶ್ರೀನಿವಾಸ್‌ಪ್ರಸಾದ್ ಧರ್ಮಪತ್ನಿ ಭಾಗ್ಯಲಕ್ಷ್ಮಿ, ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಆಗಮಿಸಲಿದ್ದಾರೆ ಎಂದು ತಿಳಿಸಿದರು. ಗೋಷ್ಠಿಯಲ್ಲಿ ಸರಗೂರು ತಾಲೂಕು ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಸರಗೂರು ಶಿವಣ್ಣ, ಪ್ರಧಾನ ಕಾರ್ಯದರ್ಶಿ ಮಲ್ಲೇಶ್, ಹೈರಿಗೆ ಶಿವರಾಜು, ಸದಾಶಿವ, ವಕೀಲರಾದ ಸಿದ್ದಪ್ಪಾಜಿ, ರಂಗಸ್ವಾಮಿ ಇದ್ದರು.

ವಿಜೃಂಭಣೆಯ ಕಾಳಮ್ಮನವರ ರಥೋತ್ಸವ



ಹೆಚ್.ಡಿ. ಕೋಟೆಯ ಬೆಳಗನಹಳ್ಳಿ ಗ್ರಾಮದಲ್ಲಿ ಕಾಳಮ್ಮನವರ ರಥೋತ್ಸವ ಮತ್ತು ತಂಪೋತ್ಸವ ವಿಜೃಂಭಣೆಯಿಂದ ನೆರವೇರಿತು.

ಹೆಚ್.ಡಿ.ಕೋಟೆ, ಮೇ 17– ತಾಲೂಕಿನ ಬೆಳಗನಹಳ್ಳಿಯಲ್ಲಿ ಕಾಳಮ್ಮನವರ ರಥೋತ್ಸವ ಹಾಗೂ ತಂಪೋತ್ಸವ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವ ಅಂಗವಾಗಿ ಮುಂಜಾನೆಯಿಂದಲೇ ಮಾರಮ್ಮನವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯಲ್ಲಿ ತೆರಳಿ ಸತ್ತಿಗೆ, ಸೂರಪಾನಿ, ಮಂಗಳ ವಾದ್ಯದೊಡನೆ ಹೊಸತೊರವಳ್ಳಿ ಮಾರ್ಗವಾಗಿ ಕಳಸಗಳನ್ನು ತರಲಾಯಿತು. ಬಳಿಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ತೇರನ್ನು ಎಳೆಯಲಾಯಿತು. ಈ ವೇಳೆ ಮಹಿಳೆಯರು ಬಾಯಿಗೆ ಬೀಗ ಹಾಕಿಸಿಕೊಂಡು ಮಾರಮ್ಮನಿಗೆ ಹರಕೆ ತೀರಿಸಿದರು.

ರಥೋತ್ಸವ ಬಳಿಕ ತಂಪಿನ ಪೂಜೆ ನಡೆಯಿತು. ಮಹಿಳೆಯರು ಅಕ್ಕಿ, ಎಳ್ಳು ತಂಬಿಟ್ಟು, ಗಣಗಲೆ ಹೂವಿನಿಂದ ಮಾಡಿದ ಹಾರ ತಂದು ವಿಶೇಷವಾಗಿ ಪೂಜೆ ಸಲ್ಲಿಸಿದರು. ರಥೋತ್ಸವ ಅಂಗವಾಗಿ ಕಾಳಮ್ಮ ದೇವಿಗೆ ಹಲಸಿನ ಹಣ್ಣು ಹಾಗೂ ಬಾಳೆ ಹಣ್ಣಿನ ಎಡೆ ಇಡಲಾಯಿತು. ನಂತರ ಕಾಳಮ್ಮನವರ ರಥದ ಬಳಿ ಪೂಜೆ ಸಲ್ಲಿಸಿ ಬಳಿಕ ತಂಬಿಟ್ಟನ್ನು ನೆರೆಹೊರೆಯವರಿಗೆ ಹಂಚಲಾಯಿತು. ಸಾವಿರಾರು ಭಕ್ತರು ಮಾರಮ್ಮನ ದರ್ಶನ ಪಡೆದು ಪುನೀತರಾದರು.

ಕರಿಮುದ್ದನಹಳ್ಳಿ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹುಣಸೂರು, ಮೇ 17– ತಾಲೂಕಿನ ಬಿಳಿಕೆರೆ ಹೋಬಳಿ ಕರಿಮುದ್ದನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆ.ಶಿವಪ್ಪ ಹಾಗೂ ಉಪಾಧ್ಯಕ್ಷರಾಗಿ ಕೆ.ಜೆ.ಶಿವಪ್ಪ ಅವಿರೋಧ'ವಾಗಿ ಆಯ್ಕೆಯಾಗಿದ್ದಾರೆ.

ಚುನಾವಣೆ ಪ್ರಕ್ರಿಯೆಯಲ್ಲಿ ನಿರ್ದೇಶಕರಾದ ನಂಜುಂಡೇಗೌಡ, ವಸಂತಮ್ಮ, ದಾಸನಾಯಕ, ಮಹದೇವ, ಮಂಜುರಾಜೇಅರಸ್, ಪುಟ್ಟಚೆನ್ನಚಾರಿ, ಕೃಷ್ಣಸ್ವಾಮಿ ಭಾಗವಹಿಸಿದ್ದರು. ನೂತನ ಅಧ್ಯಕ್ಷ, ಉಪಾಧ್ಯಕ್ಷರು ಆಯ್ಕೆಯಾಗುತ್ತಿದ್ದಂತೆಯೇ ಸಂಘದ ಆವರಣದಲ್ಲಿ ನೆರೆದಿದ್ದ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಿಸಿದರು.

ಈ ವೇಳೆ ಮುಖಂಡರಾದ ದೇವರಾಜ್, ಗಾಗೇನಹಳ್ಳಿ ಕುಮಾರ್, ಗುಣಶೇಖರ್, ಗೌರಿಶಂಕರ್, ಆರ್.ಸ್ವಾಮಿ, ಪ್ರಕಾಶ್ ನಿಂಗರಾಜ ಅರಸ್, ಶಾಮಿಯಾನ ಮಹದೇವ್, ಧರ್ಮಾಪುರ ಶೇಖರ್, ಬಸವನಹಳ್ಳಿ ಸ್ವಾಮಿಗೌಡ, ನಾಡಪ್ಪನಹಳ್ಳಿ ದೇವರಾಜ್, ಹನುಮಂತಪುರ ಮಹದೇವ್, ಕಲ್ಕುಣಿಕೆ ರಾಘು, ಹಗರನಹಳ್ಳಿ ಕುಮಾರ್, ರಂಗರಾಜ್, ಗ್ರಾಪಂ ಸದಸ್ಯರಾದ ಮಹದೇವ, ಮಹೇಶ್, ಪ್ರಕಾಶ ಸೇರಿದಂತೆ ಇತರರಿದ್ದರು.

ಎಸ್‌ಎಸ್‌ಎಲ್‌ಸಿಯಲ್ಲಿ ತಿ.ನರಸೀಪುರ ಜಿಲ್ಲೆಗೆ ಪ್ರಥಮ

ಶಿಕ್ಷಕರು, ಪೋಷಕರಿಗೆ ಅಭಿನಂದನೆ ಸಲ್ಲಿಸಿದ ಬಿಇಓ



ಗುರುಭವನದಲ್ಲಿ ಬಿಇಓ ಜಿ.ಶೋಭಾ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಮೇ 17– ಪ್ರಾಥಮಿಕ ಶಾಲಾ ಹಂತದಲ್ಲಿ ಮಕ್ಕಳ ಕಲಿಕೆಗೆ ಉತ್ತಮ ಅಡಿಪಾಯ ಹಾಕಿದಾಗ ಮಾತ್ರ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಫಲಿತಾಂಶ ಪಡೆಯಲು ಸಾಧ್ಯ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಶೋಭಾ ತಿಳಿಸಿದರು.

ಪಟ್ಟಣದ ಗುರುಭವನದಲ್ಲಿ ನಡೆದ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಸಭೆ ವೇಳೆ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ತಿ.ನರಸೀಪುರ ತಾಲೂಕು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಶಿಕ್ಷಣದ ಗುಣಮಟ್ಟ ಕಾಪಾಡಲು ಪ್ರಾಥಮಿಕ ಶಾಲೆಗಳಲ್ಲಿ ಭದ್ರ ಅಡಿಪಾಯ ಅಗತ್ಯ. ಪ್ರಾಥಮಿಕ ಶಾಲಾ ಶಿಕ್ಷಕರು ಶ್ರಮ ವಹಿಸಿ ಕಲಿಸಿದಾಗ ಅದರ ಫಲ ಫಲಿತಾಂಶದಲ್ಲಿ ಸಿಗುತ್ತಿದೆ. ಈ ಬಾರಿ ತಿ.ನರಸೀಪುರ ತಾಲೂಕು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.93.3ರಷ್ಟು ಫಲಿತಾಂಶ ಪಡೆಯಲು ಪ್ರಾಥಮಿಕ ಶಾಲಾ ಶಿಕ್ಷಕರು, ಇಲಾಖೆ ಅಧಿಕಾರಿಗಳು, ಪ್ರೌಢಶಾಲಾ ಮುಖ್ಯ ಶಿಕ್ಷಕರು, ವಿಷಯ ಶಿಕ್ಷಕರು ಹಾಗೂ ಪೋಷಕರ ಸಹಕಾರ ಕಾರಣ. ಇದಕ್ಕಾಗಿ ಎಲ್ಲರಿಗೂ ಅಭಿನಂದನೆ ಸಲ್ಲಿಸುತ್ತೇನೆ. ಫಲಿತಾಂಶ ನಮ್ಮ ಜವಾಬ್ದಾರಿ ಹೆಚ್ಚಿಸಿದೆ. ಮುಂದಿನ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಮತ್ತಷ್ಟು ವಿಧಾನಗಳ ಮೂಲಕ ಫಲಿತಾಂಶದ ಪ್ರಮಾಣ ಹೆಚ್ಚಿಸಿಕೊಳ್ಳಲು ಶ್ರಮಿಸಬೇಕಿದೆ ಎಂದರು.

ಈ ವೇಳೆ ಕ್ಷೇತ್ರ ಸಂಪನ್ಮೂಲ ಸಮನ್ವಯ ಅಧಿಕಾರಿ ನಾಗೇಶ್, ಸಹಾಯಕ ನಿರ್ದೇಶಕ ಮದ್ದಾನಪ್ಪ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ. ಶಿವಶಂಕರಮೂರ್ತಿ, ಕಾರ್ಯದರ್ಶಿ ಸುಬ್ರಹ್ಮಣ್ಯ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಡಿ.ಮಾದಪ್ಪ, ಶಿಕ್ಷಕರ ಸಂಘದ ಕಾರ್ಯದರ್ಶಿ ಕುಪ್ಯ ಪುಟ್ಟಸ್ವಾಮಿ, ಉಪಾಧ್ಯಕ್ಷ ಟಿ.ಎನ್. ನಾಗೇಂದ್ರ, ಬಿಆರ್‌ಪಿಗಳಾದ ಕೆ.ಪಿ.ಮಹದೇವಸ್ವಾಮಿ, ಸಿರಿದೇವಿ, ಮೇರಿ ಶೈಲಶ್ರೀ, ದೈಹಿಕ ಶಿಕ್ಷಣ ಪರಿವೀಕ್ಷಕ ಮರಿಸ್ವಾಮಿ, ಬಿಐಆರ್‌ಟಿ ವೆಂಕಟೇಶ್ ಇದ್ದರು.

ಕೆ.ಆರ್.ನಗರದಲ್ಲಿ ವರ್ಗಾವಣೆಗೊಂಡ ನ್ಯಾಯಾಧೀಶರಿಗೆ ಸನ್ಮಾನ



ಲೋಕಾಯುಕ್ತ ನ್ಯಾಯಾಲಯಕ್ಕೆ ವರ್ಗಾವಣೆಗೊಂಡ ನ್ಯಾಯಾಧೀಶೆ ಪವಿತ್ರ ಅವರನ್ನು ಸನ್ಮಾನಿಸಲಾಯಿತು.

ಕೆ.ಆರ್.ನಗರ, ಮೇ 17– ಚಿಕ್ಕ ವಯಸ್ಸಿಗೆ ನ್ಯಾಯಾಧೀಶರಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುವ ಜೊತೆಗೆ ವಕೀಲರ ವಿಶ್ವಾಸ ಗಳಿಸಿರುವ ಪವಿತ್ರ ಅವರು ಮುಂದೊಂದು ದಿನ ಹೈಕೋರ್ಟ್ ನ್ಯಾಯಾಧೀಶರಾಗುತ್ತಾರೆ ಎಂದು ಹಿರಿಯ ಶ್ರೇಣಿ ನ್ಯಾಯಧೀಶ ಅರವಿಂದ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ವಕೀಲರ ಸಭಾಂಗಣದಲ್ಲಿ ಲೋಕಾಯುಕ್ತ ನ್ಯಾಯಾಲಯಕ್ಕೆ ವರ್ಗಾವಣೆಗೊಂಡ ನ್ಯಾಯಾಧೀಶೆ ಪವಿತ್ರ ಮತ್ತು ಅವರ ಪತಿ ವಕೀಲ ಕಿರಣ್ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ನ್ಯಾಯಾಧೀಶೆ ಪವಿತ್ರ ಅತ್ಯಂತ ಅನುಭವಿಯಾಗಿದ್ದು, ಇತರ ನ್ಯಾಯಾಧೀಶರಿಗೂ ಸಹಕಾರ ಕೊಡುವ ಜೊತೆಗೆ ವಕೀಲರಿಗೂ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ಅವರಿಗೆ ನೀಡಿದ ಸಹಕಾರವನ್ನು ಮುಂದೆ ಬರುವ ನ್ಯಾಯಾಧೀಶರು ಹಾಗೂ ನನಗೂ ನೀಡುವಂತೆ ತಿಳಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ನ್ಯಾಯಾಧೀಶೆ ಪವಿತ್ರ, ಅತ್ಯಂತ ಹಿರಿಯ ವಕೀಲರಿರುವ ಈ ನ್ಯಾಯಾಲಯದಲ್ಲಿ ಕಾರ್ಯ ನಿರ್ವಹಿಸಿರುವುದು ನನಗೆ ಹೆಮ್ಮೆಯ ವಿಷಯವಾದರೂ ನನ್ನನ್ನು ಇಷ್ಟೊಂದು ಪ್ರೀತಿ ವಿಶ್ವಾಸದಿಂದ ಗೌರವಿಸುತ್ತಿರುವ ನಿಮ್ಮನ್ನು ಮರೆಯಲು ಸಾಧ್ಯವಿಲ್ಲ. ವಕೀಲರ ವೃತ್ತಿ ಅತ್ಯಂತ ಶ್ರೇಷ್ಠವಾಗಿದ್ದು, ಇಲ್ಲಿನ ಯಾವ ವಕೀಲರೂ ಇಲ್ಲಿವರೆಗೆ ನ್ಯಾಯಾಧೀಶರಾಗದಿರುವುದು ನೋವಿನ ವಿಷಯ. ಮುಂಬರುವ ದಿನಗಳಲ್ಲಿ ನಿಮ್ಮ ಸಂಘದಿಂದ ಯಾರಾದರೊಬ್ಬರೂ ನ್ಯಾಯಾಧೀಶರಾಗಬೇಕು ಎಂದು ಸಲಹೆ ನೀಡಿದರು.

ವಕೀಲರ ಸಂಘದ ಮಾಜಿ ಅಧ್ಯಕ್ಷ ದಿಲೀಪ್ ಮಾತನಾಡಿ, ನ್ಯಾಯಧೀಶೆ ಪವಿತ್ರ ಅವರು ನಮ್ಮ ನ್ಯಾಯಾಲಯಕ್ಕೆ ಬಂದು ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಅವರು ತಾಲೂಕಿನ 34 ಗ್ರಾಪಂನ 135 ಹಳ್ಳಿಗಳಲ್ಲಿ ಕಾರ್ಯಕ್ರಮ ಆಯೋಜಿಸಿ ಜನರಿಗೆ ಅರಿವು ಮೂಡಿಸಿದ್ದಾರೆ ಎಂದರು.

ತಾಲೂಕಿನ ವಿವಿಧ ಇಲಾಖೆ ಅಧಿಕಾರಿಗಳು ಜನರಿಗೆ ಪರಿಚಯವಿರುತ್ತಾರೆ. ಆದರೆ ನ್ಯಾಯಾಧೀಶರೊಬ್ಬರು ಜನಸಾಮಾನ್ಯರಿಗೆ ಪರಿಚಿತರಾಗಿದ್ದು ಇದೇ ಮೊದಲು. ಕೇವಲ ಕಾನೂನು ಅರಿವು ನೆರವು ಕಾರ್ಯಕ್ರಮಗಳಲ್ಲದೇ ವಕೀಲರ ಜೊತೆ ಅತ್ಯಂತ ವಿಶ್ವಾಸದಿಂದ ನಡೆದುಕೊಂಡು ಹಿರಿಯ ವಕೀಲರನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರು. ಕೇವಲ ನ್ಯಾಯಾಧೀಶರಾಗಿ ಕರ್ತವ್ಯ ನಿರ್ವಹಿಸದೆ ಮನವೀಯತೆಯಿಂದ ಕಾರ್ಯ ನಿರ್ವಹಿಸಿ ನ್ಯಾಯಾಲಯಕ್ಕೆ ಬಂದ ಕಕ್ಷಿದಾರರಿಗೆ ಕಾನೂನಿನ ಅಡಿ ಸಹಾಯ ಮಾಡುವ ಜೊತೆಗೆ ರಾಜಿ ಸಂಧಾನ ಮಾಡಿಸಿದ ಕೀರ್ತಿಗೆ ಪಾತ್ರರಾಗಿರುವ ನ್ಯಾಯಾಧೀಶೆ ಪವಿತ್ರ ಅವರ ವರ್ಗಾವಣೆ ದುಃಖಕರ ವಿಚಾರ. ಆದರೂ ಮುಂದಿನ ದಿನಗಳಲ್ಲಿ ಅವರು ಇನ್ನೂ ಹೆಚ್ಚಿನ ಕೆಲಸ ಮಾಡುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸಿದರು.

ಕಾರ್ಯಕ್ರಮದಲ್ಲಿ ವಕೀಲ ತಿಮ್ಮಪ್ಪ, ಕೃಷ್ಣರಾಜ ಅರಸ್, ರಾಮೇಗೌಡ, ಮಹದೇವಪ್ಪ, ರುದ್ರಮೂರ್ತಿ, ಗೋವಿಂದ ರಾಜು, ಶರತ್‌ಚಂದ್ರ ಅರಸ್, ವೇದಾವತಿ ಮಾತನಾಡಿದರುವು ವೇದಿಕೆಯಲ್ಲಿ ನ್ಯಾಯಾಧೀಶರ ಪತಿ ಕಿರಣ್, ಧರ್ಮ, ಶಿವಶಂಕರ್, ಧನಲಕ್ಷ್ಮಿ, ಶಿವರಾಜ್ , ಮಹೇಶ್, ಪರಮೇಶ್, ವೀರಭದ್ರಪ್ಪ, ದಿನೇಶ್ ಸೇರಿದಂತೆ ಇನ್ನಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಕಿರಾತಕ 2 (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಸ್ಟಾರ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಗಧೀರ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಇಂಗ ನಾನ್ ಥಾನ್ ಕಿಂಗು (ತ)	4 ಪ್ರದರ್ಶನಗಳು
ಸಂಗಂ	
ಕೃಷ್ಣ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಯುವ (ಕ)	4 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಇಫ್ 2024 (ಇಂ): ಬೆ.11.30ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಮ.1.45ಕ್ಕೆ, ದಿ ಬಾಯ್ ಅಂಡ್ ದಿ ಹೆರಾನ್ (ಜ): ಸಂ.4.45ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.7.20ಕ್ಕೆ,
ಸ್ಕ್ರೀನ್ 2	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.55ಕ್ಕೆ, A (ಕ): ಮ.1.20ಕ್ಕೆ, ಶ್ರೀಕಾಂತ್ (ಹಿಂ): ಸಂ.4.25ಕ್ಕೆ, ರಾಮನ ಅವತಾರ (ಕ): ರಾ.7.05ಕ್ಕೆ, ಸುರೇಶಿಂತೆಯುಂ ಸುಮಲತಾಯುದೆಯುಂ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಸ್ವಚ್ ಕೇಸ್ ಎನ್ (ಕ): ಬೆ.10.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.1.15ಕ್ಕೆ, ರಾ.7.20ಕ್ಕೆ, ಕೃಷ್ಣ ನೀ ಬೇಗನೆ ಬಾರೋ (ಕ): ಸಂ.4.15ಕ್ಕೆ, ಅಪರಿಚಿತುಡು (ತೆ): ರಾ.10ಕ್ಕೆ.
ಸ್ಕ್ರೀನ್ 4	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.50ಕ್ಕೆ, ಮ.12.55ಕ್ಕೆ, ಮ.3ಕ್ಕೆ, ಸಂ.5.05ಕ್ಕೆ, ರಾ.10.05ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ರಾ.7.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ,
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, A (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಮನ ಅವತಾರ (ಕ): ಮ.1.30ಕ್ಕೆ, ಸಂ.4.20ಕ್ಕೆ, ರಣಹದ್ದು (ಕ): ರಾ.7.10ಕ್ಕೆ.
ಸ್ಕ್ರೀನ್ 2	ಅರಮನೈ 4 (ತ): ರಾ.7ಕ್ಕೆ.
ಸ್ಕ್ರೀನ್ 3	ಗುರುವಾಯೂರಂಬಲ ನಡಾಯಿಲ್ (ಮ): ರಾ.7ಕ್ಕೆ.
ಸ್ಕ್ರೀನ್ 4	ಅರಮನೈ 4 (ತ): ಮ.1.30ಕ್ಕೆ, ಕಿರಾತಕ 2 (ಕ): ಸಂ.4.25ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ರಾ.7.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬನ್ನೂರಿನಲ್ಲಿ ರಾಷ್ಟ್ರೀಯ ಡೆಂಗ್ಯೂ ದಿನಾಚರಣೆ



ಬನ್ನೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ರಾಷ್ಟ್ರೀಯ ಡೆಂಗ್ಯೂ ದಿನಾಚರಣೆ

ಬನ್ನೂರು, ಮೇ 17– ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಆಡಳಿತಾಧಿಕಾರಿ ಡಾ. ಮಾಲತೇಶ್ ಹಾವನೂರ್ ನೇತೃತ್ವದಲ್ಲಿ ರಾಷ್ಟ್ರೀಯ ಡೆಂಗ್ಯೂ ದಿನಾಚರಣೆ ನಡೆಯಿತು.

ನಂತರ ಮಾತನಾಡಿದ ಡಾ.ಮಾಲತೇಶ್ ಹಾವನೂರ್ ಅವರು, ಡೆಂಗ್ಯೂ ತಡೆಗಟ್ಟಲು ನಾವೆಲ್ಲರೂ ನಮ್ಮ ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದರು.

ಕಲುಷಿತ ನೀರು ಒಂದೆಡೆ ನಿಲ್ಲುವುದರಿಂದ ಅಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುವುದರಿಂದ ಒಂದೆಡೆ ನೀರು ನಿಲ್ಲಲ್ಲು ಬಿಡಬಾರದು. ಮನೆ ಮತ್ತು ಇತರ ಪ್ರದೇಶಗಳಲ್ಲಿ ಸೊಳ್ಳೆಗಳನ್ನು ನಿಯಂತ್ರಿಸಲು ಸೊಳ್ಳೆ ಪರದೆ ಮತ್ತು ಸೊಳ್ಳೆ ಬತ್ತಿಗಳನ್ನು ಉಪಯೋಗಿಸಬೇಕು. ಅತಿಯಾದ ತಲೆ ನೋವು, ಜ್ವರ ಬರುವುದು, ಮೈ ಮೇಲೆ ಗುಳ್ಳೆ ಕಾಣಿಸಿಕೊಳ್ಳುವುದು, ಕಣ್ಣಿನ ಹಿಂಭಾಗ ನೋವು ಬರುವುದು, ರಕ್ತಸ್ರಾವ ಇದು ಡೆಂಗ್ಯೂ ರೋಗದ ಪ್ರಮುಖ ಲಕ್ಷಣವಾಗಿದ್ದು, ಇವು ಕಂಡು ಬಂದಲ್ಲಿ ತಕ್ಷಣ ಸಮೀಪದ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಚಿಕಿತ್ಸೆ ಪಡೆಯುವಂತೆ ಸಲಹೆ ನೀಡಿದರು. ಈ ವೇಳೆ ಆಶಾ ಕಾರ್ಯಕರ್ತೆಯರು ಸೇರಿದಂತೆ ಸಮುದಾಯ ಆರೋಗ್ಯ ಕೇಂದ್ರದ ಎಲ್ಲಾ ಸಿಬ್ಬಂದಿ ಹಾಜರಿದ್ದರು.

ಬೀರೇಶ್ ನಿಧನ



ಹೆಚ್.ಡಿ.ಕೋಟೆ, ಮೇ 17– ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ಬೀರೇಶ್(50) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂರನೇ ವರ್ಷದ ಪುಣ್ಯಸ್ಮರಣೆ



ಚೆಲುವರಾಜ್
ನೀವು ನಮ್ಮನ್ನಗಲಿ ಇಂದಿಗೆ
ಮೂರು ವರ್ಷ ಕಳೆದರೂ
ಸದಾ ನಿಮ್ಮ ನೆನಪಿನಲ್ಲಿರುವ
ಇಂತಿ ದುಃಖತಪ್ತರು:
ಕುಟುಂಬವರ್ಗದವರು ದಾಸನಕೊಪ್ಪಲು, ಮೈಸೂರು







ಶ್ರೀದತ್ತ ವೇಂಕಟೇಶ್ವರಸ್ವಾಮಿ ಕ್ಷೇತ್ರದ 25ನೆಯ ವಾರ್ಷಿಕೋತ್ಸವ

2024 ಮೇ 19 ರಿಂದ 24ರ ವರೆಗೆ

25ನೆಯ ವಾರ್ಷಿಕೋತ್ಸವ (ರಜೋತ್ಸವವನ್ನು) ವನ್ನು ನಮ್ಮ ಮೈಸೂರಿನ ಹೆಮ್ಮೆಯ ಅವಧೂತ ದತ್ತಪೀಠ ಶ್ರೀಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀದತ್ತ ವೇಂಕಟೇಶ್ವರಸ್ವಾಮಿ ಕ್ಷೇತ್ರವು ನೆರವೇರಿಸಿಕೊಳ್ಳುತ್ತಿರುವುದು ಸದ್ಭಕ್ತರೆಲ್ಲರ ಅಹೋಭಾಗ್ಯವೇ ಸರಿ.

ಈ ಮಹಾಕ್ಷೇತ್ರವು ಕಾರಣೀಕ ಕ್ಷೇತ್ರವು. ಪೂಜ್ಯ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಯವರು ಆಂಧ್ರಪ್ರದೇಶದ ನೂಜಿವೀಡು ಎಂಬಲ್ಲಿ ದೇವ ದೇವ ದತ್ತಾತ್ರೇಯಸ್ವಾಮಿಯ ಕುಂಭಾಭಿಷೇಕವನ್ನು ಮಾಡುತ್ತಿರುವಾಗ ಒಬ್ಬ ಭಕ್ತನಿಗೆ ಮಚಿಲೀಪಟ್ಟಣಂ ಮಂಗಿನಪೂಡಿ ಸಮುದ್ರತೀರದಲ್ಲಿ ಒಂದು ಚಿಕ್ಕ ಶ್ರೀವೇಂಕಟೇಶ್ವರ ಮೂರ್ತಿಯು ಲಭ್ಯವಾಯಿತು. ಆತನು ಅದನ್ನು ತೆಗೆದುಕೊಂಡು ಬಂದು ಕುಂಭಾಭಿಷೇಕವನ್ನು ನೆರವೇರಿಸಲು ಇನ್ನೇನು ಹೋರಡುತ್ತಿದ್ದ ಸ್ವಾಮೀಜಿಯವರ ಕೈಗೆ ಕೊಟ್ಟ. ಸ್ವಾಮೀಜಿಯವರು ಕಲಶವನ್ನು ಶಿರಸ್ಸಿನಮೇಲೂ, ಆ ಮೂರ್ತಿಯನ್ನು ಒಂದು ಕೈಯಲ್ಲಿಯೂ, ಇಟ್ಟುಕೊಂಡು ಮೇಲೆ ಹತ್ತಿ ಕುಂಭಾಭಿಷೇಕವನ್ನು ಮಾಡಿದರು. ಆನಂತರ ಈ ಚಿಕ್ಕಮೂರ್ತಿಗೆ ಮೈಸೂರುನಲ್ಲಿ ಒಂದು ಚಿಕ್ಕದಾದರೂ ಗುಡಿಯನ್ನು ನಿರ್ಮಾಣಮಾಡುತ್ತೇವೆ ಎಂದು ಸಂಕಲ್ಪಿಸಿ ಘೋಷಿಸಿದರು. ಆನಂತರ ಮೈಸೂರಿಗೆ ಹಿಂದಿರುಗಿ ಬಂದಾಗ ಮತ್ತೋರ್ವ ಭಕ್ತನು ಬಂದು ನನಗೆ ಆಶ್ರಮದಲ್ಲಿ ಒಂದು ಚಿಕ್ಕಜಾಗವನ್ನು ತೋರಿಸಿ. ನಾನು ಅಲ್ಲಿ ವೇಂಕಟೇಶ್ವರಸ್ವಾಮಿಯ ದೇವಸ್ಥಾನವನ್ನು ಕಟ್ಟಿಕೊಡುತ್ತೇನೆ- ಎಂದನು. ಆಗ ಸ್ವಾಮೀಜಿಯವರು "ಇದು ಶ್ರೀನಿವಾಸನ ಲೀಲೆಯೇ ಸರಿ" ಎಂದು ಭಾವಿಸಿ ಆಶ್ರಮ ಈಶಾನ್ಯಭಾಗದಲ್ಲಿ ಒಂದು ಬೃಹದಾಕಾರದ ದೇವಸ್ಥಾನವನ್ನೇ ನಿರ್ಮಾಣಮಾಡಿಸಿದರು. ಈ ಎಲ್ಲಾ ಸಂಘಟನೆಗೂ ಮೊದಲು ಸ್ವಾಮೀಜಿಯವರಿಗೆ ತಮ್ಮ ಕೋಣೆಯಿಂದ ಈಗ ದೇವಸ್ಥಾನವಿರುವ ಪ್ರದೇಶದಲ್ಲಿ ದೇವತೆಗಳು, ಗಂಧರ್ವರು ಮೇಲಿಂದ ಇಳಿದು ಬರುತ್ತಿದ್ದಂತೆಯೂ, ಸಾವಿರಾರು ಜಿಂಕೆಗಳೂ, ಗೋವುಗಳೂ ಅಲೆದಾಡುತ್ತಾ ಹಾಯಾಗಿ ಮೇಯುತ್ತಿದ್ದಂತೆಯೂ ಕಾಣಿಸುತ್ತಿತ್ತು. ಒಂದಾನೊಂದು ದಿನ ಸಾಕ್ಷಾತ್ತು ವೇಂಕಟೇಶ್ವರನೇ ಇಳಿದುಬಂದಂತೆಯೂ ಕೂಡಾ ಗೋಚರವಾಯಿತು. ಪುಷ್ಕರಿಣಿಯಲ್ಲಿ ಋಷಿಗಳು ಸ್ನಾನಮಾಡಿ ಶ್ರೀನಿವಾಸನಗೆ ಪೂಜೆಮಾಡುತ್ತಿದ್ದಂತೆಯೂ ಕಾಣಿಸಿದು. ಆಗಲೇ ಪೂಜ್ಯ ಶ್ರೀಸ್ವಾಮೀಜಿಯವರು ಶ್ರೀದತ್ತವೇಂಕಟೇಶ್ವರ ಸ್ವಾಮಿಯ ಬೃಹದ್ದೇವಾಲಯವನ್ನು ನಿರ್ಮಿಸಬೇಕೆಂದು ಸಂಕಲ್ಪಿಸಿದರು. ಭವ್ಯವಾದ ಆಲಯದ ನಿರ್ಮಾಣವು ಪೂರ್ಣಗೊಂಡಿತು. ಕುಂಭಾಭಿಷೇಕದ ಶುಭಮುಹೂರ್ತದಲ್ಲಿ ಮಧ್ಯಾಹ್ನದ ತೀಕ್ಷ್ಣಸೂರ್ಯನು ಸುಡಿತ್ತಿರುವಾಗ ಅಕಸ್ಮಾತ್ತಾಗಿ ಒಂದು ಸುತ್ತು ವಲಯವು ಏರ್ಪಟ್ಟಿದನ್ನು ಅಂದು ನೆರೆದಿದ್ದ ಸಾವಿರಾರುಮಂದಿ ಭಕ್ತರು ಪ್ರತ್ಯಕ್ಷವಾಗಿ ಕಂಡು ಪುಲಕಿತರಾದರು. ಅದೇ ಸಮಯದಲ್ಲಿ ಕೃಷ್ಣಪಾದಾಂಕಿತವಾದ ಮೂರು ಗರುಡಪಕ್ಷಿಗಳು ಬಂದು ದೇವಾಲಯದ ಸುತ್ತಲೂ ಮೂರು ಪ್ರದಕ್ಷಿಣೆಗಳನ್ನು ಮಾಡಿ ಹಾರಿಹೋದವು. ಈ ದೃಶ್ಯವನ್ನೂ ಕೂಡ ಕಣ್ತುಂಬಿಕೊಂಡು ಭಕ್ತರೆಲ್ಲರೂ ಪರವಶರಾದರು.

ಹೀಗೆ ಅದೆಷ್ಟೋ ಮಹಿಮೆಗಳುಳ್ಳ ನಮ್ಮೆಲ್ಲರ ಶ್ರೀದತ್ತವೇಂಕಟೇಶ್ವರ ಕ್ಷೇತ್ರದ ರಜತೋತ್ಸವವು ಬ್ರಹ್ಮಕಲಶಾಭಿಷೇಕವು, ಬ್ರಹ್ಮೋತ್ಸವವು, 2024 ಮೇ ತಿಂಗಳ 19 ರಿಂದ 24 ರ ವರೆಗೆ ನಡೆಯಲಿದೆ. ಆದ್ದರಿಂದ ಮೈಸೂರಿನ ಸದ್ಭಕ್ತರೆಲ್ಲರೂ ಈ ದಿವ್ಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಭಾಗವಹಿಸಿ ಶ್ರೀದತ್ತವೇಂಕಟೇಶ್ವರ ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಕೇಳಿಕೊಳ್ಳುತ್ತಿದ್ದೇವೆ. ಎಲ್ಲರಿಗೂ ಸಾದರದ ಆಹ್ವಾನ.



ಭಕ್ತಿಪೂರ್ವಕ ಅಭಿನಂದನೆಗಳೊಂದಿಗೆ
ಪ್ರವೀಣ್ ಗೋಯೆಲ್, ಮೋಹನ್ ಭಂಡಾರ್
ಸಯ್ಯಾಜಿ ರಾವ್ ರಸ್ತೆ, ಮೈಸೂರು - 570001

ಅವಧೂತ ದತ್ತ ಪೀಠ
ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ದತ್ತನಗರ, ಮೈಸೂರು
Tel: 0821 - 248 1122 • www.dattapeetham.org • facebook.com/sgspage

ಅಖಂಡ ಭಾರತವನ್ನಾಳಿದ ಕನ್ನಡದ ಮಣ್ಣಿನ ಮಗ, ಮಾಜಿ ಪ್ರಧಾನಿಗಳಾದ

ಶ್ರೀ ಹೆಚ್.ಡಿ. ದೇವೇಗೌಡರ

92ನೇ ಜನ್ಮ ದಿನದ ಶುಭಾಶಯಗಳು

ಇಂದು ಸಂಜೆ 6.00 ಗಂಟೆಗೆ ದೇವೇಗೌಡ ವೃತ್ತದಲ್ಲಿ (ಯರಗನಹಳ್ಳಿ ರಿಂಗ್ ರಸ್ತೆ)
ಜನ್ಮದಿನದ ಪ್ರಯುಕ್ತ ದೇವೇಗೌಡರ ಬೃಹತ್ ಭಾವಚಿತ್ರಕ್ಕೆ ಪುಷ್ಪವೃಷ್ಟಿ ಕಾರ್ಯಕ್ರಮವಿದ್ದು ಎಲ್ಲರಿಗೂ ಸ್ವಾಗತ



ಕವೀಶ್‌ಗೌಡ, ಸೋಮಶೇಖರ್, ಹೇಮಂತ್ ಕುಮಾರ್ ಗೌಡ, ಎಸ್.ಬಿ.ಎಂ. ಮಂಜು, ಪ್ರಶಾಂತ್‌ಗೌಡ
ಬೀಡನಹಳ್ಳಿ ಸತೀಶ್‌ಗೌಡ, ರಾಕೇಶ್‌ಗೌಡ, ಚೇತನ್ ಎಂ.ಈ., ರವಿ ಎ., ರಾಜ್‌ಕುಮಾರ್
ಗೋಕುಲ್ ಗೋವರ್ಧನ್, ಶಂಕ್ರೀಗೌಡ, ಕಿರಣ್ ಜೈರಾಮ್‌ಗೌಡ, ಬಿ.ಜಿ. ಶ್ರೀನಿವಾಸ್, ಸತೀಶ್‌ಗೌಡ
ಚೇತನ್ ಎಂ., ಸ್ವಾಮಿಗೌಡ, ಸಿದ್ದೇಶ್ವರ್, ವಾಸುಗೌಡ, ವಿವೇಕ್



@bhi design
97407 97701